1. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು, ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ):- ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್ 2013ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ರಾಜ್ಯ ಹಣಕಾಸು ವ್ಯವಹಾರಗಳ ಮತ್ತು ಸಾಮಾನ್ಯ ಹಾಗೂ ಸಾಮಾಜಿಕ ವಲಯದ ಮೇಲಿನ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

2. ವಿತ್ತೀಯ ಕಾರ್ಯಕಲಾಪಗಳು

2014-2015ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಕೆ.ಬಿ. ಪ್ರಸನ್ನಕುಮಾರ್(ಶಿವಮೊಗ್ಗ):- ಮಾನ್ಯ ಅಧ್ಯಕ್ಷರೆ, 2014-2015 ನೇ ಸಾಲಿನ ಆಯವ್ಯಯದ ಮೇಲೆ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಶ್ರೀಸಾಮಾನ್ಯನಿಗೆ ಹೊರೆಯಾಗದ ಮತ್ತು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗುವಂತೆ ವೈಜ್ಞಾನಿಕವಾಗಿ ಚಿಂತನೆಯನ್ನು ನಡೆಸಿ ಸಾಮಾಜಿಕ ನ್ಯಾಯಕ್ಕೆ ಆದ್ಯತೆಯನ್ನು ನೀಡಿದಂಥ ಪ್ರಗತಿ ಪರ ಆಯವ್ಯಯವನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು ನೀಡಿದ್ದಾರೆ. ಅದಕ್ಕಾಗಿ ಅವರಿಗೆ ಮಲೆನಾಡಿನ ಎಲ್ಲಾ ಜನತೆಯ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ನಾಡಿನ ಅಭಿವೃದ್ಧಿಗಾಗಿ ಹಾಗೂ ಬಡತನ ನಿವಾರಣೆಗಾಗಿ ಸಾಕಷ್ಟು ಅಂಶಗಳನ್ನು ಈ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗಿದೆ. ವಿಶೇಷವಾಗಿ 'ಅನ್ನದಾತನೊಂದಿಗೆ ನಮ್ಮ ಸರ್ಕಾರ' ಮುಖ್ಯವಾಗಿ ಕೃಷಿ ಬೆಲೆ ಆಯೋಗವನ್ನು ರಚನೆ ಮಾಡಲು ಪ್ರಯತ್ನ ಮಾಡಿರುವಂಥದ್ದು, ಕೃಷಿ ವಿಶ್ವವಿದ್ಯಾಲಯ ಹಾಗೂ ಕೃಷಿ ಪದವಿ ಕಾಲೇಜುಗಳಲ್ಲಿ ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ. 40 ಮೀಸಲಾತಿಯನ್ನು

ಇಟ್ಟಿರುವುದು ನಿಜಕ್ಕೂ ಸಂತೋಷದ ಸಂಗತಿ. ಹಾನಿಗೊಳಗಾದ ಅಡಿಕೆ ಮತ್ತು ತೆಂಗಿನ ತೋಟಗಳ ಪುನಃಶ್ಚೇತನಕ್ಕೆ ಒತ್ತು ನೀಡಿರುವುದೂ ಕೂಡ ತುಂಬಾ ಒಳ್ಳೆಯ ಕೆಲಸವಾಗಿದೆ. ನಮ್ಮ ಕ್ಷೇತ್ರಗಳಲ್ಲಿ ಕೆರೆಗಳ ಸಂಪೂರ್ಣ ಅಭಿವೃದ್ಧಿಗೆ ಒತ್ತು ಕೊಟ್ಟಿರುವುದು ಕೂಡ ಮುಂದಿನ ದಿನಗಳಲ್ಲಿ ಒಂದು ಒಳ್ಳೆಯ ವ್ಯವಸ್ಥೆಯಾಗುತ್ತದೆ. ಅದೇ ರೀತಿ ನಿವೃತ್ತ ಪತ್ರಕರ್ತರಿಗೆ ಹಿಂದೆ ಏನು 3 ಸಾವಿರ ರೂ.ಗಳ ಪಿಂಚಣಿಯನ್ನು ಕೊಡಲಾಗುತ್ತಿತ್ತೋ ಅದನ್ನು 6 ಸಾವಿರ ರೂ.ಗಳಿಗೆ ಏರಿಸಿರುವುದೂ ಕೂಡ ತುಂಬಾ ಒಳ್ಳೆಯ ಕೆಲಸವಾಗಿದೆ. ಎಲ್ಲಾ ಪತ್ರಕರ್ತರಿಗೆ ಆರೋಗ್ಯ ವಿಮೆಯನ್ನು ಈ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗಿದೆ. ಎಲ್ಲಾ ಸಹಕಾರಿ ಬಂಧುಗಳಿಗೂ ಕೂಡ ಆರೋಗ್ಯದ ಭದ್ರತೆಯನ್ನು, 1 ಸಾವಿರ ರೂ.ಗಳನ್ನು ವರ್ಷಕ್ಕೆ ಕಟ್ಟಿದರೆ ಎಲ್ಲಾ ಸಹಕಾರಿ ಬಂಧುಗಳಿಗೂ ಕೂಡ ನಗರ ಪ್ರದೇಶಗಳು ಸೇರಿದಂತೆ ಅವರ ಆರೋಗ್ಯದ ಭದ್ರತೆಯ ಬಗ್ಗೆ ಸರ್ಕಾರ ಗಮನ ಹರಿಸಿರುವುದು ತುಂಬಾ ಸಂತೋಷಕರ ವಿಷಯವಾಗಿದೆ. ಪೋಲೀಸ್ ವಿಮೆಯನ್ನೂ ಕೂಡ 10 ಲಕ್ಷದಿಂದ 20 ಲಕ್ಷ ರೂ.ಗಳಿಗೆ ಏರಿಸಿರುವುದು ಇದೆ. ಇದೇ ರೀತಿ ಇನ್ನೂ ಹತ್ತು ಹಲವಾರು ಯೋಜನೆಗಳನ್ನು ನಾಡಿನ ಜನತೆಗೆ ಕೊಟ್ಟಿರುವುದು ತುಂಬಾ ಸಂತೋಷಕರ ಮತ್ತು ಪ್ರಗತಿಪರ ಆಯವ್ಯಯವಾಗಿದೆ. ಆದರೂ ಕೂಡ ನಮ್ಮ ಈ ಆಯವಯ್ಯದಲ್ಲಿ ಹೊಸದಾಗಿ ಕನಿಷ್ಠ 500 ಸರ್ಕಾರಿ ಹೈಸ್ಕೂಲ್‌ಗಳನ್ನಾದರೂ ಪ್ರಾರಂಭ ಮಾಡುವಂಥ ಪ್ರಯತ್ನವನ್ನು ಮಾಡಬೇಕು. ನಗರದ ಸಾಕಷ್ಟು ಸರ್ಕಾರಿ ಶಾಲೆಗಳಲ್ಲಿ ಹೆಚ್ಚಿನ ಬಿಲ್ಡಿಂಗ್‌ಗಳಿದ್ದು ಅವೆಲ್ಲವು ಬಿದ್ದುಹೋಗುವ ಪರಿಸ್ಥಿತಿಯಲ್ಲಿವೆ. ಅದೇ ರೀತಿ ಶೌಚಾಲಯಗಳೂ ಕೂಡ ಸಾಕಷ್ಟು ಅವ್ಯವಸ್ಥೆಯಲ್ಲಿವೆ. ಇದನ್ನೂ ಕೂಡ ಸರಿಪಡಿಸುವಂಥ ಒಂದು ಪ್ರಯತ್ನವನ್ನು ನಮ್ಮ ಸರ್ಕಾರ ಮಾಡಬೇಕಾಗಿದೆ. ರಾಜ್ಯದಲ್ಲಿ ಗ್ಯಾಸ್ ಸಂಪರ್ಕವನ್ನು ಹೊಂದಿರುವ ಬಿ.ಪಿ.ಎಲ್. ಕುಟುಂಬಗಳವರಿಗೆ ಕನಿಷ್ಠ 2 ಲೀಟರ್ ಸೀಮೆಎಣ್ಣೆಯನ್ನು ಕೊಡುವಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕಿದೆ. ಏಕೆಂದರೆ ಇವರುಗಳಿಗೆ ಸೀಮೆಎಣ್ಣೆ ಇಲ್ಲದೆ ತುಂಬಾ ಪರದಾಡುವಂಥ ಪರಿಸ್ಥಿತಿಯಿದೆ. ಆದುದರಿಂದ ಗ್ಯಾಸ್ ಸಂಪರ್ಕವನ್ನು ಹೊಂದಿರುವ ಬಿ.ಪಿ.ಎಲ್. ಕುಟುಂಬಗಳವರಿಗೆ ಕನಿಷ್ಠ 2 ಲೀಟರ್

ಸೀಮೆಎಣ್ಣೆಯನ್ನು ಕೊಡುವಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕಿದೆ. ಇನ್ನು ಎ.ಪಿ.ಎಲ್. ಕಾರ್ಡ್‌ದಾರರಿಗೆ, ಇತ್ತ ಕಡೆ ಅವರು ಬಿ.ಪಿ.ಎಲ್. ನವರೂ ಅಲ್ಲ, ಅತ್ತ ಕಡೆ ಶ್ರೀಮಂತರೂ ಕೂಡ ಆಗಿರದ ಮಧ್ಯಮ ವರ್ಗದವರಾಗಿದ್ದಾರೆ. ಈ ಮದ್ಯಮ ವರ್ಗದ ಜನರಿಗೆ ಕನಿಷ್ಠ 10 ಕೆ.ಜಿ. ಅಕ್ಕಿ ಮತ್ತು 2 ಕೆ.ಜಿ. ಸಕ್ಕರೆಯನ್ನು ಕೊಡಿಸುವಂಥ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡಬೇಕಾಗಿದೆ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಆಚಾರ್ಯತ್ರಯರ, ಶಂಕರಾಚಾರ್ಯರು, ಮಧ್ವಾಚಾರ್ಯರು, ರಾಮಾನುಜರು, ಹೀಗೆ ಈ ಆಚಾರ್ಯತ್ರಯರ ನೆನಪಿಗಾಗಿ ಒಂದು ಭವನವನ್ನು ನಿರ್ಮಾಣ ಮಾಡುವಂಥ ಪ್ರಯತ್ನವನ್ನು ಮಾಡುವುದಕ್ಕೆ ನಮ್ಮ ಸರ್ಕಾರ ಯೋಚನೆಯನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ಅದೇ ರೀತಿ ಸರ್ಕಾರಿ ಮಹಿಳಾ ಇಂಜಿನಿಯರಿಂಗ್ ಕಾಲೇಜು, ನಮ್ಮ ಶಿವಮೊಗ್ಗ ನಗರದಲ್ಲಿ ಮತ್ತು ಪೋಸ್ಟ್ ಗ್ರಾಜ್ಯುಯೇಟ್ ಕೋರ್ಸ್‌ನ್ನು ನಮ್ಮ ಶಿವಮೊಗ್ಗ ನಗರದಲ್ಲಿ ಪ್ರಾರಂಭ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ತುರ್ತಾಗಿ ಕಾರ್ಮಿಕರು ಮತ್ತು ಅವರ ಕುಟುಂಬ ವರ್ಗದವರಿಗೆ ಅನುಕೂಲವಾಗುವುದಕ್ಕೋಸ್ಕರ ಈಗೇನು ಎಲ್ಲಾ ಕಡೆಗಳಲ್ಲಿಯೂ ಇ.ಎಸ್.ಐ. ಆಸ್ಪತ್ರೆಗಳಿವೆಯೋ ಅದೇ ರೀತಿ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಈಗಿಲ್ಲ. ಇದರಿಂದಾಗಿ ಬಹಳ ತೊಂದರೆಗಳಾಗುತ್ತಿವೆ. ಕೆಲವೇ ಆಸ್ಪತ್ರೆಗಳಿಗೆ ಹೋಗುವುದಕ್ಕೆ ಹೇಳುತ್ತಾರೆ. ಆದರೆ ಅಲ್ಲಿಗೆ ಅವರು ಹೋದರೆ ಸರಿಯಾದ ಚಿಕಿತ್ಸೆ ಸಿಗುವುದಿಲ್ಲ. ದಯಮಾಡಿ ಈ ಒಂದು ಆಸ್ಪತ್ರೆಯನ್ನು ಕಾರ್ಮಿಕರಿಗೆ ಮತ್ತು ಅವರ ಕುಟುಂಬವರ್ಗದವರಿಗೆ ಕೊಡಿಸುವಂಥ ಪ್ರಯತ್ನವನ್ನು ಮಾಡಬೇಕಾಗಿದೆ. ನಮ್ಮ ನಗರಕ್ಕೆ ಸಮೀಪವಿರುವ ಗಾಜನೂರಿನಲ್ಲಿ ಮತ್ತು ಕೊಪಿಶೆಟ್ಟಿಕೊಪ್ಪ ಎನ್ನುವ ಒಂದು ಕೆರೆಯೇನಿದೆ ಅದು ತುಂಬಾ ದೊಡ್ಡದಾಗಿದೆ ಪ್ರವಾಸೋದ್ಯಮ ಇಲಾಖೆಯಿಂದ ಅಲ್ಲಿ ಒಂದು ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡಿ ಬೋಟಿಂಗ್ ಮತ್ತು ವಾಟರ್ ಪಾರ್ಕ್‌ನ್ನು ಮಾಡಿ ಒಂದು ಒಳ್ಳೆಯ ವ್ಯವಸ್ಥೆಯನ್ನು ಮಾಡಿಕೊಟ್ಟರೆ ನಿಜಕ್ಕೂ ಶಿವಮೊಗ್ಗ ನಗರಕ್ಕೆ ಬಹಳ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಈಗ

ಒಂದು ಒಳ್ಳೆಯ ಆಯವ್ಯಯವನ್ನು ನಮ್ಮ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಈ ಆಯವ್ಯಯದಲ್ಲಿ ಇನ್ನೂ ಸಾಕಷ್ಟು ವಿಷಯಗಳನ್ನು ಸೇರಿಸಿಕೊಂಡರೆ ತುಂಬಾ ಸಂತೋಷವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತಾ ನನಗೆ ಆಯವ್ಯಯದ ಮೇಲೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್ (ನಿಪ್ಪಾಣಿ):- ಮಾನ್ಯ ಅಧ್ಯಕ್ಷರೆ, ಪ್ರಥಮ ಬಾರಿಗೆ ಆಯ್ಕೆಯಾಗಿ ಪ್ರಥಮ ಆಯವ್ಯಯದ ಬಗ್ಗೆ ಮಾತನಾಡುವುದಕ್ಕೆ ವಿಶೇಷವಾಗಿ ಮಹಿಳೆಯರಿಗೆ ಅವಕಾಶ ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಅದೇ ರೀತಿಯಾಗಿ ಈ ವರ್ಷದ ಆಯವ್ಯಯದಲ್ಲಿ ಅನೇಕ ವಿಷಯಗಳು-ಸನ್ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ ಆಯವ್ಯಯದಲ್ಲಿ ಅನೇಕ ವಿಷಯಗಳು ಸ್ವಾಗತಾರ್ಹವಾಗಿರುವಂಥದ್ದಾಗಿದೆ. ಆದರೂ ಕೂಡ ಕೆಲವೊಂದು ವಿಚಾರಗಳನ್ನು ಹೇಳಬಯಸುವುದೇನೆಂದರೆ, ನಮ್ಮ ಭಾರತ ಮಾತೆಯ ಮಣ್ಣಿನ ಮಗ, ಅದೇ ರೀತಿ ನಮ್ಮ ಭಾರತಾಂಬೆಯ ಆಧಾರ ಸ್ಥಂಭ, ನಮ್ಮ ಭಾರತದ ಬೆನ್ನೆಲುಬು, ನಮ್ಮೆಲ್ಲರ ಅನ್ನದಾತ ರೈತನೆಂದು ನಾವು ಹೇಳುತ್ತೇವೆ. ಆದರೆ ಒಂದು ಮನೆ ಸಂತೃಪ್ತಿಯಿಂದ, ಶಾಂತಿಯಿಂದ ಇರಬೇಕೆಂದರೆ ಆ ಮನೆ ಮಗಳು ಸಂತೋಷದಿಂದ, ಸಮೃದ್ಧಿಯಿಂದ, ಸಂತೃಪ್ತಿಯಿಂದ ಇದ್ದರೆ ಆ ತವರುಮನೆ ಶಾಂತವಾಗಿರುತ್ತದೆ ಎನ್ನುವುದನ್ನು ನಾವು ಕೇಳಿದ್ದೇವೆ. ಅದೇ ರೀತಿಯಾಗಿ ಭಾರತದಲ್ಲಿ ರೈತ ಸಂತೋಷವಾಗಿ, ಸುಖದಿಂದ, ಸಮಾಧಾನದಿಂದ ಇದ್ದರೆಂದರೆ ನಮ್ಮ ಭಾರತ ದೇಶ ಕೂಡ ಸುಖ ಸಮೃದ್ಧಿಯಿಂದ ಇರುವುದಕ್ಕೆ ಸಾಧ್ಯವೆಂಬುದು ನನ್ನ ಅನಿಸಿಕೆಯಾಗಿದೆ. ಅದೇ ರೀತಿಯಾಗಿ ಇಲ್ಲಿ ರೈತರಿಗೆ ಆಯವ್ಯಯದಲ್ಲಿ ನೋಡಿದಾಗ ಅಲ್ಪ ಬಡ್ಡಿ ದರದಲ್ಲಿ ಕೃಷಿ ಸಾಲ, ಉತ್ತಮ ತಳಿಯ ಬೀಜಗಳ ಪೂರೈಕೆ, ರಸಗೊಬ್ಬರ, ಕೃಷಿ ಉಪಕರಣಗಳ ಸರಬರಾಜು, ಇವೆಲ್ಲವೂ ಕೂಡ ಸ್ವಾಗತಾರ್ಹವಾಗಿದ್ದರೂ ಕೂಡ ಇವನ್ನೆಲ್ಲವನ್ನೂ ಕೂಡ ಸರ್ಕಾರದಿಂದ ಒದಗಿಸಿದರೂ ರೈತನಿಗೆ ಬೇಕಾಗಿರುವುದು ಮುಖ್ಯವಾಗಿ ನೀರು ಮತ್ತು ವಿದ್ಯುತ್. ಈ ರೀತಿಯಾಗಿ ರೈತನಿಗೆ ನೀರಿನ ವ್ಯವಸ್ಥೆ ಮತ್ತು ವಿದ್ಯುತ್ತಿನ

ವ್ಯವಸ್ಥೆಯನ್ನು ಮಾಡಿಕೊಟ್ಟರೆ ಆ ರೈತ ಇನ್ನೂ ತುಂಬಾ ಹೆಚ್ಚಿನ ಪರಿಶ್ರಮವನ್ನು ಹಾಕಿ ಒಂದು ಒಳ್ಳೆಯ ರೀತಿಯಲ್ಲಿ ಅವನು ಬೇಸಾಯವನ್ನು ಮಾಡಬಹುದು ಎಂಬುದು ನನ್ನ ಅನಿಸಿಕೆಯಾಗಿದೆ. ಅದೇ ರೀತಿಯಾಗಿ ನೀರು ಬೇಕೆಂದರೆ ಅದಕ್ಕೆ ವಿದ್ಯುತ್ ಬೇಕಾಗುತ್ತದೆ. ಈ ವಿದ್ಯುತ್ ಉತ್ಪಾದನೆಗೆ ಮಳೆ ಬರುವುದೂ ಕೂಡ ಬಹಳ ಅತಿ ಮುಖ್ಯವಾಗಿರುತ್ತೆ. ಮಳೆ ಬೇಕೆಂದರೆ ನಮ್ಮ ಪರಿಸರದಲ್ಲಿ ಗಿಡಮರಗಳು ಬಹಳಷ್ಟು ಇರಬೇಕಾದುದು ಮುಖ್ಯವಾಗಿರುತ್ತದೆ. ಆ ಗಿಡಮರಗಳು ಬೇಕಾಯಿತೆಂದರೆ ಮತ್ತೆ ನಾವು ರೈತನಲ್ಲಿಗೆ ಬರುತ್ತೇವೆ. ಆದರೆ ಇಂಥ ಪರಿಸ್ಥಿತಿಯಲ್ಲಿ ಸರ್ಕಾರದ ಅನುಕೂಲಗಳು ಇದ್ದರೂ ಕೂಡ ಅನೇಕ ಆತ್ಮಹತ್ಯೆ ಪ್ರಸಂಗಗಳು ನಡೆದಿರುವುದನ್ನು ನಾವು ನೋಡುತ್ತೇವೆ. ರೈತರು ಬೆಳೆದಂಥ ಬೆಳೆಗೆ ಒಳ್ಳೆಯ ಬೆಲೆ ಕೂಡ ಇಲ್ಲದೇ ಇರುವಂಥ ಸಂಕಷ್ಟ ಪರಿಸ್ಥಿತಿಯಲ್ಲಿರುವ ರೈತನನ್ನು ನಾವು ನೋಡುತ್ತೇವೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, ರೈತರಿಗೆ ಹೇಗೆ ದೇವರಾಜ ಅರಸು ಅಭಿವೃದ್ಧಿ ನಿಗಮ, ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮ, ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮಗಳಿಂದ ಸಣ್ಣ ಸಣ್ಣ ರೈತರುಗಳಿಗೆ ನೀರಾವರಿ ಯೋಜನೆಗಳನ್ನು ಕಲ್ಪಿಸುತ್ತಾರೋ ಅದೇ ರೀತಿಯಾಗಿ ನಮ್ಮ ಜನರಲ್ಲಿರತಕ್ಕಂಥ ಸಾಮಾನ್ಯ ಸಣ್ಣ ರೈತರುಗಳಿಗೆ ನೀರಾವರಿ ವ್ಯವಸ್ಥೆಯನ್ನು ಸರ್ಕಾರದಿಂದ ಒದಗಿಸಿಕೊಡಬೇಕು ಮತ್ತು ಇದಕ್ಕೆ ಪೂರಕವಾಗಿ ವಿದ್ಯುತ್‌ನ ವ್ಯವಸ್ಥೆಯನ್ನೂ ಕೂಡ ಮಾಡಬೇಕು. ಅದಕ್ಕೋಸ್ಕರವೇ ರೈತರಿಗೋಸ್ಕರ ಪ್ರತ್ಯೇಕವಾಗಿ ಒಂದು ಪವರ್ ಗ್ರಿಡ್ ಮತ್ತು ಟ್ರಾನ್ಸ್‌ಫಾರ್ಮರ್‌ಗಳ ವ್ಯವಸ್ಥೆಯನ್ನು ಮಾಡಿ ಅವರುಗಳಿಗೆ ಒಳ್ಳೆಯ ನೀರು ಮತ್ತು ವಿದ್ಯುತ್ ಪೂರೈಕೆ ಮಾಡುವಂತಾದರೆ ನಮ್ಮ ರೈತರಿಗೆ ನಾವು ನ್ಯಾಯ ಕೊಟ್ಟಂತಾಗುತ್ತದೆ. ಎಂಬುದು ನನ್ನ ಅನಿಸಿಕೆಯಾಗಿದೆ. ಇದರ ಜೊತೆಗೆ ನಮ್ಮ ಭೂತಾಯಿಯ ಆರೋಗ್ಯವನ್ನು ಕಾಪಾಡುವುದೂ ಕೂಡ ಅಷ್ಟೇ ಮುಖ್ಯವಾದುದು. ನಿನ್ನೆಯ ದಿವಸ ಸಹೋದರರಾದಂಥ ಮಾನ್ಯ ಕಾರ್‌ಜೋಳ್‌ರವರು ಸವಳು–ಜವಳು ಭೂಮಿಯ ಬಗ್ಗೆ ಪ್ರಸ್ತಾಪ ಮಾಡಿದರು. ನಮ್ಮಲ್ಲಿ ಎಷ್ಟೋ ಕಡೆಗಳಲ್ಲಿ ಭೂಮಿಯಲ್ಲಿರುವ ನೀರಿನಲ್ಲಿ ಉಪ್ಪಿನಂಶ

ಜಾಸ್ತಿಯಾಗಿ ಅಂಥ ಕಡೆಗಳಲ್ಲಿ ಸವಳು ಭೂಮಿ ಇರುವುದನ್ನು ನಾವು ನೋಡುತ್ತಿದ್ದೇವೆ. ಅದಕ್ಕಾಗಿ ನಮ್ಮ ಭಾರತೀಯ ಪರಂಪರೆಯ ಸಾವಯುವ ಕೃಷಿಗೆ ಒತ್ತನ್ನು ಕೊಟ್ಟು ಮತ್ತು ಗೋವು ಆಧಾರಿತ ಕೃಷಿಗೆ ಒತ್ತನ್ನು ಕೊಡುವಂಥ ನಿಟ್ಟಿನಲ್ಲಿ ನಮ್ಮ ಸರ್ಕಾರದ ಕಾರ್ಯಕ್ರಮಗಳು ಆಗಬೇಕು ಎನ್ನುವಂಥ ಒಂದು ವಿನಂತಿಯಿದೆ. ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ನಾವು ಭಾರತವನ್ನು ಹಳ್ಳಿಗಳ ದೇಶ ಎಂದು ಗುರುತಿಸುತ್ತೇವೆ, ಭಾರತ ರೈತರ ದೇಶ ಎಂದು ಗುರುತಿಸುತ್ತೇವೆ. ಈ ಒಂದು ರೈತರು ಬೆಳೆಯುವಂತಹ ಬೆಳೆಯನ್ನು ಮಾರುಕಟ್ಟೆಗೆ ಪೂರೈಸುವಂತಹ ನಿಟ್ಟಿನಲ್ಲಿ ಈಗಾಗಲೇ ಸರ್ಕಾರ ರಸ್ತೆಗಳ ಯೋಜನೆಗಳನ್ನು ಹಾಕಿಕೊಂಡರೂ ಸಹ ಇನ್ನೂ ಹೆಚ್ಚಿನ ರೀತಿಯಲ್ಲಿ ಅವರನ್ನು ಸಂಕಷ್ಟದಿಂದ ಪಾರು ಮಾಡುವುದಕ್ಕೆ ಇನ್ನೂ ಎಲ್ಲಾ ಇಲಾಖೆಗಳಿಂದ ಲೋಕೋಪಯೋಗಿ ಇಲಾಖೆಯಿರಬಹದು, ಪಂಚಾಯತ್ ರಾಜ್ ಇಲಾಖೆಯಿರಬಹುದು, ಸಣ್ಣ ನೀರಾವರಿ ಮತ್ತು ಬೃಹತ್ ನೀರಾವರಿ ಇಲಾಖೆಗಳ ಮುಖಾಂತರ ಇನ್ನೂ ಹೆಚ್ಚಿನ ರೀತಿಯಲ್ಲಿ ಅವರಿಗೆ ಮಾರುಕಟ್ಟೆ ವ್ಯವಸ್ಥೆ ಮಾಡುವುದಕ್ಕೋಸ್ಕರ ರಸ್ತೆ ವ್ಯವಸ್ಥೆಯನ್ನು ಮಾಡಿಕೊಡಬೇಕು ಎನ್ನುವುದು ನನ್ನ ಕಳಕಳಿಯ ವಿನಂತಿ.

ಎರಡನೆಯದಾಗಿ, ಆರೋಗ್ಯ ಇಲಾಖೆಯನ್ನು ತೆಗೆದುಕೊಂಡರೆ "ಆರೋಗ್ಯವೇ ಭಾಗ್ಯ" ಎಂದು ನಾವು ಹೇಳುತ್ತೇವೆ. ಆರೋಗ್ಯ ಚೆನ್ನಾಗಿತ್ತು ಎಂದರೆ ನಾವು ಒಳ್ಳೆಯ ಸಕಾರಾತ್ಮಕ ವಿಚಾರಗಳನ್ನು ಮಾಡಬಹುದು, ಒಳ್ಳೆಯ ಚರ್ಚೆಗಳನ್ನು ಮಾಡಬಹುದು, ಈ ರೀತಿಯಾಗಿ ಇವತ್ತಿನ ದಿವಸ ನಮ್ಮ ಬದುಕು ಯಾಂತ್ರಿಕವಾದಂತಹ ಬದುಕಾಗಿದೆ. ಬೆಳೆಗ್ಗೆ ಎದ್ದ ತಕ್ಷಣ ಯಾವ ರೀತಿಯಾಗಿ ಒಂದು ಬಟನ್ ಆನ್ ಮಾಡಿದರೆ ಯಂತ್ರ ಪ್ರಾರಂಭವಾಗಿ, ಬಟನ್ ಆಫ್ ಮಾಡಿದಾಗ ಯಂತ್ರ ನಿಲ್ಲುತ್ತದೋ ಅ ರೀತಿ ನಮ್ಮ ಬದುಕು ಕೂಡ ಆಗಿರುವುದರಿಂದ ಈ ಯಾಂತ್ರಿಕ ಬದುಕಿನಲ್ಲಿ, ಒತ್ತಡದ ಬದುಕಿನಲ್ಲಿ ಮತ್ತು ವಿಶೇಷವಾಗಿ ನಮ್ಮ ಆಹಾರ ಪದಾರ್ಥಗಳು ಹೇಗಿದೆ ಎಂದರೆ ಔಷಧಿಯುಕ್ತವಾದ ಆಹಾರ ಸೇವನೆಯಿಂದ ಹುಟ್ಟತಕ್ಕಂತಹ ಮಗುವಿನ ಮೇಲೆ ಪರಿಣಾಮ ಬೀರುವುದನ್ನು ನಾವು ಎಷ್ಟೋ ಕಡೆಗಳಲ್ಲಿ

ನೋಡುತ್ತಿದ್ದೇವೆ. ಆ ರೀತಿಯಾಗಿ ಆರೋಗ್ಯ ಸರಿಯಾಗಿರಬೇಕು ಎನ್ನುವ ದೃಷ್ಟಿಕೋನದಿಂದ ನಾವು ಸರ್ಕಾರದಿಂದ ಅನೇಕ ಆಸ್ಪತ್ರೆಗಳನ್ನು ಮಾಡಿ ಅಲ್ಲಿ ಜನರಿಗೆ, ಮಧ್ಯಮ ವರ್ಗದವರಿಗೆ, ಬಡ ಜನತೆಗೆ ಒಳ್ಳೆಯ ಅವಕಾಶ ಸಿಗಬೇಕು ಎಂದು ಅನೇಕ ಯೋಜನೆಗಳನ್ನು ಈಗಾಗಲೇ ಹಾಕಿಕೊಂಡಿದ್ದಾರೆ. ಆದರೂ ಕೂಡ ಈ ಒಂದು ದುಬಾರಿಯಾದಂತಹ ವ್ಯವಸ್ಥೆಯಲ್ಲಿ ನಮ್ಮ ಜನ ಒಂದು ವಿಶ್ವಾಸವನ್ನು ಇಟ್ಟು, ಗೌರವವನ್ನು ಇಟ್ಟು ಸರ್ಕಾರಿ ಆಸ್ಪತ್ರೆಗಳಿಗ ತಮ್ಮ ಆರೋಗ್ಯದ ಚಿಕಿತ್ಸೆಗಾಗಿ ಹೋಗುತ್ತಾರೆ. ಆ ಒಂದು ದೃಷ್ಟಿಯಲ್ಲಿ ನೋಡಿದಾಗ ನನ್ನ ಕ್ಷೇತ್ರದ ಉದಾಹರಣೆಯನ್ನು ತೆಗೆದುಕೊಂಡಾಗ ಆರೋಗ್ಯ ಇಲಾಖೆಯಲ್ಲಿ ಒಳ್ಳೆಯ ಡಾಕ್ಟರ್‌ಗಳು ಇದ್ದಾರೆ, ಒಳ್ಳೆಯ ತರಬೇತಿ ಪಡೆದಂತಹ ಸಿಸ್ಟರ್‌ಗಳೂ ಸಹ ಇದ್ದಾರೆ. ಒಳ್ಳೆಯ ಜನ ಕೂಡ ಅಲ್ಲಿ ಹೋಗುತ್ತಾರೆ. ಆದರೆ, ಅಲ್ಲಿ ಬೇಕಾಗುವಂತಹ ಮೂಲಭೂತ ಸೌಕರ್ಯಗಳ ಕೊರತೆಯಿದೆ. ನಾನು ಕಾರದಗ ಎನ್ನುವ ಒಂದು ಹಾಸ್ಪಿಟಲ್‌ಗೆ ಹೋದಾಗ ಅಲ್ಲಿ ಡಾಕ್ಟರ್‌ಗೆ ಇರುವಂತಹ ವ್ಯವಸ್ಥೆ ನೋಡಿದೆ. ಅವರಿಗೆ ವಸತಿ ಗೃಹಗಳಿರಲಿಲ್ಲ, ಅಲ್ಲಿ ಸಿಸ್ಟರ್‌ಗಳು ಇರುವಂತಹ ವಸತಿ ಗೃಹಗಳನ್ನು ತೋರಿಸುವುದಕ್ಕೆ ನನ್ನನ್ನು ಕರೆದುಕೊಂಡು ಹೋದಾಗ ನಾವು ಮಾತನಾಡುತ್ತಾ ನಿಂತಿದ್ದಾಗ ಅದರ ಒಂದು ಛಾವಣಿ ಕಳಚಿ ನಮ್ಮ ಎದುರಿಗೆ ಬಿದ್ದಿತ್ತು. ಈ ರೀತಿಯಾದಂತಹ ವ್ಯವಸ್ಥೆ ಇರಬೇಕಾದರೆ ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಒಳ್ಳೆಯ ಡಾಕ್ಟರ್‌ಗಳ ಅವಶ್ಯಕತೆಯಿದೆ. ಇನ್ನೂ ಹೆಚ್ಚಿನ ಡಾಕ್ಟರ್‌ಗಳನ್ನು ಆಸ್ಪತ್ರೆಗಳಿಗೆ ಭರ್ತಿ ಮಾಡಬೇಕು, ಅವರುಗಳಿಗೆ ಉಳಿದುಕೊಳ್ಳುವುದಕ್ಕೆ ವಸತಿ ಗೃಹಗಳ ವ್ಯವಸ್ಥೆಯಾಗಬೇಕು. ಏಕೆಂದರೆ, ರಾತ್ರಿ ಹೊತ್ತಿನಲ್ಲಿ patients ಬಂದಾಗ ಡಾಕ್ಟರ್‌ಗಳು ಅಲ್ಲಿ ಇರದೇ ಇರುವ ಕಾರಣದಿಂದ ಅನೇಕ ತೊಂದರೆಗಳಾಗುತ್ತವೆ. ಅವರಿಗೆ ಬೇಕಾಗುವಂತಹ ಕಟ್ಟಡ, ಅವರಿಗೆ ಬೇಕಾಗುವಂತಹ ವಸತಿ ಗೃಹಗಳು, ಅಲ್ಲಿ ಬೇಕಾಗುವಂತಹ ನೀರಿನ ವ್ಯವಸ್ಥೆ ಈ ರೀತಿಯಾದಂತಹ ವ್ಯವಸ್ಥೆಗಳನ್ನು ತಾವು ಮಾಡಿಕೊಟ್ಟರೆ ನಿಜವಾಗಲೂ ನಮ್ಮ ಸರ್ಕಾರದಿಂದ ಒಳ್ಳೆಯ ಸೇವೆಯಾದಂತೆ ಆಗುತ್ತದೆ.

ಅದೇ ರೀತಿಯಾಗಿ, ಮುಂದೆ ಬಂದು ನಾವು ಬಜೆಟ್‌ನ ಬುಕ್‌ನಲ್ಲಿ ನೋಡಿದಾಗ ಅನೇಕ ಜಿಲ್ಲಾ ಕೇಂದ್ರಗಳಲ್ಲಿ generic ಔಷಧಿಗಳ ಮಳಿಗೆಗಳನ್ನು ಸ್ಥಾಪಿಸಲಾಗುತ್ತದೆ ಎಂದು ಹೇಳಿದ್ದಾರೆ. ಅದು ತುಂಬಾ ಸ್ವಾಗತಾರ್ಹವಾದುದು. ಏಕೆಂದರೆ, ಪ್ರೈವೇಟ್ ಮೆಡಿಕಲ್ ಶಾಪ್‌ಗಳಲ್ಲಿ ನಾವು ತೆಗೆದುಕೊಳ್ಳುವಂತಹ ಔಷಧಿಗಳು ಹಾಗೂ generic ಔಷಧಗಳು ಒಂದೇ ಇದ್ದರೂ ಸಹ ಅಲ್ಲಿ ಬೆಲೆಯಲ್ಲಿ ಅಜಗಜಾಂತರ ವ್ಯತ್ಯಾಸವಿರುವುದರಿಂದ generic ಔಷಧ ಮಳಿಗೆಗಳು ಆಗುವುದು ಬಹಳಷ್ಟು ಅವಶ್ಯಕವಾಗಿದೆ. ಈ ಔಷಧ ಮಳಿಗೆಗಳನ್ನು ಇನ್ನೂ ಜಾಸ್ತಿ ಮಾಡಬೇಕು. ಈ ಔಷಧ ಮಳಿಗೆಗಳನ್ನು ತೆರೆಯುವಂತಹ ಅವಕಾಶವನ್ನು ಪ್ರೈವೇಟ್ ಸಂಸ್ಥೆಯವರಿಗೆ ಅಥವಾ NGO'S ಗಳಿಗೆ ಕೊಡುವಂತಹ ಅವಕಾಶವನ್ನು ಸರ್ಕಾರ ಮಾಡಿಕೊಡಬೇಕು ಮತ್ತು ಗ್ರಾಮ ಗ್ರಾಮಗಳಲ್ಲಿಯೂ ಕೂಡ generic ಔಷಧಿಯ ವ್ಯವಸ್ಥೆಯಾಗಬೇಕು ಎನ್ನುವ ಕಳಕಳಿಯ ವಿನಂತಿಯನ್ನು ಮಾಡುತ್ತೇನೆ.

ಶಿಕ್ಷಣ ಇಲಾಖೆಗೆ ಬಂದಾಗ "ತ್ರೇತಾಯುಗದಲ್ಲಿ ಗುರು–ಶಿಷ್ಯರಿಗೆ ಬಡಿದು ಬುದ್ಧಿಯ ಕಲಿಸಿದೆಡೆ ಆಗಲಿ ಮಹಾ ಪ್ರಸಾದ" ಎನ್ನುತ್ತಿದ್ದರಂತೆ, ತ್ರೇತಾಯುಗದಲ್ಲಿ ಗುರು–ಶಿಷ್ಯರಿಗೆ ಬೈದು ಬುದ್ಧಿಯ ಕಲಿಸಿದೆಡೆ ಆಗಲಿ ಮಹಾ ಪ್ರಸಾದ" ಎನ್ನುತ್ತಿದ್ದರಂತೆ, "ದ್ವಾಪರಯುಗದಲ್ಲಿ ಗುರು–ಶಿಷ್ಯರಿಗೆ ಧಮಕಿಸಿ ಬುದ್ಧಿಯ ಕಲಿಸಿದೆಡೆ ಆಗಲಿ ಮಹಾ ಪ್ರಸಾದ" ಎನ್ನುತ್ತಿದ್ದರಂತೆ ಹಾಗೂ "ಕಲಿಯುಗದಲ್ಲಿ ಗುರು–ಶಿಷ್ಯರಿಗೆ ಭಾಗಿ ವಂದಿಸಿ ಬುದ್ಧಿಯ ಕಲಿಸಿದರೂ ಆಗಲಿ ಮಹಾ ಪ್ರಸಾದ ಎನ್ನುವಂತಹ ಸ್ಥಿತಿಯಿಲ್ಲ" ಎನ್ನುವಂತಹ ಮಾತನ್ನು 12ನೇ ಶತಮಾನದಲ್ಲಿ ಅಲ್ಲಮಪ್ರಭು ದೇವರು ಹೇಳಿದ್ದರು. ಆದರೆ, ಇವತ್ತು ಕಾಲ ಬದಲಾಗುತ್ತಿದೆ. ಸ್ಪರ್ಧಾತ್ಮಕ ಯುಗದಲ್ಲಿದ್ದೇವೆ, ಕಂಪ್ಯೂಟರ್ ಯುಗದಲ್ಲಿದ್ದೇವೆ, ವೈಜ್ಞಾನಿಕ ಯುಗದಲ್ಲಿದ್ದೇವೆ. ಈ ಯುಗದಲ್ಲಿ ಈ ಒಂದು ಕಾಲಕ್ಕೆ ತಕ್ಕಂತೆ ಸ್ಪರ್ಧಾತ್ಮಕವಾದಂತಹ ಯುಗದಲ್ಲಿ ನಮ್ಮ ಮಕ್ಕಳನ್ನು ಸ್ಪರ್ಧಾತ್ಮಕವಾಗಿ ಬೆಳೆಸುವಂತಹ ಕರ್ತವ್ಯ ನಮ್ಮೆಲ್ಲರದೂ ಇದೆ. ತಮ್ಮ ಮಕ್ಕಳು ಒಳ್ಳೆಯವರಾಗಬೇಕು, ಸುಶಿಕ್ಷಿತರಾಗಬೇಕು ಎನ್ನುವಂತಹ ಒಂದು ಮನಸ್ಸನ್ನು ಇಟ್ಟುಕೊಂಡು ಹಳ್ಳಿಗಳಲ್ಲಿಯೂ ಕೂಡ ತಮ್ಮ ಮಕ್ಕಳನ್ನು ಶಾಲೆಗೆ

ಕಳುಹಿಸುವಂತಹ ವ್ಯವಸ್ಥೆಯನ್ನು ತಂದೆ-ತಾಯಿಯರು ಮಾಡುತ್ತಿದ್ದಾರೆ. ನಾವು ಹಳ್ಳಿಗಳಲ್ಲಿ ನೋಡಿದಾಗ ದಿನಗೂಲಿಗೆ ಹೋಗಿ ಒಂದು ಹೊತ್ತು ಉಪವಾಸ ಇದ್ದುಕೊಂಡು ತಮ್ಮ ಮಕ್ಕಳಿಗೆ ಶಿಕ್ಷಣ ದೊರೆಯಬೇಕು ಎನ್ನುವ ವಿಷಯವನ್ನು ಅವರ ಗಮನಕ್ಕೆ ತಂದು ಆ ಒಂದು ಕೆಲಸವನ್ನು ಅಂದರೆ ತಂದೆ-ತಾಯಂದಿರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುತ್ತಿದ್ದಾರೆ. ಈ ರೀತಿಯಾಗಿ ನಮ್ಮ ಸರ್ಕಾರಿ ಶಾಲೆಗಳೂ ಸಹ ತುಂಬಾ ಒಳ್ಳೆಯ ರೀತಿಯಿಂದ ಇದ್ದರೂ ಕೂಡ ಅಲ್ಲಿ ಶಿಕ್ಷಕರ ಕೊರತೆಯಿರಬಹುದು, ಮೂಲಭೂತ ಸೌಕರ್ಯದ ಕೊತರೆಗಳಿರಬಹುದು, ಎಷ್ಟೋ ಕಡೆಗಳಲ್ಲಿ ವ್ಯವಸ್ಥೆಗಳು ಇವುಗಳನ್ನೆಲ್ಲಾ ನೋಡಿದಾಗ ಸುಮಾರು ಹೆಚ್ಚಿನ ಕಡೆಗಳಲ್ಲಿ ಕಟ್ಟಡ ಬಹಳಷ್ಟು ಹಳೆಯದಾಗಿದ್ದು, ಶಿಥಿಲಾವಸ್ಥೆಯಲ್ಲಿರತಕ್ಕಂತಹ ಕಟ್ಟಡಗಳು, ಮಕ್ಕಳು ಕಟ್ಟಡಗಳ ಒಳಗಡೆ ಕುಳಿತು ಮಳೆ ಬೀಳುತ್ತಿರುವಂತಹ ಸಂದರ್ಭದಲ್ಲಿ ಯಾವತ್ತು ಆ ಛಾವಣಿ ಮಕ್ಕಳ ಮೇಲೆ ಬೀಳುತ್ತದೋ ಎನ್ನುವ ಹೆದರಿಕೆಯಿಂದ ಇರುವಂತಹ ಪರಿಸ್ಥಿತಿ ನಮ್ಮದಾಗಿದೆ. ಅದಕ್ಕೆ ಆ ಕಡೆಗಳಲ್ಲಿಯೂ ಕೂಡ ಶಿಕ್ಷಕರ ಹುದ್ದೆಗಳು ಭರ್ತಿಯಾಗಬೇಕು. ಮೂಲಭೂತ ಕಟ್ಟಡಗಳ ವ್ಯವಸ್ಥೆಯಾಗಬೇಕು. ಅಲ್ಲಿ ವಿಶೇಷವಾಗಿ ವಿದ್ಯಾರ್ಥಿನಿಯರಿಗಾಗಿ ಶೌಚಾಲಯಗಳ ಕೊರತೆಗಳನ್ನು ನೀಗಿಸಬೇಕು, ಆಟದ ಮೈದಾನಗಳಿರಬೇಕು. ಮತ್ತು ಅಲ್ಲಿ ಆಟ-ಪಾಠಗಳ ಜೊತೆಗೆ ಈ ಒಂದು ಒಳ್ಳೆಯ ಸ್ಪರ್ಧಾತ್ಮಕ ಯುಗಕ್ಕೆ ಬೇಕಾಗಿರುವಂತಹ ಎಲ್ಲಾ ಶಿಕ್ಷಣ ಸವಲತ್ತುಗಳು ನಮ್ಮ ಶಿಕ್ಷಣ ಇಲಾಖೆಯಿಂದ ದೊರೆತದ್ದೇ ಆದಲ್ಲಿ ನಾವು ಹಳ್ಳಿಗಳಲ್ಲಿರತಕ್ಕಂತಹ ವಿದ್ಯಾರ್ಥಿಗಳನ್ನು ನೋಡಿದಾಗ ನಗರಗಳಲ್ಲಿರತಕ್ಕಂತಹ ವಿದ್ಯಾರ್ಥಿಗಳಿಗೇನೂ ಕಡಿಮೆಯಿರುವುದಿಲ್ಲ. ಅವರಿಗೂ ಸಹ ಅವಕಾಶವನ್ನು ಒದಗಿಸಿಕೊಟ್ಟರೆ ನಿಜವಾಗಲೂ ಅವರು ನಮ್ಮ ಭಾರತ ದೇಶದ ಮುಂದಿನ ಒಬ್ಬ ಆದರ್ಶ ಪ್ರಜೆಗಳಾಗಿ ನಿರ್ಮಾಣ ಮಾಡುವಂತಹ ಒಂದು ಕೆಲಸ ಈ ಶಿಕ್ಷಣ ಇಲಾಖೆಯದಾಗಿದೆ. ನಮ್ಮ ದೇಶದಲ್ಲಿ ಪ್ರತಿಯೊಂದು ಮನೆ ಮನೆಯಲ್ಲಿರತಕ್ಕಂತಹ ಯಾವುದಾದರೂ ಒಂದು ಇಲಾಖೆಯಿತ್ತು ಎಂದರೆ ಅದು ಶಿಕ್ಷಣ ಇಲಾಖೆ. ಅದಕ್ಕೆ ಆ ಒಂದು ಸ್ಪರ್ಧಾತ್ಮಕ ಯುಗಕ್ಕೆ

ಅನುಗುಣವಾಗಿ ತಮ್ಮ ಮಕ್ಕಳನ್ನು ಬೆಳೆಸುವಂತಹ ಕಾರ್ಯ ನಮ್ಮ ಸರ್ಕಾರದಿಂದ ಆಗಬೇಕು ಎನ್ನುವ ಕಳಕಳಿಯ ವಿನಂತಿ ಮಾಡುತ್ತೇನೆ.

ಅದೇ ರೀತಿಯಾಗಿ R.T.E. Act ನಲ್ಲಿ ಕೇವಲ 25 ಪ್ರತಿಶತ ಮಕ್ಕಳಿಗೆ ಕೆಲವೊಂದು ಸವಲತ್ತುಗಳನ್ನು ಕೊಡಬೇಕು ಎನ್ನುವ ದೃಷ್ಟಿಯಿಂದ ಈಗಾಗಲೇ ಅದನ್ನು ಮಾಡಿದ್ದಾರೆ, ಅದು ಸ್ವಾಗತಾರ್ಹವಾದುದು. ಆದರೂ ಕೂಡ ಅನೇಕ ಶಿಕ್ಷಣ ಸಂಸ್ಥೆಗಳು, ನೂರಕ್ಕೆ ನೂರರಷ್ಟು ಪ್ರತಿಶತ ನಾವು RTE Act ನಲ್ಲಿ ಮಕ್ಕಳನ್ನು ತೊಡಗಿಸುತ್ತೇವೆ ಎನ್ನುವಂತಹ ಒಂದು ಬೇಡಿಕೆ ಇಟ್ಟಾಗ ಅವರಿಗೂ ಕೂಡ ಅವಕಾಶ ಮಾಡಿಕೊಡಬೇಕು ಎನ್ನುವುದು ನನ್ನ ಒಂದು ಮನವಿ.

ಮುಂದೆ ಉನ್ನತ ಶಿಕ್ಷಣ ಇಲಾಖೆಗೆ ಬಂದಾಗ ಸುಮಾರು ಕಡೆಗಳಲ್ಲಿ ವಿಶೇಷವಾಗಿ ಗಡಿ ಭಾಗಗಳಲ್ಲಿ ನಮಗೆ ಡಿಗ್ರಿ ಕಾಲೇಜುಗಳಿಲ್ಲ. ನನ್ನ ನಿಪ್ಪಾಣಿ ಕ್ಷೇತ್ರದಲ್ಲಿ ನೋಡಿದಾಗ ಅಲ್ಲಿ ಸರ್ಕಾರದ ಒಂದೂ ಡಿಗ್ರಿ ಕಾಲೇಜು ಇಲ್ಲ. ಅದಕ್ಕೋಸ್ಕರ ಪ್ರತಿಯೊಂದು ಹೋಬಳಿ ಮಟ್ಟದಲ್ಲಿ, ಇವತ್ತು ಶಿಕ್ಷಣದ ತಿಳಿವಳಿಕೆ ಮಕ್ಕಳಲ್ಲಿ ಹೆಚ್ಚಾಗಿರುವುದರಿಂದ ತಂದೆ-ತಾಯಂದಿರು ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿರುವುದರಿಂದ ತಮ್ಮ ಹೆಣ್ಣು ಮಕ್ಕಳು ಅಥವಾ ನಮ್ಮ ವಿದ್ಯಾರ್ಥಿಗಳೂ ಕೂಡ ಸಿಟಿಗಳಿಗೆ ಬಂದು ಕಲಿಯುವಂತಹ ಪರಿಸ್ಥಿತಿಯಿದೆ. ವಿಶೇಷವಾಗಿ ಹೆಣ್ಣು ಮಕ್ಕಳು ಸಿಟಿಗೆ ಬರುವುದು ಅಂದರೆ ಅವಕಾಶಗಳು ಬಹಳ ಕಡಿಮೆಯಿದೆ. ಹೆಣ್ಣು ಮಕ್ಕಳನ್ನು ಸಿಟಿಗೆ ಓದಲು ಕಳುಹಿಸದೇ ಇರುವಂತಹ ಪರಿಸ್ಥಿತಿಯಿರಬಹುದು, ದಿನ ಬೆಳಿಗ್ಗೆಯಾದರೆ ಹೆಣ್ಣು ಮಕ್ಕಳ ಮೇಲೆ ಆಗುತ್ತಿರುವ ಅತ್ಯಾಚಾರಗಳ ಬಗ್ಗೆ ಹೆದರಿ ಹೆಣ್ಣು ಮಕ್ಕಳು ಹೊರಗೆ ಬರದೇ ಇರಬಹುದು, ಈ ರೀತಿಯಾಗಿ ಅದಕ್ಕೋಸ್ಕರ ಪ್ರತಿಯೊಂದು ಹೋಬಳಿ ಮಟ್ಟದಲ್ಲಿಯೂ ಕೂಡ ಡಿಗ್ರಿ ಕಾಲೇಜುಗಳು ಆಗಬೇಕು ಎನ್ನುವಂತಹ ಒಂದು ಮನವಿಯನ್ನು ತಮ್ಮ ಹತ್ತಿರ ಮಾಡುತ್ತೇನೆ.

ಅದೇ ರೀತಿಯಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ, 'ಕಾರ್ಯೇಶು ದಾಸಿ' ಕರುಣೇಶು ಮಂತ್ರಿ, ರೂಪೇಶು ಲಕ್ಷ್ಮಿ, ಭೋಜೇಶು ಮಾತಾ, ಶಯನೇಶು ರಂಭಾ, ಕ್ಷಮಯಾ ಧರಿತ್ರಿ, ಷಡ್‌ಧರ್ಮಯುಕ್ತ ಕುಲಧರ್ಮ ಪತ್ನಿ' ಎಂದು ನಮ್ಮ ಭಾರತದ ಪರಂಪರೆಯಲ್ಲಿ 6 ಗುಣಗಳಿಗೆ ಹೆಣ್ಣನ್ನು ಹೋಲಿಸುತ್ತಾರೆ. ಭೂಮಿ ತಾಯಿಯನ್ನು ಹೆಣ್ಣಿಗೆ ಹೋಲಿಸುತ್ತಾರೆ, ಭಾರತ ಮಾತೆಯನ್ನು ಹೆಣ್ಣಿಗೆ ಹೋಲಿಸುತ್ತಾರೆ, ಪ್ರಕೃತಿ ಮಾತೆಯನ್ನೂ ಕೂಡ ಹೆಣ್ಣಿಗೆ ಹೋಲಿಸುತ್ತಾರೆ, ಎಲ್ಲಾ ನದಿಗಳ ಹೆಸರುಗಳನ್ನು ತೆಗೆದುಕೊಂಡರೂ ಸಹ ಅವೆಲ್ಲವೂ ಕೂಡ ಹೆಣ್ಣಿನ ಹೆಸರಿನಲ್ಲಿದೆ. ಇಷ್ಟೆಲ್ಲಾ ಇದ್ದಾಗಲೂ ಕೂಡ ಲಕ್ಷ್ಮಿಯನ್ನು ಹೆಣ್ಣಿನ ರೂಪದಲ್ಲಿ, ಸರಸ್ವತಿಯನ್ನು ಹೆಣ್ಣಿನ ರೂಪದಲ್ಲಿ, ದುರ್ಗೆಯನ್ನು ಹೆಣ್ಣಿನ ರೂಪದಲ್ಲಿ ಈ ರೀತಿಯಾಗಿ ನಮ್ಮ ಭಾರತೀಯ ಪರಂಪರೆಯಲ್ಲಿ ಹೆಣ್ಣಿಗೆ ಒಂದು ಒಳ್ಳೆಯ ಪವಿತ್ರವಾದ ಹಾಗೂ ಗೌರವದ ಸ್ಥಾನವಿದೆ. ಆದರೂ ಕೂಡ ಇವತ್ತಿನ ದಿವಸ ನೋಡಿದಾಗ ಪ್ರತಿಯೊಂದು ಕಡೆಗಳಲ್ಲಿ ದಿನಬೆಳಗಾದರೆ ಟಿವಿ ಹಾಕಿದರೆ, ದಿನಬೆಳಗಾದರೆ ಪೇಪರ್ ನೋಡಿದರೆ ಅಪ್ರಾಪ್ತ ವಯಸ್ಸಿನ ಮಗುವಿನ ಮೇಲೆ ಅತ್ಯಾಚಾರವಾಯಿತು, ವರದಕ್ಷಿಣೆ ಕಿರುಕುಳ ಇದೆಲ್ಲಾ ಬರುತ್ತದೆ, ಇದನ್ನೆಲ್ಲಾ ನೋಡಿದಾಗ ಇವತ್ತಿನ ದಿನ ಹೆಣ್ಣೇ ಹೆಣ್ಣು ಮಗುವನ್ನು ಬೇಡುವೆನ್ನುವ ಪರಿಸ್ಥಿತಿ ಬಂದಿದೆ. ನನಗೆ ಇಲ್ಲಿ ಒಂದು ಮಾತು ನೆನಪಾಗುತ್ತದೆ.

> 'ಹೆಣ್ಣು ಹುಟ್ಟಿದರೆ ಪೀಡೆ ಹುಟ್ಟಿತು ಎನ್ನುವರು, ಗಂಡು ಹುಟ್ಟಲು ಪೇಡ ಹಂಚುವರು, ಹೆಣ್ಣು ಹುಟ್ಟಲು ಹೊರೆ ಎನ್ನುವರು, ಗಂಡು ಹುಟ್ಟಲು ದೊರೆ ಬಂದ ಎನ್ನುವರು, ಹೆಣ್ಣು ಹುಟ್ಟಲು ಹುಣ್ಣು ಎನ್ನುವರು, ಗಂಡು ಹುಟ್ಟಲು ಹೊನ್ನ ಬಂತು ಎನ್ನುವರು, ಗಂಡಸಿಗೆ ಸರಿಸಮನಾಗಿ

ದುಡಿಯುವಳು ಹೆಣ್ಣು, ಅಂದಿನ ರಾಣಿ ಚೆನ್ನಮ್ಮ ಹೆಣ್ಣು,
ಇಂದಿನ ಸುನೀತಾ ವಿಲಿಯಮ್ಸ್ ಹೆಣ್ಣು, ಅಂದಿನ ಒನಕೆ
ಓಬವ್ವ ಹೆಣ್ಣು, ಇಂದಿನ ಸಾಲುಮರದ ತಿಮ್ಮಕ್ಕ ಹೆಣ್ಣು,
ಅಷ್ಟೇ ಅಲ್ಲ ತಮ್ಮ ಪಕ್ಷದ ಅಧ್ಯಕ್ಷರೂ ಕೂಡ ಹೆಣ್ಣು,
ಕೇಂದ್ರದಲ್ಲಿರತಕ್ಕಂತಹ ಸ್ಪೀಕರ್ ಕೂಡ ಹೆಣ್ಣು, ವಿರೋಧ
ಪಕ್ಷದ ನಾಯಕಿಯರೂ ಕೂಟ ಹೆಣ್ಣು, ಹೆಣ್ಣು, ಹೆಣ್ಣು.'

ಶ್ರೀ ವಿನಯ್‌ಕುಮಾರ್ ಸೊರಕೆ:– ಶ್ರೀಮತಿ ಇಂದಿರಾ ಗಾಂಧಿಯವರು ಮತ್ತು ಶ್ರೀಮತಿ ಸೋನಿಯಾ ಗಾಂಧಿಯವರೂ ಕೂಡ ಹೆಣ್ಣು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಶ್ರೀಮತಿ ಸೋನಿಯಾ ಗಾಂಧಿಯವರ ಹೆಸರನ್ನು ಹೇಳಿದರೆ ಅವರಿಗೆ ಸಂತೋಷವಾಗುತ್ತದೆಂದರೆ ಹೇಳಲಿ.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್:– ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನಮಂತ್ರಿಯಾಗಿದ್ದರು. ಅವರೂ ಹೆಣ್ಣಾಗಿದ್ದರು. ನಾನು ಸೋನಿಯಾ ಗಾಂಧಿಯವರ ಹೆಸರನ್ನು ಹೇಳಿದೆ, ನಿಮ್ಮ ಪಕ್ಷದ ಅಧ್ಯಕ್ಷರೂ ಕೂಡ ಹೆಣ್ಣು ಎಂದು ಹೇಳಿದೆ. "ಹೆಣ್ಣಿಲ್ಲದ ಗಂಡು ಬಂದಿದ್ದಾದರೂ ಎಲ್ಲಿಂದ" ಎನ್ನುವಂಥ ಆಧುನಿಕ ವಚನ ನೆನಪಾಗುತ್ತಿದೆ. ಅದಕ್ಕೆ ಇಷ್ಟೆಲ್ಲಾ ಇರಬೇಕಾದರೂ ಕೂಡ ಯಾವುದೇ ಕ್ಷೇತ್ರದಲ್ಲೂ ಹೆಣ್ಣು ಹಿಂದಿಲ್ಲ, ಗಂಡು ಮಕ್ಕಳಿಗೆ ಸರಿಸಮಾನವಾಗಿ ನಾವು ಕೆಲಸವನ್ನು ಮಾಡುತ್ತಿದ್ದರೂ ಕೂಡ, ಗಂಡು ಮಕ್ಕಳಿಗೆ ಇರುವಂಥ ಸುರಕ್ಷತೆ ಹೆಣ್ಣಿಗೆ ಏಕಿಲ್ಲವೆನ್ನುವಂಥದ್ದು, 24X7 ನಾವು ಹೆಣ್ಣು ಮಕ್ಕಳಿಗೆ ಸುರಕ್ಷತೆ ಸರ್ಕಾರದಿಂದ ಬರಲೇಬೇಕು. ತಾವು ಆಯವ್ಯಯ ಪುಸ್ತಕದಲ್ಲಿ ಒಂದು ಮಾತನ್ನು ಹೇಳಿದ್ದೀರಿ, ಅದು ಏನೆಂದರೆ "ದೌರ್ಜನ್ಯಕ್ಕೆ ಅತ್ಯಾಚಾರಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ವೈದ್ಯಕೀಯ, ಪೊಲೀಸ್, ಕಾನೂನು ಕೋಶಗಳನ್ನು ರಚಿಸಿ", ಅವರಿಗೆ ಸೂಕ್ತ ರಕ್ಷಣೆಯನ್ನು ಒದಗಿಸುತ್ತೇವೆಂದು ಹೇಳಿದ್ದಾರೆ. ಇದೆಲ್ಲಾ ಆದ ಮೇಲೆ

ರಚಿಸುವುದಕ್ಕಿಂತ, ಆಗದೇ ಇರುವಂಥ ರೀತಿಯಲ್ಲಿ ತಡೆಗಟ್ಟುವುದು ಸರ್ಕಾರದ ಜವಾಬ್ದಾರಿಯಾಗಿದೆ. ನಮ್ಮ ಹೆಣ್ಣು ಮಕ್ಕಳ ತಪ್ಪು ಯಾವುದೇ ಇಲ್ಲದಿದ್ದರೂ ಕೂಡ ಅನ್ಯಾಯ, ಅತ್ಯಾರಕ್ಕೆ ಒಳಗಾಗಿದ್ದರೂ ಕೂಡ ಅಪರಾಧ ಮಾಡಿದವರಿಗೆ ಕಠಿಣ ಶಿಕ್ಷ ದೊರೆಯದೇ, ಅವರು ಸಮಾಜದಲ್ಲಿ ರಾಜಾರೋಷವಾಗಿ ಓಡಾಡುವುದಕ್ಕೆ ನೋಡಿದರೆ, ಮತ್ತೆ ಇನ್ನೊಬ್ಬರು ಅಪರಾಧಕ್ಕೆ ಮುಂದಾಗುವಂಥ ಪರಿಸ್ಥಿತಿ ಇದೆ. ತಾವು ಅಪರಾಧವನ್ನು ತಡೆಗಟ್ಟುವ ಸಲುವಾಗಿ ಕಠಿಣವಾದ ಕ್ರಮಗಳನ್ನು ಜರುಗಿಸಿ, ಅಪರಾಧಿಗಳಿಗೆ ತಕ್ಕ ಶಿಕ್ಷೆ ಕೊಡಬೇಕೆಂಬ ಕಳಕಳಿ ವಿನಂತಿಯನ್ನು ಮಾಡುತ್ತೇನೆ. ನಾನು ಸಿಂಗಪುರಕ್ಕೆ ಹೋಗಿದ್ದಾಗ ರಾತ್ರಿ 24 ಗಂಟೆಗಳು market open ಆಗಿರುತ್ತದೆಂದು ಹೇಳಿದಾಗ, ನಾವು ರಾತ್ರಿ 12.00 ಗಂಟೆಗೆ ಮಾರ್ಕೆಟ್‌ಗೆ ಹೋಗಿದ್ದೆವು. ಅಲ್ಲಿ ಒಂದು ಟ್ಯಾಕ್ಸಿ ಹಿಡಿದುಕೊಂಡು ಹೋಗುವಾಗ, ಆ Taxi Driver ಒಬ್ಬ ಮಹಿಳೆಯಾಗಿದ್ದರು. ಆಗ ನಾನು ಆ ಮಹಿಳೆಯನ್ನು ರಾತ್ರಿ 12 ಗಂಟೆಯ ಸಮಯದಲ್ಲೂ ನೀವು ಡ್ರೈವರ್ ಆಗಿ ಸಿಂಗಪುರದಲ್ಲಿ ಓಡಾಡುತ್ತಿದ್ದಿರಲ್ಲಾ, ನಿಮಗೆ ಹೆದರಿಕೆ ಇಲ್ಲವೇ? ಎಂದು ಕೇಳಿದೆ. ಅದಕ್ಕೆ ಆ ಮಹಿಳೆ ಹೇಳಿದ ಮಾತು ಕೇಳಿ, ಆ ಸಿಂಗಪುರದ ಗೌವರ್ನಮೆಂಟ್‌ನ ಬಗ್ಗೆ ಬಹಳಷ್ಟು ಅಭಿನಂದನೀಯವಾಗಿತ್ತು. ಅವಳು ಹೇಳಿದ ಒಂದು ಮಾತು ಏನೆಂದರೆ, ನಮಗೆ ಏನಾದರೂ ಸ್ವಲ್ಪ ಹೆಚ್ಚು-ಕಡಿಮೆಯಾದರೂ, ನಮ್ಮ ಸರ್ಕಾರ ಅಪರಾಧ ಮಾಡುವುದಕ್ಕೆ ಬಿಡುವುದಿಲ್ಲ, ಆ ರೀತಿ ಅಪರಾಧ ಮಾಡಿದವರನ್ನು ಬಿಡುವುದಿಲ್ಲ, ಅದಕ್ಕೆ ನಾವು ಇಷ್ಟು ಒಳ್ಳೆಯ ರೀತಿಯಲ್ಲಿ ರಾತ್ರಿ 12 ಗಂಟೆಯಲ್ಲೂ ಹೊರಗಡೆ ಅಡ್ಡಾಡುತ್ತೇವೆಂದು ಆ ಮಹಿಳೆ ಹೇಳಿದಳು. ಇದು ಮಹಾತ್ಮ ಗಾಂಧಿಯವರ ಕನಸು ಆಗಿತ್ತು, ಯಾವತ್ತು ನಮಗೆ ಸ್ವಾತಂತ್ರ್ಯ ದೊರೆತಿದೆಯೆಂದರೆ, ಮಹಿಳೆಯರು ರಾತ್ರಿ 12 ಗಂಟೆಗೆ ನಿರ್ಭೀತಿಯಿಂದ ಓಡಾಡಿದಾಗ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಹಾಗೆ ಎಂಬ ಮಾತನ್ನು ಈ ಸರ್ಕಾರ, ಮಾನ್ಯ ಮುಖ್ಯಮಂತ್ರಿಯವರು ಹಾಗೂ ತಾವು ಎಚ್ಚರಿಕೆಯಿಂದ

ಮಹಿಳೆಯರಿಗೆ ಸುರಕ್ಷತೆಯನ್ನು ಕೊಡುವಂಥ ನಿಟ್ಟಿನಲ್ಲಿ ನಮ್ಮ ಸರ್ಕಾರದಿಂದ ಪ್ರಯತ್ನವಾಗಬೇಕು. ಅದೇ ರೀತಿಯಾಗಿ ಅಂಗನವಾಡಿಯ ಕಾರ್ಯಕರ್ತೆ ಯರಿರಬಹುದು, ಆಶಾಕಾರ್ಯಕರ್ತೆಯರಿರಬಹುದು, ಅಡಿಗೆಯವರಿರಬಹುದು, ಅವರಿಗೂ ಕೂಡ ಒಂದು ಒಳ್ಳೆಯ ವೇತನ ಸರಿಯಾದ ವೇಳೆಗೆ ಸಿಗುವಂತಾಗಬೇಕು.

ಅದೇ ರೀತಿಯಾಗಿ ಪೊಲೀಸ್ ಇಲಾಖೆಗೆ ಸಂಬಂಧಿಸಿದಂತೆ ಇಲ್ಲಿ ಮಾನ್ಯ ಮಂತ್ರಿಯವರು ಇಲ್ಲ. ಅವರಲ್ಲಿ ನನ್ನ ಕಳಕಳಿಯ ವಿನಂತಿ ಏನೆಂದರೆ, ನಮ್ಮ ಮಹಿಳಾ ಸುರಕ್ಷತೆಗಾಗಿ ಪೊಲೀಸ್ ಇಲಾಖೆಯಲ್ಲಿ ಹೇಗೆ ಚೀತಾ ಎನ್ನುವ ಬೈಕ್‌ನಲ್ಲಿ ಪೊಲೀಸರು ಓಡಾಡುತ್ತಾರೆ. ಮತ್ತೆ ಹೊಯ್ಸಳ ಎನ್ನುವ ವ್ಯಾನ್‌ನಲ್ಲೂ ಸಹ ಪೊಲೀಸರು ಓಡಾಡುತ್ತಾರೆ. ಅದೇ ರೀತಿಯಲ್ಲಿ ಮಹಿಳಾ ಪೊಲೀಸರ ಸಂಖ್ಯೆ ಜಾಸ್ತಿಯಾಗಬೇಕು, ಮಹಿಳಾ ಚೀತಾ ಗಾಡಿಗಳು ಓಡಾಡಬೇಕು, ಮಹಿಳಾ ಹೊಯ್ಸಳ ಗಾಡಿಗಳು ಓಡಾಡಬೇಕು. ಆಗ ಮಾತ್ರ ಮಹಿಳೆಯರಿಗೆ ಧೈರ್ಯ ಬಂದು, ಈ ಸರ್ಕಾರಕ್ಕೆ ಋಣಿಯಾಗಿರುತ್ತಾರೆ. ಅದಕ್ಕಾಗಿ ಮಹಿಳೆಯರ ಬಗ್ಗೆ ಒಂದು ವಿಶೇಷವಾದಂಥ ಕಾಳಜಿಯನ್ನು ತೆಗೆದುಕೊಳ್ಳಬೇಕೆಂಬ ದೃಷ್ಟಿಕೋನದಿಂದ ತಮ್ಮಲ್ಲಿ ಬೇಡಿಕೆಯನ್ನು ಸಲ್ಲಿಸುತ್ತೇನೆ.

ಅದೇ ರೀತಿಯಲ್ಲಿ ಅಂಗನವಾಡಿಯ ಪರಿಸ್ಥಿತಿಯನ್ನು ನೋಡಿದಾಗ, ಅಂಗನವಾಡಿ ಕೇಂದ್ರಗಳನ್ನು 3 ವರ್ಷದ ಮಕ್ಕಳಿಗೋಸ್ಕರ ನಡೆಸುವಂಥದ್ದು, ಆದರೆ ಬಹಳಷ್ಟು ಕಡೆಗಳಲ್ಲಿ ಅಂಗನವಾಡಿಗೆ ಸ್ವಂತ ಕಟ್ಟಡಗಳಿಲ್ಲ. ಅಲ್ಲಿ ಸ್ವಂತ ಕಟ್ಟಡಗಳಿಲ್ಲದೇ ಇರುವ ಕಾರಣದಿಂದ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ ಕೊಡುವುದಕ್ಕೆ ಆಗುತ್ತಿಲ್ಲ. ಅದಕ್ಕೆ ನಾನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಪ್ರತಿಯೊಂದು ಕಡೆಗಳಲ್ಲೂ ಹಂತ ಹಂತವಾಗಿ ಅಂಗನವಾಡಿ ಕಟ್ಟಡಗಳು ಆಗಬೇಕು. ಮತ್ತೆ

ಆ ಮಕ್ಕಳಿಗೆ ಒಳ್ಳೆಯ ರೀತಿಯಲ್ಲಿ ವ್ಯವಸ್ಥೆಯಾಗಬೇಕೆನ್ನುವಂಥ ಕಳಕಳಿ ವಿನಂತಿಯನ್ನು ಮಾಡುತ್ತಿದ್ದೇನೆ.

ಇನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನಕ್ಕೆ ತರುವುದೇನೆಂದರೆ, 2013–14ನೇ ಸಾಲಿನಲ್ಲಿ ಅವರ ಸರ್ವೆ ಪ್ರಕಾರ 3,207 ಊರುಗಳನ್ನು ಗುರುತಿಸಿ, ಅಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪನೆ ಮಾಡಬೇಕೆಂಬ ಕ್ರಮ ಏನು ಇದೆ, ಇದು ಸ್ವಾಗತಾರ್ಹವಾಗಿದೆ. ಆದರೆ ಆರೋಗ್ಯದ ದೃಷ್ಟಿಯಿಂದ ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಕಲುಷಿತ ನೀರಿನಿಂದ ಅನೇಕ ಆರೋಗ್ಯದ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಅದಕ್ಕೆ ಪ್ರತಿಯೊಂದು ಹಳ್ಳಿಗಳಲ್ಲೂ ಕೂಡ ಹಂತ ಹಂತವಾಗಿ ಶುದ್ಧ ಕುಡಿಯುವ ನೀರಿನ ಘಟಕಗಳು ಆಗಬೇಕು. ಮತ್ತೆ ನನ್ನ ಒಂದು ಬೇಡಿಕೆ ಏನೆಂದರೆ, ಇದನ್ನು NGOಗಳಿರಬಹುದು, ಸ್ಥಳೀಯ ಸಂಸ್ಥೆಗಳಿರಬಹುದು ಅಥವಾ ಯಾರಾದರೂ ದೊಡ್ಡ ಉದ್ದಿಮೆದಾರರು ಇರಬಹುದು, ಅವರು ಮತ್ತು ಸರ್ಕಾರ ಇವೆರಡರ ಸಂಯುಕ್ತಾಶ್ರಯದಲ್ಲಿ ಸರ್ಕಾರದಿಂದ 75% ಮತ್ತು ಸ್ಥಳೀಯ ಸಂಸ್ಥೆಗಳಿಂದ, ಉದ್ದಿಮೆದಾರರಿಂದ 25% ಮಾಡಿ, ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪನೆ ಮಾಡಿ, ಅದರ ಉಸ್ತುವಾರಿಯನ್ನು ಆ ಸಂಸ್ಥೆಯವರಿಗೆ ಕೊಟ್ಟರೆ, ಇನ್ನು ಹೆಚ್ಚಿನ ರೀತಿಯಲ್ಲಿ ನಮ್ಮ ಹಳ್ಳಿಗಳ ಸುಧಾರಣೆ ಮತ್ತು ಬಡ ಜನರ ಆರೋಗ್ಯ ಸುಧಾರಣೆಯನ್ನು ಮಾಡಬಹುದೆಂಬ ಆಶಯವನ್ನು ವ್ಯಕ್ತಪಡಿಸುತ್ತೇನೆ. ಅದೇ ರೀತಿಯಾಗಿ ಗ್ರಾಮಗಳಿಗೆ ಹೋಗುವ ರಸ್ತೆಗಳನ್ನು ಗುರುತಿಸಿ, ಅವುಗಳ ಸುಧಾರಣೆಯನ್ನೂ ಕೂಡ ಮಾಡಬೇಕೆಂಬ ವಿಷಯವನ್ನು ಹೇಳಬಯಸುತ್ತೇನೆ.

ಕೊನೆಯದಾಗಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ 30 ಕೋಟಿ ರೂ.ಗಳ ಅನುದಾನವನ್ನು ಇಡಲಾಗಿದೆ. ಅದೇ ರೀತಿಯಾಗಿ ಬಯಲುಸೀಮೆಗೆ 20 ಕೋಟಿ ರೂ.ಗಳ ಅನುದಾನವನ್ನು ಇಡಲಾಗಿದೆ. ಆದರೆ ನನ್ನ ಒಂದು ಕಳಕಳಿ ಬೇಡಿಕೆ ಏನೆಂದರೆ, ಬಯಲುಸೀಮೆ ಪ್ರದೇಶ ಜಾಸ್ತಿ ಇರುವುದರಿಂದ, ಆ ಅನುದಾನವನ್ನು ಇನ್ನೂ ಹೆಚ್ಚಿಗೆ ಮಾಡಿ ಅಲ್ಲೂ ಕೂಡ ನ್ಯಾಯವನ್ನು ಒದಗಿಸಿಕೊಡಬೇಕೆಂಬ ಮಾತನ್ನು ಹೇಳಲಿಚ್ಛಿಸುತ್ತೇನೆ.

ಇನ್ನು ಪ್ರವಾಸೋದ್ಯಮ ಇಲಾಖೆಯ ಬಗ್ಗೆ ಹೇಳುವುದಾದರೆ, ಬೇರೆ ದೇಶಗಳಲ್ಲಿ ನೋಡಿದಾಗ ಅಲ್ಲಿ ಏನೂ ಇಲ್ಲದೇ ಇದ್ದರೂ ಕೂಡ, ಇದಕ್ಕೆ ಉದಾಹರಣೆಯಾಗಿ ಸಿಂಗಪುರದ ಬಗ್ಗೆ ಹೇಳುವುದಾದರೆ, ಅಲ್ಲಿ ಇರುವಂಥ ಸ್ವಲ್ಪ ಕಾಡಿನಲ್ಲಿ ಪ್ರವಾಸಿಗರನ್ನು ಆಕರ್ಷಣೆ ಮಾಡುವುದಕ್ಕೋಸ್ಕರ, ಅಲ್ಲಿ Night Safari ಎಂಬ ಕಾರ್ಯಕ್ರಮವನ್ನು ಮಾಡುತ್ತಾರೆ. ಅಲ್ಲಿಗೆ ಬಂದಂಥ ಪ್ರವಾಸಿಗರನ್ನು ಬಸ್‌ನಲ್ಲಿ ಕರೆದುಕೊಂಡು ಹೋಗಿ, ಆಯಾ ಭಾಗದಲ್ಲಿ ಗುಂಪು ಗುಂಪಾಗಿ ಪ್ರಾಣಿಗಳನ್ನು ಒಂದೊಂದು ಸ್ಥಳಗಳನ್ನು ಮಾಡಿ light ವ್ಯವಸ್ಥೆ ಮಾಡಿ, ಅಲ್ಲಿ ಪ್ರಾಣಿಗಳನ್ನು ತೋರಿಸಿ, ನಂತರ ಅಲ್ಲಿ ಗ್ಯಾಲರಿ ವ್ಯವಸ್ಥೆ ಮಾಡಿ ಚಿಕ್ಕ-ಪುಟ್ಟ ಪ್ರಾಣಿಗಳಿಂದ circus type ನಲ್ಲಿ ಅಲ್ಲಿಯ ಸಿಬ್ಬಂದಿ ವರ್ಗದವರು ಕೆಲವೊಂದು ಆಟಗಳನ್ನು ಮಾಡಿ ತೋರಿಸುತ್ತಾರೆ. ನಾವು ಅಲ್ಲಿಗೆ ಹೋಗಿ ಅದನ್ನು ನೋಡಿ ಸಂತೋಷದಿಂದ ಚಪ್ಪಾಳೆ ಹಾಕಿ ಬರುತ್ತೇವೆ. ಅದರೆ ನಮ್ಮ ಭಾರತ ದೇಶ ಯಾವುದರಲ್ಲೂ ಕಡಿಮೆ ಇಲ್ಲ. ಇಲ್ಲಿ ಅನೇಕ ಕಾಡುಗಳಿವೆ, ಅನೇಕ ರಾಜ-ಮಹಾರಾಜರು ಆಳಿ ಹೋಗಿರುವಂಥ ಐತಿಹಾಸಿಕ ಸ್ಥಳಗಳಿವೆ. ಅನೇಕ ಸಮುದ್ರಗಳಿಂದ, ನದಿಗಳಿಂದ, ದೇವಸ್ಥಾಗಳು ಕೂಡಿರುವಂಥದ್ದು ಇದೆ. ಪ್ರವಾಸೋದ್ಯಮ ಇಲಾಖೆಗೆ ಬಜೆಟ್‌ನಲ್ಲಿ ಹೆಚ್ಚಿನ ಅವಕಾಶವನ್ನು ಮಾಡಿಕೊಟ್ಟು, ನಮ್ಮಲ್ಲಿರುವಂಥ ಈ ಸಂಪನ್ಮೂಲಗಳನ್ನು ಬಳಸಿ ನಾವು ಹೆಚ್ಚಿನ ಆಕರ್ಷಣೀಯವನ್ನಾಗಿ ಮಾಡಿದರೆ, ನಮ್ಮ ವಿದೇಶಿ

ಪ್ರವಾಸಿಗರಿಂದ ನಾವು ಇಲ್ಲಿ ವ್ಯವಸ್ಥಿತವಾದಂಥ ಕಾರ್ಯಕ್ರಮಗಳನ್ನು ಮಾಡಿ, ನಮ್ಮ ರಾಜ್ಯದ ಬಂಡವಾಳವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಮಾಡಿಕೊಳ್ಳಬಹುದು. ಸಿಂಗಪುರದಲ್ಲಿ ಒಂದು ಲೇಸರ್ ಮುಖಾಂತರ ಒಂದು ಕಾರಂಜಿ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ ನಮ್ಮ ನೃತ್ಯ ಕಾರಂಜಿ ಯಾವುದಕ್ಕೂ ಕಡಿಮೆ ಇಲ್ಲ. ಆದರೆ ಇಂಥದ್ದನ್ನು ಆಕರ್ಷಕವಾಗಿ ಅವರ ಗಮನವನ್ನು ಸೆಳೆಯುವಂಥ ಕಾರ್ಯ ನಮ್ಮ ಸರ್ಕಾರದಿಂದ ಆಗಬೇಕು. ಮತ್ತೆ ವಿದೇಶಿ ಪ್ರವಾಸಿಗರು ಇಲ್ಲಿಗೆ ಬಂದಾಗ ಹೆಚ್ಚಿನ ಸಂಖ್ಯೆಯಲ್ಲಿ ಅವರನ್ನು ಬಳಸಿಕೊಂಡು, ನಮ್ಮ ರಾಜ್ಯದ ಆದಾಯವನ್ನು ಹೆಚ್ಚಿಗೆ ಮಾಡುವ ನಿಟ್ಟಿನಲ್ಲಿ ನಮ್ಮ ಸರ್ಕಾರದಿಂದ ಪ್ರಯತ್ನ ಆಗಬೇಕು.

ಅದೇ ರೀತಿಯಲ್ಲಿ ಪಶುಸಂಗೋಪನೆ ಇಲಾಖೆಯಲ್ಲೂ ಅನೇಕ ಕಡೆಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲ, ಮೂಲಭೂತ ಸೌಕರ್ಯಗಳಿದ್ದರೂ ಕೂಡ ವೈದ್ಯರ ಕೊರತೆ ಇದೆ. ಅದಕ್ಕೋಸ್ಕರ ಅಲ್ಲಿ ಹೆಚ್ಚಿನ ರೀತಿಯಲ್ಲಿ ವೈದ್ಯರನ್ನು ತೆಗೆದುಕೊಂಡು ಮೂಲಭೂತ ಸೌಕರ್ಯಗಳನ್ನೂ ಕೂಡ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಬುದ್ಧಿಮಾಂದ್ಯ ಮಕ್ಕಳ ಶಾಲೆಗಳಿಗೆ, ಬುದ್ಧಿಮಾಂದ್ಯ ಮಕ್ಕಳಿಗೆ ಅನೇಕ ಯೋಜನೆಗಳನ್ನು ಮತ್ತು ಅಂಥ ಮಕ್ಕಳಿಗೆ talking laptop ಕೊಡುತ್ತಿರುವುದು, ತುಂಬಾ ಸ್ವಾಗತಾರ್ಹವಾಗಿದೆ. ಅದಕ್ಕೆ ನಾನು ಕೇಳಿಕೊಳ್ಳುವುದೇನೆಂದರೆ, ತಾವು ಶಿಕ್ಷಣ ಸಂಸ್ಥೆಗಳನ್ನು ಹೇಗೆ aided ಮಾಡಿಕೊಳ್ಳುತ್ತೀರೋ, ಆ ರೀತಿಯಲ್ಲಿ ಎಲ್ಲೆಲ್ಲಿ ಬುದ್ಧಿಮಾಂದ್ಯ ಮಕ್ಕಳ ಶಾಲೆಗಳನ್ನು ನಡೆಸುತ್ತಿದ್ದಾರೆ. ಅವರು ಆ ಶಾಲೆಗಳನ್ನು ಚೆನ್ನಾಗಿ ಮತ್ತು ಪ್ರಾಮಾಣಿಕವಾಗಿ ನಡೆಸುತ್ತಿದ್ದಾರೆಂದರೆ, ಅವರಿಗೂ ಕೂಡ ಸರ್ಕಾರದಿಂದ ಅನುದಾನ ಸಿಗುವಂತೆ ಆಗಬೇಕೆಂಬ ನಿಟ್ಟಿನಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿಯಾಗಿ ಕ್ಷತ್ರೀಯ, ಮರಾಠ, ಪಂಚಮಸಾಲಿ, ಮತ್ತು ಆದಿ ಬಣಜಿಗ

ಇವುಗಳು 3(ಬಿ)ಯಲ್ಲಿ ಸೇರಿದೆ, ಇದನ್ನೂ 2(ಎ)ಗೆ ಮಾಡಬೇಕೆನ್ನುವ ಕಳಕಳಿಯ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಕೊನೆಯದಾಗಿ ನಮ್ಮ ಸರ್ಕಾರವಿದ್ದಾಗ 43 ತಾಲ್ಲೂಕುಗಳನ್ನು ಘೋಷಣೆ ಮಾಡಿತ್ತು. ತಾಲ್ಲೂಕುಗಳು ಆಗುವುದು ಬಹಳಷ್ಟು ಅವಶ್ಯಕವಿದೆ. ಅದಕ್ಕೋಸ್ಕರ ನಮ್ಮ ಚಿಕ್ಕೋಡಿಯನ್ನು ನೋಡಿದಾಗ, ನಿಪ್ಪಾಣಿ ಕೊನೆಯ ಭಾಗದಿಂದ ಚಿಕ್ಕೋಡಿಗೆ ಬರಬೇಕೆಂದರೆ, ಸುಮಾರು 20–30 ಕಿ.ಮೀ. ಬರಬೇಕು. ಒಂದು ಕೆಲಸಕ್ಕೆ ಬರಬೇಕೆಂದರೆ, ಒಬ್ಬ ಬಡ ರೈತನು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಆಫೀಸ್ ಮುಂದೆ ಕುಳಿತುಕೊಳ್ಳಬೇಕು. ಅವನು ಒಂದೆರಡು ಬಾರಿ ಟೀಯನ್ನಾದರೂ ಕುಡಿಯಬೇಕು, ಹೀಗೆ ಅವರಿಗೆ ಖರ್ಚು ಹೆಚ್ಚಾಗಿರುವುದರಿಂದ ಮತ್ತು ಎಲ್ಲಾ ಅಂಕಿ–ಅಂಶಗಳನ್ನು ಸರಿಯಾಗಿ ನೋಡಿ ತಾಲ್ಲೂಕು ಘೋಷಣೆ ಮಾಡಿದ್ದು, ತಾವುಗಳು ಅದನ್ನು ಮುಂದುವರೆಸಿ ಆ ತಾಲ್ಲೂಕುಗಳನ್ನು ಘೋಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತಾ, ಮತ್ತೊಮ್ಮೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಮಾತನಾಡಿರುವುದರಲ್ಲಿ ಏನಾದರೂ ತಪ್ಪುಗಳಿದ್ದರೆ, ತಾವು ಸಲಹೆ–ಸೂಚನೆಗಳನ್ನು ಕೊಡಬೇಕೆಂದು ಕೇಳಿ, ನನ್ನ ಮಾತಿಗೆ ವಿರಾಮ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈಗ ಇಲ್ಲಿರುವುದರಿಂದ ಒಂದು ಮಾತನ್ನು ಹೇಳುತ್ತೇನೆ. Performance Budget ಅನ್ನು ಕೊಡಬೇಕಾಗಿತ್ತು. Labour Department, Infrastructure Department, ಹೀಗೆ ಒಂದೆರಡು ಇಲಾಖೆಯನ್ನು ಬಿಟ್ಟರೆ ಬೇರೆ ಯಾವುದೇ ಇಲಾಖೆಯ Performance Budget ಇದುವರೆಗೂ ಬರಲಿಲ್ಲ. ಬಜೆಟ್ ಸ್ಪೀಚ್ ಆಗುವುದಕ್ಕೆ ಮುಂಚೆಯೇ ಇದನ್ನು ಕೊಡಬೇಕು ಎಂದು ತಾವು ವಿರೋಧ ಪಕ್ಷದ ನಾಯಕರಾಗಿದ್ದಾಗ ನಮಗೆ ಹೇಳುತ್ತಿದ್ದಿರಿ. ಇದು ನಮಗೆ ಇದುವರೆಗೂ ಬರಲಿಲ್ಲ. ಆದ್ದರಿಂದ, ಹಣಕಾಸು ಇಲಾಖೆಯವರಿಗೆ ಹೇಳಿ, ಇವತ್ತು

ಸಾಯಂಕಾಲವಾದರೂ Performance Budget ಅನ್ನು ಕೊಡಿ. ಅದು ಬಂದರೆ ನಾವು ಮತ್ತೇನನ್ನಾದರೂ ಹೇಳಲು ಅನುಕೂಲವಾಗುತ್ತದೆ. Performance Budget ಬಂದ ಮೇಲೆ ನಾವು ಒಂದಿಷ್ಟು ಮಾತನಾಡಬೇಕಾಗುತ್ತದೆ ಎಂದು ನಾನು ಅಧ್ಯಕ್ಷರಿಗೂ ಹೇಳಿದ್ದೇನೆ. ನೀವು ಇಲ್ಲಿದ್ದಾಗ ಪ್ರತಿ ಹಂತದಲ್ಲೂ ಅದನ್ನು insist ಮಾಡುತ್ತಿದ್ದಿರಿ, ಅದನ್ನು ಕೊಡದಿದ್ದರೆ ನಾನು ಭಾಷಣವನ್ನೇ ಮಾಡುವುದಿಲ್ಲ ಎಂದು ಹೇಳುತ್ತಿದ್ದಿರಿ. ನೀವು ಅಲ್ಲಿರಲಿ, ಇಲ್ಲಿರಲಿ, ಅಧಿಕಾರಿಗಳು ಹಾಗೇ ಇರುತ್ತಾರೆ, ಅದಕ್ಕಾಗಿ ನೀವು ಸ್ವಲ್ಪ ಒತ್ತಡ ತಂದು Performance Budget ಇಡುವಂಥದ್ದನ್ನು ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಒಂದು ವಿಷಯವೆನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ವಿಷಯಗಳನ್ನು ಗಂಭೀರವಾಗಿ ಆಲಿಸುತ್ತಾ ಕುಳಿತಿದ್ದಾರೆ. ಕೇವಲ ಮೂವರು ಸಚಿವರು ಮಾತ್ರ ಇದ್ದಾರೆ. ಸದನ ನಾಳೆಗೆ ಮುಗಿಯುತ್ತಿದೆ, ಇನ್ನೂ Performance Budget ಬಂದಿಲ್ಲ.

ಶ್ರೀ ಸಿದ್ಧರಾಮಯ್ಯ:- ಇನ್ನೂ ವರ್ಷ ಪೂರ್ತಿಯಾಗಿ ಮುಗಿದಿಲ್ಲವಲ್ಲ? ಹಾಗಾಗಿ Performance Budgetಅನ್ನು ಒಟ್ಟಿಗೇ ಜೂನ್ ತಿಂಗಳಲ್ಲಿ ಕೊಡುತ್ತೇವೆ. ಈಗ ಜನವರಿಯವರೆಗೆ ಅಂಕಿಅಂಶಗಳಿವೆ.

ಶ್ರೀ ಜಗದೀಶ್ ಶೆಟ್ಟರ್:- ಜನವರಿ ಅಂತ್ಯದವರೆಗಾದರೂ ಕೊಡಬಹುದಲ್ಲವೇ?

ಶ್ರೀ ಸಿದ್ದರಾಮಯ್ಯ:- ಬೇಡಿಕೆಗಳ ಮೇಲೆ ಚರ್ಚೆ ಮಾಡುತ್ತೇವಲ್ಲ, ಆಗ ಒಟ್ಟಿಗೇ ಕೊಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:– ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಾವು ಕಳೆದ ಬಾರಿ ಜನವರಿ ಅಂತ್ಯದವರೆಗೆ Performance Budgetಅನ್ನು ಕೊಟ್ಟಿದ್ದೆವು.

ಶ್ರೀ ಸಿದ್ದರಾಮಯ್ಯ:– ಬೇಡಿಕೆಗಳ ಮೇಲೆ ಚರ್ಚೆ ಮಾಡುತ್ತೇವಲ್ಲ, ಆಗ ಒಟ್ಟಿಗೇ ಜೂನ್‌ನಲ್ಲಿ ಕೊಡುತ್ತೇವೆ.

ಅಧ್ಯಕ್ಷರು:– ಚಲುವರಾಯಸ್ವಾಮಿಯವರೇ, ಮಾತನಾಡಿ. ನಿಮಗೆ 20 ನಿಮಿಷ ಮಾತ್ರ ಕಾಲಾವಕಾಶವಿದೆ.

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ):– ಮಾನ್ಯ ಅಧ್ಯಕ್ಷರೆ, ಆಯಿತು ಸ್ವಾಮಿ, ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಕುಳಿತಿದ್ದರೂ ಬೇರೆ ಸಚಿವರಿಲ್ಲ. ಮುಖ್ಯಮಂತ್ರಿಗಳು ಬಂದರೂ ಕಾರ್ಯದರ್ಶಿಗಳು ಬರುವುದಿಲ್ಲ. ಅನೇಕ ಜನ ಕಾರ್ಯದರ್ಶಿಗಳಿದ್ದಾರೆ, ಅದರಲ್ಲಿ ಇಬ್ಬರು ಮಾತ್ರ ಇಲ್ಲಿ ಹಾಜರಿದ್ದಾರೆ. ಆಯವ್ಯಯದ ಮೇಲೆ ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ಮೊದಲಿಗೆ ವಂದನೆಗಳನ್ನು ತಿಳಿಸುತ್ತೇನೆ. ಈ ವರ್ಷದ ಆಯವ್ಯಯದಲ್ಲಿ ಪ್ರಪ್ರಥಮವಾಗಿ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ, "ಇದು ನಮ್ಮ ಸರ್ಕಾರದ 2ನೇ ಆಯವ್ಯಯ ಪತ್ರ. ನನ್ನ ದೃಷ್ಟಿಯಲ್ಲಿ ಆಯವ್ಯಯ ಪತ್ರವೆಂದರೆ ಅದೊಂದು ಕೇವಲ ಅಂಕಿ ಅಂಶಗಳ ದಾಖಲೆ ಪತ್ರವಲ್ಲ. ಅದು ಸರ್ಕಾರದ ಒಳ ನೋಟಗಳನ್ನು ಮತ್ತು ಆಶಯಗಳನ್ನು ಬಿಂಬಿಸುವ ಹಾಗೂ ರಾಜ್ಯದ ಆರ್ಥಿಕ ಸಾಮರ್ಥ್ಯವನ್ನು ಸಾದರ ಪಡಿಸುವ ಸರ್ಕಾರದ ಅಧಿಕೃತ ಪತ್ರ". ಎಂದು ಹೇಳಿದ್ದಾರೆ. ಸುಮಾರು 130 ಪುಟಗಳಿರುವ ಈ ಆಯವ್ಯಯ ಪುಸ್ತಕವನ್ನು ಅವರು ಓದಿದಾಗ, ಇದೊಂದು ದಾಖಲೆ ಪತ್ರ ಎಂದು ನೂರಕ್ಕೆ ನೂರರಷ್ಟು ಖಚಿತಪಡಿಸತಕ್ಕದ್ದು ಎನ್ನುವುದು ನನ್ನ ಭಾವನೆ. ಬಹಳ ಜನ ಸದಸ್ಯರು ಮಾತನಾಡುವಾಗ ಹೇಳಿದರು, ಇದು ಸಿದ್ದರಾಮಯ್ಯನವರ ಬಜೆಟ್

ಆಗಲು ಸಾಧ್ಯವಿಲ್ಲ, ಅವರಿಗೆ ಕಾಲಾವಕಾಶ ಇರಲಿಲ್ಲವೋ ಅಥವಾ ಬೇರೆ ಯಾರೋ ಬರೆದು ಕೊಟ್ಟಿದ್ದನ್ನು ಓದಿದ್ದಾರೋ ಅಥವಾ ಅಧಿಕಾರಿಗಳು ಕೊಟ್ಟ ಕಾಪಿಯೇ ಎಂದು ಹೇಳಿದ್ದಾರೆ. ನಾವೆಲ್ಲ ನೋಡುತ್ತಿದ್ದ ಸಿದ್ದರಾಮಯ್ಯನವರೇ ಬೇರೆ, ಇವತ್ತಿನ ಸಿದ್ದರಾಮಯ್ಯನವರೇ ಬೇರೆ ಎನ್ನುವ ರೀತಿಯಲ್ಲಿ ಇವತ್ತಿನ ಬಜೆಟ್‌ಅನ್ನು ನಾವು ನೋಡುತ್ತಿದ್ದೇವೆ. ಆಯವ್ಯಯದ ಎರಡನೇ ಪುಟದಲ್ಲಿ, "ಕಳೆದ ಸಾಲಿನ ಆಯವ್ಯಯ ಪತ್ರದಲ್ಲಿ ನಾವು ಹಲವಾರು ಜನಪರ ಹಾಗೂ ಅಭಿವೃದ್ಧಿ ಯೋಜನೆಗಳನ್ನು ಘೋಷಿಸಿದ್ದೆವು. ಅವುಗಳಲ್ಲಿ ಬಹುತೇಕ ಯೋಜನೆಗಳು ಈಗಾಗಲೇ ಅನುಷ್ಠಾನಗೊಂಡಿವೆ." ಎಂದು ಹೇಳಿದ್ದಾರೆ. ಯಾವ ಯೋಜನೆ ಪ್ರಾರಂಭವಾಗಿದೆ ಅಥವಾ ಟೆಕ್ನಿಕಲ್ ಬಿಡ್ ಆಗಿದೆ ಅಥವಾ ಪೂಜೆಯಾಗಿದೆ ಅಥವಾ ಒಂದು ನೂರು ಕೋಟಿ ರೂಪಾಯಿ ಖರ್ಚಾಗಿ ಆನ್ ಗೋಯಿಂಗ್ಸ್‌ನಲ್ಲಿ ನಡೆಯುತ್ತಿದೆ ಎನ್ನುವುದನ್ನು ಮುಖ್ಯಮಂತ್ರಿಗಳು ಹೇಳಿದರೆ ನಮಗೆಲ್ಲರಿಗೂ ಸಮಾಧಾನವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಯಾವುದೇ ಇಲಾಖೆಯಿಂದ ಒಂದು ಗುರುತರವಾದಂಥ, ಸಾರ್ವಜನಿಕರಿಗೆ ಉಪಯೋಗವಾಗುವಂಥ ಹೊಸ ಸರ್ಕಾರದ ಕಲ್ಪನೆಯ ಹಿನ್ನೆಲೆಯಲ್ಲಿ, ಅದು ವಿದ್ಯುತ್ ಇಲಾಖೆ ಇರಬಹುದು, ರೈತರಿಗೆ ಉಪಯೋಗ ಆಗತಕ್ಕಂಥ ನೀರಾವರಿ ಇಲಾಖೆ ಇರಬಹುದು ಅಥವಾ ಬೃಹತ್ ಬೆಂಗಳೂರಿನಲ್ಲಿ ಏನಾದರೊಂದು ಹೊಸ ಯೋಜನೆ ಇರಬಹುದು, ಈ ರೀತಿಯ ಯಾವುದಾದರೊಂದು ಯೋಜನೆ ನಮ್ಮ ಕಣ್ಣು ತಪ್ಪಿಸಿ ಆಗಿದ್ದರೆ, ಅದನ್ನು ಹೇಳಿದರೆ ನಮಗೂ ಸಂತೋಷವಾಗುತ್ತದೆ. ಯಾವುದೇ ಒಂದು ಯೋಜನೆ ಕಳೆದ ಒಂದು ವರ್ಷದಲ್ಲಿ ಪ್ರಾರಂಭವಾಗಿಲ್ಲ ಎನ್ನುವುದನ್ನು ಸರ್ಕಾರ ಒಪ್ಪುತ್ತದೆ, ಮುಖ್ಯಮಂತ್ರಿಗಳು ಒಪ್ಪುತ್ತಾರೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಆರ್.ಡಿ.ಪಿ.ಆರ್. ಇಲಾಖೆಯ ಬಗ್ಗೆ ಹೇಳುವುದಾದರೆ, ನಾನು ಈ ಇಲಾಖೆಯ ಅಂಕಿಅಂಶಗಳನ್ನು ಹೇಳಲು ಹೋಗುವುದಿಲ್ಲ, ಇವುಗಳನ್ನೆಲ್ಲ ಹೇಳಲು ಹೋದರೆ ಸಾಕಷ್ಟು ಕಾಲಾವಕಾಶ ತೆಗೆದುಕೊಳ್ಳುತ್ತದೆ. ಆದರೆ ಈ ಇಲಾಖೆಯಲ್ಲಿ ನರೇಗಾದಲ್ಲಿ ಒಂದಷ್ಟು ಸ್ಕೀಂಗಳನ್ನು ತೆಗೆದುಕೊಂಡಿದ್ದಾರೆ. ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಬಹಳ ಬುದ್ಧಿವಂತರಿದ್ದಾರೆ ಮತ್ತು ಹಿರಿಯರಿದ್ದಾರೆ. ಅವರು ಬಹಳ ಬುದ್ಧಿವಂತಿಕೆಯಲ್ಲಿ 2–3 ಬಾರಿ ಅನೇಕ ಸ್ಕೀಂಗಳನ್ನು 10 ಪ್ರೋಗ್ರಾಂ, 12 ಪ್ರೋಗ್ರಾಂ, 15 ಪ್ರೋಗ್ರಾಂ ಎಂದು ಅನೌನ್ಸ್ ಮಾಡುವುದರ ಮೂಲಕ ಇಲಾಖೆಯ ಎಲ್ಲ ಕೆಲಸಗಳನ್ನು ನರೇಗಾ ಮೂಲಕ ಸಾಧಿಸುತ್ತೇವೆ ಎನ್ನುವ ಪಕ್ಷಿನೋಟವನ್ನು ಇಲ್ಲಿ ಕೊಟ್ಟಿದ್ದಾರೆ. ಕಳೆದ 7–8 ವರ್ಷಗಳಿಂದ ನಡೆಯುತ್ತಿರುವ ಈ ಯೋಜನೆಯ ಪ್ರತಿವರ್ಷದ ಬ್ರೇಕ್–ಅಪ್‌ಅನ್ನು ಕೊಡಬೇಕು. ನರೇಗಾ ಯೋಜನೆಯಲ್ಲಿ ನಾವು ಇಂಥಿಂಥ ಕೆಲಸಗಳನ್ನು ಇಷ್ಟಿಷ್ಟು ಕಂಪ್ಲೀಟ್ ಮಾಡಿದ್ದೇವೆ ಎಂದು ಹೇಳಬೇಕು. ಇವರು ಕೊಡುವ ವೇಜಸ್‌ನಲ್ಲಿ ಇವತ್ತು ಯಾರೂ ಸಹ ಕೆಲಸ ಮಾಡಲು ತಯಾರಿಲ್ಲ. ಅದು ಎಲ್ಲರಿಗೂ ಗೊತ್ತಿರುವ ಸತ್ಯ. ಹೆಚ್ಚು ಕೂಲಿಕಾರರು ಸಿಗುವುದು ಬಯಲುಸೀಮೆಯಲ್ಲಿ ಎಂದು ಹೇಳುತ್ತಾರೆ. ನಮ್ಮ ಬಯಲುಸೀಮೆಯಲ್ಲಿ ಒಂದು ತೆಂಗಿನಮರವನ್ನು ಹತ್ತಿ ಕಾಯಿ ಕೆಡವಬೇಕು ಎಂದರೆ ಅವನಿಗೆ 10 ಕಾಯಿಯನ್ನು ಕೊಡುತ್ತಾರೆ. ಒಂದು ದಿವಸಕ್ಕೆ ಅವನು ಕನಿಷ್ಠ 10 ತೆಂಗಿನ ಮರವನ್ನು ಹತ್ತುವಂಥ ಪ್ರಯತ್ನವನ್ನು ಮಾಡುತ್ತಾನೆ. ಅಂದರೆ ಅವನಿಗೆ ಒಂದು ದಿವಸಕ್ಕೆ ಒಂದು ನೂರು ತೆಂಗಿನ ಕಾಯಿ ಬಂದರೆ, ಒಂದು ತೆಂಗಿನಕಾಯಿಗೆ ಹತ್ತು ರೂಪಾಯಿ ಎಂದು ತೆಗೆದುಕೊಂಡರೂ ಅವನಿಗೆ ಒಂದು ಸಾವಿರ ರೂಪಾಯಿ ಬರುತ್ತದೆ. ಕಬ್ಬನ್ನು ಕಡಿದು ಲೋಡ್ ಮಾಡಲು ಹೋದರೆ ಕನಿಷ್ಠ 600 ರೂಪಾಯಿ ಸಿಗುತ್ತದೆ. ಅಂಥಾದ್ದರಲ್ಲಿ ಇವರು ಕೊಡುವ 174 ರೂಪಾಯಿಗಳಿಗೆ ಕೆಲಸವನ್ನು ಮಾಡಲು ಯಾರೂ ಬರುವುದಿಲ್ಲ. ಕನಿಷ್ಠ ಸತ್ಯವನ್ನೇ ಮಾತನಾಡುವುದಾದರೆ, ನರೇಗಾ ಯೋಜನೆಯಲ್ಲಿ ಬಂದು

ಕೂಲಿಗಾಗಿ ಕೆಲಸ ಮಾಡುವಂಥವರು ಒಬ್ಬರೂ ಸಿಗುವುದಿಲ್ಲ. ಇದನ್ನು ಸರ್ಕಾರ ಏಕೆ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವುದಿಲ್ಲ? ಅಧಿಕಾರಿಗಳಿಗೆ ಈ ಸತ್ಯ ಗೊತ್ತಿದ್ದರೂ, ಕನಿಷ್ಠ ಕೇಂದ್ರ ಸರ್ಕಾರದಿಂದ ಬರುವಂಥ ಹಣವನ್ನು ಸರಿಯಾದ ರೀತಿಯಲ್ಲಿ ಪಂಚಾಯಿತಿ ಮೂಲಕ ಖರ್ಚು ಮಾಡಿಸಿಯಾದರೂ ಒಂದು ಅಸೆಟ್ ಕ್ರಿಯೇಟ್ ಮಾಡುವಂಥ ಕೆಲಸ ಮಾಡಬಹುದು. ಈ ಯೋಜನೆಯಲ್ಲಿ ಕೆಲಸವನ್ನು ಜೆ.ಸಿ.ಬಿ.ಯಲ್ಲಿ ಮಾಡುವ ಹಾಗಿಲ್ಲ, ಕಂಟ್ರಾಕ್ಟ್ ಕೊಡುವ ಹಾಗಿಲ್ಲ ಎಂದೆಲ್ಲ ಹೇಳಿದರೂ, ಕೊನೆಗೆ ಅವರು ಇನ್‌ಡೈರೆಕ್ಟಾಗಿ ಇದೇ ರೀತಿ ಮಾಡಿ ಬಿಲ್ ತೆಗೆದುಕೊಳ್ಳಬೇಕು. ಈ ಯೋಜನೆಯಲ್ಲಿ ಎಲ್ಲ ಅಕೌಂಟಿಗೆ ಎರಡೆರಡು ಸಾವಿರ ರೂಪಾಯಿ ಹೋಗುತ್ತದೆ. ಅದರಲ್ಲಿ 500 ರೂಪಾಯಿಗಳನ್ನು ಅವರಿಗೆ ಕೊಟ್ಟು, ಅವರ ಮೂಲಕ ಹಣವನ್ನು ಡ್ರಾ ಮಾಡಿಸಿ ತೆಗೆದುಕೊಳ್ಳುವ ಬದಲು, ನೇರವಾಗಿ ಸತ್ಯವನ್ನೇ ಹೇಳಿ ಆ ಹಣ ಸದುಪಯೋಗವಾದರೆ ಈ ರಾಜ್ಯಕ್ಕೆ ಏನಾದರೂ ಅನುಕೂಲವಾಗುತ್ತದೆ. ಆದರೆ ಈ ಸತ್ಯವನ್ನು ಮರೆಮಾಚುತ್ತಾರೆ. ನಮ್ಮ ರಾಜ್ಯದಲ್ಲಿ ಯಾರೂ ಸಹ 174 ರೂಪಾಯಿಗಳ ಕೂಲಿಗೆ ಬರಲು ಸಾಧ್ಯವಿಲ್ಲ. ವಾಸ್ತವವಾಗಿ ರೈತರು ಅವರ ಜಮೀನಿನಲ್ಲಿ ಕೆಲಸ ಮಾಡಲು ಪಕ್ಕದ ಹಳ್ಳಿಗಳಿಂದ ಕೂಲಿಕಾರರನ್ನು ಕರೆದುಕೊಂಡು ಬಂದು ಅವರಿಗೆ ಊಟ ಕೊಟ್ಟು ಒಂದು ದಿನಕ್ಕೆ 250 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಅಂಥಾದ್ದರಲ್ಲಿ ಈ ಯೋಜನೆಯಲ್ಲಿ ಕೊಡುವ 174 ರೂಪಾಯಿಗಳನ್ನು ತೆಗೆದುಕೊಳ್ಳಲು ಯಾರೂ ಬರುವುದಿಲ್ಲ ಎನ್ನುವುದು ಮನವರಿಕೆಯಾಗಿದ್ದರೂ ಇದು ಬಹಳ ವರ್ಷಗಳಿಂದ ಹೀಗೇ ನಡೆದುಕೊಂಡು ಬರುತ್ತಿದೆ. ಇದರ ಬಗ್ಗೆ ಎನ್‌ಕ್ವೈರಿ ಮಾಡುವುದು, ಕ್ರಮ ತೆಗೆದುಕೊಳ್ಳುವುದು, ಬಿಲ್ ನಿಲ್ಲಿಸುವುದು ಬೇರೆ ವಿಚಾರ, ನಾನು ಕೆಲವು ದಾಖಲೆಗಳನ್ನು ನೋಡಿದೆ, ಈ ಯೋಜನೆಯಲ್ಲಿ ಮೊದಲನೇ ಹಂತದಲ್ಲಿ ತೆಗೆದುಕೊಂಡ ಕೆಲವು ಕಾಮಗಾರಿಗಳು ಇನ್ನೂ ಕಂಪ್ಲೀಟ್ ಆಗಿಲ್ಲ. ನರೇಗಾದಲ್ಲಿ ತೆಗೆದುಕೊಂಡ 2006, 2007, 2008ರ ಕಾಮಗಾರಿಗಳು

ಇನ್ನೂ ಕಂಪ್ಲೀಟ್ ಆಗದೇ ಇರುವಂಥವು ಇವೆ. ಆದ್ದರಿಂದ, ಈ ಯೋಜನೆಯನ್ನು ಮತ್ತೆ ನೀವು boost up ಮಾಡಿ ಇವತ್ತಿನ ಹಣಕಾಸಿನ ತೊಂದರೆಯನ್ನು ಮುಚ್ಚಿಡಲಿಕ್ಕೋಸ್ಕರ ನರೇಗಾ, ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ನೀವು ಬಹಳಷ್ಟು ಕೆಲಸವನ್ನು ತೆಗೆದುಕೊಂಡು ಮಾಡುತ್ತಿದ್ದೀರಿ ಎನ್ನುವುದನ್ನು ತೋರಿಸುತ್ತಿದ್ದೀರಿ ಎನ್ನುವುದು ಎದ್ದುಕಾಣುತ್ತದೆ. Total expenditure 47% ಎನ್ನುವುದನ್ನು ಎಲ್ಲರೂ ಹೇಳಿದ್ದಾರೆ. ಕಳೆದ ವರ್ಷ ಬಜೆಟ್‌ನಲ್ಲಿ 47% ಹಣ ಖರ್ಚಾಗಿದೆ. ಖರ್ಚು ಮಾಡದೆ ನೀವು ಏನು ಸಾಧಿಸಿದ್ದೀರಿ ಎನ್ನುವುದನ್ನು ಸರ್ಕಾರ ಅಂಕಿಅಂಶ ಸಹಿತ ಹೇಳಬೇಕಾಗುತ್ತದೆ. 47% ಹಣ ಖರ್ಚು ಮಾಡುವುದಕ್ಕಷ್ಟೇ ನಿಮಗೆ ತೃಪ್ತಿ ಆಗಿದೆಯೇ ಅಥವಾ ಇಲ್ಲವೇ? ಖರ್ಚಾಗದೇ ಇರುವುದಕ್ಕೆ ಏನಾದರೂ ಕಾರಣವಿದೆಯೇ? ಇಂಥ ಕಾರಣಕ್ಕೆ ನಾವು reach ಆಗಲಿಕ್ಕೆ ಆಗಲಿಲ್ಲ, ಬಜೆಟ್‌ನಲ್ಲಿ ಇಟ್ಟಂಥ ಹಣವನ್ನು expenditure ಮಾಡಲಿಕ್ಕೆ ಆಗಲಿಲ್ಲ, ಇಂಥ ಇಲಾಖೆಯಲ್ಲಿ ಇಂಥ ತೊಡಕು ಬಂತು, ಯಾವ ಕಾರಣಕ್ಕೋಸ್ಕರ ನೀವು ಕಳೆದ ವರ್ಷ ಇಷ್ಟೆಲ್ಲಾ boost up ಮಾಡಿ ಬಜೆಟ್‌ಅನ್ನು ಕೊಟ್ಟು 47%ಗೆ expenditure ನಿಲ್ಲಿಸಿರುವುದಕ್ಕೆ reason ಏನು ಎನ್ನುವುದನ್ನು ಸದನಕ್ಕೆ ತಿಳಿಸಿದರೆ ಬಹುಶಃ ಇದು ಒಂದು ರೀತಿ transparent ಅಗಿ ಇರುತ್ತದೆ ಎನ್ನುವುದು ನನ್ನ ಭಾವನೆ. M1ನಲ್ಲಿ ಮತ್ತು RDPR ಮೂಲಕ, Irrigation ಮೂಲಕ, Minor Irrigation ಮೂಲಕ tankಗಳನ್ನು, ಕಳೆದ 2–3 ದಿವಸಗಳ ಹಿಂದೆ ಬಹಳ ಚರ್ಚೆಯಾಯಿತು, ಮಾನ್ಯ ಸಣ್ಣ ನೀರಾವರಿ ಸಚಿವರೂ ಸಹ ನಾವು ಈ ಸಲ ಬಹಳ ಪ್ರಾಯೋಗಿಕವಾಗಿ ಮಾಡುತ್ತಿದ್ದೇವೆ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದರು. ಸ್ವಾತಂತ್ರ್ಯ ಬಂದು ಇಲ್ಲಿಯವರೆಗೆ, ಬ್ರಿಟಿಷರ ಕಾಲದಲ್ಲಿ ತದನಂತರ ರಾಜರ ಆಡಳಿತದಲ್ಲಿ ತೆಗೆದಂಥ ಕೆರೆಕಟ್ಟೆಗಳನ್ನು ಮುಚ್ಚಿಹಾಕಿದ್ದಾರೆಯೇ ವಿನಃ ಬಹುಶಃ ಹೊಸದಾಗಿ ಕೆರೆಕಟ್ಟೆಯನ್ನು ಕಟ್ಟತಕ್ಕಂಥದ್ದಾಗಲಿ, ಕೆರೆಗಳನ್ನು ಸಂಪೂರ್ಣವಾಗಿ ಅಭಿವೃದ್ಧಿ

ಮಾಡಿರುವುದಾಗಲಿ ಬಹುಶಃ ಸರ್ಕಾರದ ದಾಖಲೆಯಲ್ಲಿ ಯಾವುದೂ ಇಲ್ಲ, ಉದಾಹರಣೆಗೆ, ಅದು ಆಡಳಿತ ಮಾಡುವವರಿಗೂ ಗೊತ್ತು, ವಿರೋಧ ಪಕ್ಷದಲ್ಲಿರುವವರಿಗೂ ಗೊತ್ತು. ಪ್ರತಿಬಾರಿ ಹೇಳಿಕೊಂಡು ಹೋಗುವುದನ್ನು ಬಿಟ್ಟು ಮಾನ್ಯ ರಮೇಶ್ ಕುಮಾರ್‌ರವರು ಮತ್ತು ನಮ್ಮ ಕುಮಾರಣ್ಣನವರು ಮಾತನಾಡುತ್ತಾ ಮಧ್ಯೆ ಎರಡು ಒಳ್ಳೆಯ ಮಾತುಗಳನ್ನು ಹೇಳಿದರು. ಸಿದ್ದರಾಮಯ್ಯನವರು ಮೊದಲು ಒಳ್ಳೆಯ ದೃಢ ನಿರ್ಧಾರವನ್ನು ತೆಗೆದುಕೊಂಡು ಯಾವುದಾದರೊಂದು ಸಂಕಲ್ಪವನ್ನು ತೊಟ್ಟು ಕೆಲಸಕ್ಕೆ ಕೈಹಾಕಬೇಕಾಗುತ್ತದೆ. ಗ್ರಾಮೀಣಾಭಿವೃದ್ಧಿ ವ್ಯಾಪ್ತಿಗೆ ಕೆರೆ ಬರುತ್ತದೆ, Minor Irrigation ವ್ಯಾಪ್ತಿಗೆ ಬರುತ್ತದೆ, Major irrigation ವ್ಯಾಪ್ತಿಗೆ ಬರುತ್ತದೆ, ಕೋಟ್ಯಂತರ ರೂಪಾಯಿ ಹಣವನ್ನು ಆ ಇಲಾಖೆಗಳಲ್ಲಿ ನಾವು ಖರ್ಚು ಮಾಡುತ್ತೇವೆ. ಒಂದು ತಾಲ್ಲೂಕಿನಲ್ಲಿ ಕನಿಷ್ಠ ಒಂದು ವರ್ಷಕ್ಕೆ ಒಂದೊಂದು ಇಲಾಖೆಯಿಂದ, 1, 2, 3, ಒಂದೊಂದು ಇಲಾಖೆಗೆ ಒಂದು ಕೆರೆಯಾದರೂ ಸಹ ಮೂರು ಕೆರೆಯನ್ನು ಸಂಪೂರ್ಣವಾಗಿ survey ಮಾಡಿ ಹದ್ದುಬಸ್ತು ಮಾಡುವುದಾಗಲಿ, encroachment ತೆರವು ಮಾಡಿಸುವುದಾಗಲಿ, ತೂಬನ್ನು complete repair ಮಾಡಿಸಿ ನೀರು ತುಂಬಿಸುವುದಾಗಲಿ, ಹೂಳೆತ್ತುವುದಾಗಲಿ, ಮುಂದಿನ ಅಚ್ಚುಕಟ್ಟಿಗೆ ನೀರನ್ನು ಶೇಖರಣೆ ಮಾಡಿ ಜಮೀನುಗಳಿಗೆ ಕೊಡುವುದಾಗಲಿ, ಮತ್ತೆ 25 ವರ್ಷ 50 ವರ್ಷ ಆ ಕೆರೆಯ ಹತ್ತಿರ ಯಾವುದೇ ಒಂದು ಕಾಮಗಾರಿಯನ್ನು ಕೈಗೆತ್ತಿಕೊಳ್ಳದ ರೀತಿಯಲ್ಲಿ ಸಂಪೂರ್ಣವಾಗಿ ಆ ಕಾಮಗಾರಿಯನ್ನು ಕೈಗೆತ್ತಿಕೊಂಡು ಕೆಲಸ ಮಾಡಿದರೆ ಬಹುಶಃ ಆಗ ಏನಾದರೂ ಅದಕ್ಕೆ ಸಾರ್ಥಕತೆ ಆಗುತ್ತದೆ. ಆ ಒಂದು ನಿಟ್ಟಿನಲ್ಲಿ ಸರ್ಕಾರ ಮಾಡಬೇಕೇ ವಿನಃ ಬೇರೆಯವರ ಹಾಗೆ ನಾವೂ ಕೂಡ ಯೋಜನೆಯನ್ನು ಸೇರಿಸಿದ್ದೇವೆ, ನಾಳೆ 4 ಜನ ಕಂಟ್ರ್ಯಾಕ್ಟರುಗಳಿಗೆ, ಇಂಜಿನಿಯರುಗಳಿಗೆ ಅದರ ಅನುಕೂಲವನ್ನು, ಅದರ ಲಾಭವನ್ನು ಪಡೆದುಕೊಳ್ಳಲಿ ಎನ್ನುವ ನಿಟ್ಟಿನಲ್ಲಿ ಯೋಜನೆಗಳನ್ನು ಮಾಡಿಕೊಂಡು

ಹೋಗುವುದು ಬಹುಶಃ ಎಲ್ಲಾ ಸರ್ಕಾರಗಳಂತೆ, ಹಿಂದೆ ಬಂದಂಥ ಅನೇಕರ ಸಾಲಿನಲ್ಲಿ ತಾವೂ ನಿಲ್ಲುತ್ತೀರಿ ವಿನಃ ವಿಶೇಷವಾದ ಛಾಪು ಮೂಡಿಸತಕ್ಕಂಥ ಯಾವುದೇ ತೀರ್ಮಾನ ಈ ಬಜೆಟ್‌ನಲ್ಲಿ ಕಾಣುತ್ತಿಲ್ಲ. ಸುವರ್ಣ ಗ್ರಾಮದ ಬಗ್ಗೆ ನಮ್ಮ ಕುಮಾರಣ್ಣ ಮತ್ತಿತರರು ಅಂಕಿಅಂಶದ ಬಗ್ಗೆ ಮಾಡನಾಡಿದರು. ಸರ್ಕಾರದ ಹಿಂದೆ ಮುಂದೆ ಎಲ್ಲವನ್ನೂ ಬಿಚ್ಚಿಟ್ಟರೂ ಸಹ ಅವರೇನೂ ಜಗ್ಗುವುದಿಲ್ಲ. ಕುಮಾರಣ್ಣ ಸಹ 4 ಗಂಟೆ, 5 ಗಂಟೆ, 8 ಗಂಟೆ ಭಾಷಣ ಮಾಡಿ ಸುಸ್ತಾಗಬೇಕೇ ವಿನಃ ಅವರ ಭಾಷಣಕ್ಕೆ ಏನಾದರೂ ಅರ್ಥ ಇರುವ ರೀತಿಯಲ್ಲಿ ಸರ್ಕಾರ ಸ್ಪಂದಿಸತಕ್ಕಂಥದ್ದನ್ನು ನಾವು ಕಾಣುತ್ತಿಲ್ಲ, ನೋಡುತ್ತಿಲ್ಲ. ಕೊನೆಯ ಅವಧಿಯಲ್ಲಿ ಚುನಾವಣೆಗೆ ಹೋಗುವ time ನಲ್ಲಿ ಸರ್ಕಾರ ಈ ರೀತಿ ಉದಾಸೀನ ಮಾಡುವುದನ್ನು ನಾವು ಕಂಡಿದ್ದೇವೆ. But, ಪ್ರಾರಂಭದಲ್ಲಿಯೇ ಈ ಸರ್ಕಾರ ಈ ಸ್ಥಿತಿಗೆ ತಲುಪಲಿಕ್ಕೆ ಕಾರಣವೇನು? ನಿಮ್ಮಲ್ಲಿ ಏನು problem ಇದೆ ಎನ್ನುವುದರ ಬಗ್ಗೆ ನಮಗೆ ತಿಳಿಯುವ ಅವಶ್ಯಕತೆ ಇಲ್ಲ. ಆದರೂ, ನಮ್ಮಿಂದ ಏನಾದರೂ ಸಹಾಯ ಬೇಕಿದ್ದರೆ ಕೊಡಬಹುದು. ರಾಜ್ಯಕ್ಕೆ ಒಳ್ಳೆಯದಾಗುವುದಾದರೆ, ರಾಜ್ಯದ ಜನರಿಗೆ ಒಳ್ಳೆಯದಾಗುವ ಕಾರ್ಯಕ್ರಮ ಕೊಡುವುದಾದರೆ, ವಿರೋಧ ಪಕ್ಷದಿಂದ ಏನಾದರೂ ಸಲಹೆ, ಸಹಕಾರ ಕೊಡಬಹುದು. ಕನಿಷ್ಠ ಒಂದು ವರ್ಷದಲ್ಲಿ ಈ ಪರಿಸ್ಥಿತಿಗೆ ಇವತ್ತಿನ ಆಡಳಿತದ ಸರ್ಕಾರ ಬರುತ್ತದೆಂದು ನಾವ್ಯಾರೂ ತಿಳಿದುಕೊಂಡಿರಲಿಲ್ಲ. ಅಧಿಕಾರಿಗಳೆಲ್ಲರೂ ಕೆಲವು ಸಂದರ್ಭದಲ್ಲಿ, ನೀವು ಹೇಳಿದ್ದೆಲ್ಲ ಸರಿ ಸರ್, first class ಆಗಿ ಇದೆ, ಸರ್ ಎಂದು ಹೇಳಬಹುದು. ಅದರ ಎದುರಿಗೆ ಇಲ್ಲ, ಇದು ಸರಿ ಇಲ್ಲ ಎಂದು ಹೇಳಲಿಕ್ಕೆ ಇವತ್ತಿನ ಪರಿಸ್ಥಿತಿಯಲ್ಲಿ ಸಾಧ್ಯವಾಗುವುದಿಲ್ಲ. ಆದರೆ, ವಾಸ್ತವ ಸತ್ಯ ಒಂದು ಕಡೆ ಇರುತ್ತದೆ. 130 ಪುಟಗಳ ಬಜೆಟ್ ಎಂದು ಹೇಳಲೇಬೇಕಲ್ಲ? ಅದರಲ್ಲಿ ಇರುವುದೆಲ್ಲ ಯಾವ ರೀತಿ ಇದೆ ಎನ್ನುವುದನ್ನು...

ಶ್ರೀ ವೈ.ಎನ್. ರುದ್ರೇಶ್‌ಗೌಡ:- ಒಟ್ಟಿನಲ್ಲಿ ಇಷ್ಟು ವರ್ಷಗಳಲ್ಲಿ ಕೊಟ್ಟಿರುವಂಥ ಬಜೆಟ್‌ಗಳಿಗಿಂತ ಇದು ಉತ್ತಮ ಬಜೆಟ್ ಎಂದು ಜನರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ಹಿರಿಯ ಸದಸ್ಯರು ಮಾತನಾಡುತ್ತಿದ್ದಾರೆ. ಆದರೆ, ಈ ಸದನದಲ್ಲಿ ಮಂತ್ರಿಗಳು ಯಾರೂ ಇಲ್ಲ. ಒಬ್ಬರೂ ಮಂತ್ರಿಗಳಿಲ್ಲ, ಸರ್ಕಾರದ ಪರವಾಗಿ ಉತ್ತರ ಹೇಳುವವರಿಲ್ಲ. ನೀವು ಯಾರಿಗೆ ಹೇಳುತ್ತೀರೋ ಅರ್ಥವಾಗುತ್ತಿಲ್ಲ. ಇಬ್ಬರು ಸಚಿವರು ಇಲ್ಲಿದ್ದು ಅವರು ಅವರ ಪಾಡಿಗೆ ಮಾತನಾಡಿಕೊಳ್ಳುತ್ತಿದ್ದಾರೆ. ಸದನದಲ್ಲಿ ಚರ್ಚೆ ನಡೆಯುತ್ತಿರುವ ಬಗ್ಗೆ ಅವರಿಗೆ seriousness ಇಲ್ಲ.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ:- ಕೋನರೆಡ್ಡಿಯವರೆ, ವಿಧಾನಸಭೆಯಲ್ಲಿ ಚರ್ಚೆಯಾದ ವಿಚಾರಕ್ಕೆ ಉತ್ತರ ಕೊಡಬೇಕೆನ್ನುವುದು compulsory ಇದ್ದರೆ ಬಹುಶಃ ನಡೆಯುತ್ತಿತ್ತೇನೋ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ಸ್ವಲ್ಪವಾದರೂ Treasury bench ಗೆ ಗಂಭೀರತೆ ಇದೆಯೇ? Senior most ಶಾಸಕರು ಮಾತನಾಡುತ್ತಿದ್ದಾರೆ. ಬಜೆಟ್ ಮೇಲೆ ಚರ್ಚೆಯಾಗುತ್ತಿದೆ. ಮಂತ್ರಿಗಳು ತಮ್ಮದೇ ಆದ ಕಲ್ಪನಾ ಸಾಮ್ರಾಜ್ಯದಲ್ಲಿ ವಿಹರಿಸಿಕೊಂಡು ಕುಳಿತುಕೊಂಡು ಬಿಟ್ಟರೆ ಹೇಗೆ? ಆಯವ್ಯಯದ ಮೇಲೆ ಚರ್ಚೆಯಾಗುತ್ತಿದೆ ಎಂದರೆ ಆ seriousness ಬೇಡವೇ?

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:- ಬಜೆಟ್ ಮೇಲೆ ಚರ್ಚೆ ನಡೆಯುವಾಗ ಸದನದಲ್ಲಿ ಯಾರೂ ಸಚಿವರು ಬೇಡ ಎಂದರೆ ಹೇಗೆ? ಸಚಿವರು ಸದನದಲ್ಲಿ ಇರದಿರುವುದು ಇದು ಒಳ್ಳೆಯ ಸಂಸ್ಕೃತಿಯೇ?

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ:– ಮೊನ್ನೆ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಬಹಳ ಚರ್ಚೆಯಾಗಿದೆ. ನಮ್ಮ Revenue Minister ರವರು ಹಿರಿಯ ಸಚಿವರು ನಮಗೆ ಬಹಳಷ್ಟು ಪ್ರತ್ಯುತ್ತರವನ್ನು ಕೊಟ್ಟರು. ಕೊನೆಗೆ ಅದು ನಮಗೆ ಸಮಾಧಾನವಾಗದಿದ್ದರೂ ಸಮಾಧಾನಕರವಾಗಿ ಕುಳಿತುಕೊಂಡೆವು. ನಂತರ ನನಗೆ ಗೊತ್ತಾಯಿತು. ಚಲುವರಾಯಸ್ವಾಮಿಯವರು ಹೇಳುತ್ತಿರುವುದು ಸತ್ಯ, ಬೋರ್‌ವೆಲ್ ಹಾಕಲಿಕ್ಕೆ CRF ಅಡಿಯಲ್ಲಿ ಯಾವುದೇ ತರಹದಲ್ಲಿ ಸಾಧ್ಯವಿಲ್ಲ, ಈಗಿರುವ PD account ನಲ್ಲಿ ಅದನ್ನು ಉಪಯೋಗಿಸಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದನ್ನು Cabinet ನಲ್ಲಿ ಚರ್ಚೆ ಮಾಡಿದರು. ಕೊನೆಗಾದರೂ ಅವರಿಗೆ ಸತ್ಯ ಮನವರಿಕೆಯಾಯಿತಲ್ಲ ಎಂದು ನಾವೀಗ ಸಂತೋಷಪಡಬೇಕಾಗುತ್ತದೆ. ಆದರೆ, ಒಂದು ಕಡೆ ಮಾನ್ಯ ಮುಖ್ಯಮಂತ್ರಿಯವರು, ಮತ್ತೊಂದು ಕಡೆ Revenue Minister, ಆಮೇಲೆ ಗ್ರಾಮೀಣಾಭಿವೃದ್ಧಿ ಸಚಿವರು, ಸರ್ಕಾರ ಬಂದು ಒಂದು ವರ್ಷ 10 ತಿಂಗಳು ಆಗಿದೆ, ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸುಧಾರಿಸಲಿಕ್ಕಾಗಿಲ್ಲ. ನಾವು ಏನೋ ಯೋಜನೆ ಕೊಡುತ್ತೇವೆ, Multi-Village Scheme ತರುತ್ತೇವೆ ಎನ್ನುವುದು ಬೇರೆ. ಕನಿಷ್ಠ drop ಆದಂಥ scheme ಗಳಿಗೆ ಮತ್ತೆ ಬೋರ್‌ವೆಲ್ ಕೊಟ್ಟು scheme ಅನ್ನು improve ಮಾಡುವುದಾಗಲಿ, pipeline damage ಆದರೆ, ಆ pipeline ಅನ್ನು ಸರಿಮಾಡುವುದಾಗಲಿ ಕನಿಷ್ಠ ಆ ಒಂದು ನಿಟ್ಟಿನಲ್ಲಿ ಇವತ್ತು ಸರ್ಕಾರ ಹೆಜ್ಜೆ ಹಾಕುತ್ತಿಲ್ಲ. ವಿರೋಧ ಪಕ್ಷದ ಯಾವುದೇ ಕೂಗಿಗೆ ಅವರು ಮನ್ನಣೆ ಕೊಡದಿರುವುದು, ಕೊನೆಯಪಕ್ಷ ನೀವಾದರೂ ಸದನ ಇಲ್ಲದಿರುವ time ನಲ್ಲಾದರೂ ಮಾನ್ಯ

ಮುಖ್ಯಮಂತ್ರಿಯವರಿಗೆ ನೇರವಾಗಿ ಹೇಳಿ ಈ ಸಮಸ್ಯೆಯನ್ನು ಬಗೆಹರಿಸಿದರೆ ನಾವು ಬೇಸಿಗೆ ದಿನಗಳಲ್ಲಿ ಮಳೆ ಬರುವವರೆಗೆ ಹಳ್ಳಿಗಳಲ್ಲಿ ಓಡಾಡಲಿಕ್ಕೆ ಅನುಕೂಲವಾಗುತ್ತದೆ. ಇವತ್ತು ಶಾಶ್ವತವಾದ ಕುಡಿಯುವ ನೀರಿನ ಅವಶ್ಯಕತೆ ಇದೆ. ತಾತ್ಕಾಲಿಕವಾಗಿ ಇವತ್ತೇನು ನಾವು ಅವಶ್ಯಕತೆಯನ್ನು ಪೂರೈಸಬೇಕಾಗಿದೆ, ಅದರ ಜೊತೆಗೆ ಇನ್ನುಮುಂದೆ ಇದೇ ರೀತಿ problem ಬರಬಹುದು. ಪ್ರಕೃತಿ ನಮ್ಮ ಕೈಯಲ್ಲಿಲ್ಲ. ಯಾವಾಗ ಏನು ಬದಲಾವಣೆಯನ್ನು ಬೇಕಾದರೂ ನಾವು ನೋಡಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಕನಿಷ್ಠ ಇವತ್ತೇನು ನೀರಾವರಿ ಅಚ್ಚುಕಟ್ಟು ಇದೆ, ಕೆರೆಗಳಿಗೆ ನೀರು ತುಂಬಿಸುವುದರ ಮೂಲಕ ಕೆರೆಗಳಿಂದ ಸಂಪೂರ್ಣವಾಗಿ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ಮಂಜೂರು ಮಾಡುವುದರ ಮೂಲಕ ಈ ಒಂದು ತೀರ್ಮಾನವನ್ನು ಸರ್ಕಾರ ಬಹಳ planned ಆಗಿ ತೆಗೆದುಕೊಳ್ಳದಿದ್ದರೆ ಕಷ್ಟ. ಮುಂದಿನ ದಿನಗಳಲ್ಲಿ ಹಳ್ಳಿಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛ ಕುಡಿಯುವ ನೀರು ಎಂದು 1 ಸಾವಿರ ಗ್ರಾಮಗಳನ್ನು announce ಮಾಡಿದರು. ಆ 1000 ಗ್ರಾಮಗಳಲ್ಲಿ ಬಹುಶಃ ಎಷ್ಟು ಗ್ರಾಮ, ಎಷ್ಟು unit ಗಳು ಮುಗಿದಿದೆ, ಎಷ್ಟು ದುಡ್ಡು ಖರ್ಚಾಗಿದೆ ಎನ್ನುವುದನ್ನು ದಯಮಾಡಿ ಉತ್ತರ ಕೊಡುವ time ನಲ್ಲಿ ಕೊಡಬೇಕು. ನಾವು ಸ್ವಚ್ಛ ನೀರನ್ನು ಕೊಡುತ್ತೇವೆಂದು 1000 ಗ್ರಾಮವನ್ನು ಕಳೆದ ಬಜೆಟ್‌ನಲ್ಲಿ announce ಮಾಡಿದರು. ಬಜೆಟ್ ಕೊಟ್ಟು 8 ತಿಂಗಳಾಗಿದೆ. 8 ತಿಂಗಳಲ್ಲಿ ಕೆಲಸ ಮಾಡಲಿಕ್ಕೆ ಕನಿಷ್ಠ 2 ತಿಂಗಳು ಸಾಕು. ಅದರಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ, 1000 ಗ್ರಾಮದಲ್ಲಿ ಎಷ್ಟು ಕೆಲಸ complete ಆಗಿದೆ ಎನ್ನುವ ಬಗ್ಗೆ ಅವರು ಉತ್ತರ ಕೊಡಬೇಕು. ಯಾವುದೂ ದೊಡ್ಡ ಟೆಂಡರ್‌ಗೆ ಹೋಗಬೇಕಾಗಿಲ್ಲ. ಅದನ್ನು Land Army ಮೂಲಕ ಕೆಲಸ ಮಾಡಿಸುತ್ತಿದ್ದಾರೆ. ಯಾವುದೇ ತರಹದ ವಿಶೇಷವಾದಂಥ technical bid or financial bid open ಮಾಡಬೇಕಾಗಿಲ್ಲ ಅಥವಾ ಯಾವುದೇ ಒಂದು financial bid ಅಡ್ಡಿ ದೊಡ್ಡ contractor, tender ಕರೆಯಬೇಕಾಗಿಲ್ಲ. ಒಂದು

ಸಣ್ಣ ಕಾಮಗಾರಿ, ಒಂದು ಊರಿಗೆ ಕುಡಿಯುವ ನೀರಿನ unit ಅನ್ನು ಬಹುಶಃ announce ಮಾಡಿ 8 ತಿಂಗಳಾದರೂ ಸಹ ಇಲ್ಲಿಯವರೆಗೂ ಒಂದು ಗ್ರಾಮವನ್ನೂ ಸಹ ಸಂಪೂರ್ಣವಾಗಿ complete ಮಾಡಲಿಕ್ಕೆ ಸಾಧ್ಯವಾಗಿಲ್ಲ.

ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:– ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಆಗಿದೆ.

ಶ್ರೀ ಎನ್. ಚಲುವರಾಯಸ್ವಾಮಿ:– ಆಯಿತಪ್ಪ, ನಿಮ್ಮ ಜಿಲ್ಲೆಯಲ್ಲಾಗಿರಬಹುದು. ನಮ್ಮ ಜಿಲ್ಲೆಯಲ್ಲಿ ಆಗಿಲ್ಲ. ಅದಕ್ಕೋಸ್ಕರ ಹೇಳುತ್ತಿದ್ದೇನೆ. ನಿಮ್ಮ ಜಿಲ್ಲೆಯಲ್ಲಿ ಆಗಿದ್ದರೆ ತುಂಬಾ ಸಂತೋಷ. ನಮ್ಮ ಜಿಲ್ಲೆಯಲ್ಲಿ ಆಗಿಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆಯ ಅಚ್ಚುಕಟ್ಟಿನಲ್ಲಿ ಇಲಾಖೆಯಲ್ಲಿ ಬರುವ ಎಲ್ಲ ಕಾಮಗಾರಿಗಳು ಜನರಿಗೆ ಉಪಯೋಗವಾಗತಕ್ಕಂಥ ಬಹಳ ಮುಖ್ಯವಾದ ಕೆಲಸಗಳು ಇವೆ, ಅದನ್ನು ಆದಷ್ಟು time-bound ಕಾರ್ಯಕ್ರಮಗಳಾಗಿ ಹಾಕಿಕೊಂಡು ಕೆಲಸ ಮಾಡಲಿಕ್ಕೆ ಸರ್ಕಾರ ತೀರ್ಮಾನ ಮಾಡಬೇಕೆನ್ನುವುದನ್ನು ಒತ್ತಾಯಿಸುತ್ತೇನೆ. ಹಳ್ಳಿಗಳಲ್ಲಿ cold storage ಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ನೀರಿನ ಅಭಾವದಿಂದ ಹೆಚ್ಚು ಜನರು ಸಣ್ಣಪುಟ್ಟ ಆರ್ಥಿಕ ಪರಿಸ್ಥಿತಿಯನ್ನು ಸಮತೋಲನ ಮಾಡಲಿಕ್ಕೋಸ್ಕರ ಎಲ್ಲಾ ಕಡೆ ತರಕಾರಿ ಬೆಳೆಯುವುದನ್ನು ನೋಡುತ್ತಿದ್ದೇವೆ. ಅದರಿಂದ market ವ್ಯತ್ಯಾಸ ಆಗತಕ್ಕಂಥದ್ದು, ಕೆಲವೊಮ್ಮೆ ಸಾಕಷ್ಟು ಸಮಸ್ಯೆಗಳಿಗೆ ಈಡಾಗುವ ಪರಿಸ್ಥಿತಿ ಇದೆ. ಆದ್ದರಿಂದ ಎಲ್ಲಾ ತಾಲ್ಲೂಕುಗಳಲ್ಲಿ cold storage ಅವಶ್ಯಕತೆ ಇದೆ. ನಾವು ಅನೇಕ scheme ಗಳಡಿಯಲ್ಲಿ ಹಣ ಖರ್ಚು ಮಾಡಿ ಅನವಶ್ಯಕವಾದಂಥ ಯೋಜನೆಗಳನ್ನು ಮಾಡುವ ಬದಲು ರೈತರಿಗೆ ವಿಶೇಷವಾದಂಥ ಯಾವುದು ಪ್ರಮುಖವಾದ ಅವಶ್ಯಕತೆ ಇದೆ ಎನ್ನುವುದನ್ನು ಸರ್ಕಾರ ತೀರ್ಮಾನಿಸಬೇಕಾಗುತ್ತದೆ. ಅದರಲ್ಲೂ ಬಹಳ ಪ್ರಮುಖವಾದುದು ಎಂದರೆ, cold storage. ಮೊನ್ನೆ ಭತ್ತ ಖರೀದಿ ಮಾಡಿದರು. ಭತ್ತ ಖರೀದಿ

ಮಾಡುವಂಥ ಸಂದರ್ಭದಲ್ಲಿ ನಾನು ಮದ್ದೂರಿನಲ್ಲಿ ಹೋಗುತ್ತಾ ನೋಡಿದೆ. 1.5 ಕಿ.ಮೀ. ಉದ್ದಕ್ಕೂ ಲಾರಿಗಳು ನಿಂತಿದ್ದವು. Tractor ಗಳು ನಿಂತಿದ್ದವು. ರೈತರು ಬಂದು ನನ್ನ ಕಾರ್ ಅಡ್ಡ ಹಾಕಿ ನಿಲ್ಲಿಸಿದರು. ನಾವು ಬಂದು 4 ದಿವಸಗಳಾಗಿದೆ, ಊಟವಿಲ್ಲ, ಕುಡಿಯುವುದಕ್ಕೆ ನೀರು ಸಿಗುವುದಿಲ್ಲ, godown ಖಾಲಿ ಇಲ್ಲವೆಂದು ಹೇಳುತ್ತಾರೆ, 4 ದಿವಸಗಳಿಂದ unload ಮಾಡುತ್ತಿಲ್ಲವೆಂದು ಹೇಳಿದರು. ಸಾಕಷ್ಟು warehouse ಗಳ ಅವಶ್ಯಕತೆ ಇದೆ. ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ godwon ಗಳ ಅವಶ್ಯಕತೆ ಇದೆ. ಇನ್ನು ಮುಂದೆ market ಗೆ ಪರಿಸ್ಥಿತಿ ಚೆನ್ನಾಗಿಲ್ಲದೇ ಇರುವುದರಿಂದ ಸರ್ಕಾರ intervene ಆಗುವುದರಿಂದ godrown ಅವಶ್ಯಕತೆ ಹೆಚ್ಚಾಗುವುದರಿಂದ ಬಹುಶಃ godown ಅನ್ನು ಹೆಚ್ಚು ಮಾಡುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳುತ್ತೇನೆ. ನೀರಾವರಿ ಇಲಾಖೆಯಲ್ಲಿ ಕೃಷ್ಣಾ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಬೆಳಗಾಂ ಅಧಿವೇಶನದಿಂದ ಹಿಡಿದು ನಮ್ಮ ನಾಯಕರು ಸುದೀರ್ಘವಾಗಿ ಚರ್ಚೆ ಮಾಡಿದರು. ರಾಯರೆಡ್ಡಿ, ಬಸವರಾಜ ಬೊಮ್ಮಾಯಿಯವರು, ಸಾಕಷ್ಟು ಜನ ಅದರ ಬಗ್ಗೆ ಚರ್ಚೆ ಮಾಡಿದ್ದಾರೆ. ನಾನು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಕಾವೇರಿ ಬೇಸಿನ್ ಬಗ್ಗೆ ಹೇಳುತ್ತೇನೆ. ಕನಿಷ್ಠ ಕಾವೇರಿ ಅಚ್ಚುಕಟ್ಟಿನಲ್ಲಿ ಮಂಡ್ಯ, ತುಮಕೂರು tailend ಇದೆ. ನೀವು ಕೋಲಾರಕ್ಕೆ, ರಾಮನಗರಕ್ಕೆ ನೀರು ಕೊಡುವುದು ಹೋಗಲಿ, ಪಕ್ಕದಲ್ಲಿರುವ ತುಮಕೂರಿಗೆ, ಮಂಡ್ಯಕ್ಕೆ ನೀವು ನೀರು ಕೊಡಲಿಕ್ಕಾಗಲಿ. ಅದಕ್ಕೆ ಯೋಜನೆಯನ್ನು ಈ ಬಜೆಟ್‌ನಲ್ಲಿ ನಾನು ನೋಡಲಿಲ್ಲ. ಏನಾದರೂ ನೀರಾವರಿ ಇಲಾಖೆಯಲ್ಲಿ ವಿಶೇಷವಾಗಿ ಯೋಜನೆಯನ್ನು ಕೈಗೆತ್ತಿಕೊಳ್ಳದಿದ್ದರೆ tail-end ಪ್ರದೇಶಕ್ಕೆ ನೀರಾವರಿ ಒದಗಿಸುವ ಕೆಲಸವನ್ನು ನೀವು ಮಾಡದೇ ಇದ್ದರೆ ಮುಂದಿನ ದಿನಗಳಲ್ಲಿ ಕಷ್ಟ, ನಾನು ಹೇಳಿದಂತೆ, ಇದರ ಮೂಲಕ ಕನಿಷ್ಠ ಕುಡಿಯುವ ನೀರಿಗಾದರೂ ಕೊನೆಗೆ ಕೊಡಿ ಎನ್ನುವ ಕೂಗು ಇದೆ. ಇವತ್ತು ಹಳ್ಳಿಗಳಲ್ಲಿ, ತಾಲ್ಲೂಕು ಮಟ್ಟದಲ್ಲಿ ಬಂದು ಪ್ರತಿಭಟನೆ ಮಾಡತಕ್ಕಂಥ ಜನ ಮುಂದಿನ

ದಿನಗಳಲ್ಲಿ ರಾಜ್ಯ ಮಟ್ಟದಲ್ಲಿ, ಮಂತ್ರಿಗಳ, ಮುಖ್ಯಮಂತ್ರಿಯವರ ಮನೆಗಳ ಮುಂದೆ ಪ್ರತಿಭಟನೆ ಮಾಡುವ situation ಬರುತ್ತದೆ. ಹೇಮಾವತಿ ಇರಬಹುದು, ಕಾವೇರಿ ಅಚ್ಚುಕಟ್ಟಿನಲ್ಲಿ ಬರುವ VC ಇರಬಹುದು, ಸಣ್ಣಪುಟ್ಟ HE ಇರಬಹುದು, ಕಬಿನಿ ಇರಬಹುದು, ಹಾರಂಗಿ ಇರಬಹುದು ಸಂಪೂರ್ಣವಾಗಿ, ಸಮಗ್ರ re-modernization ಎಂದು ಗೊರೂರಿನಿಂದ ಚನ್ನರಾಯಪಟ್ಟಣಕ್ಕೆ ತೆಗೆದುಕೊಳ್ಳಬೇಕೆಂದು ಬಹಳ ವರ್ಷಗಳಿಂದ ಏನು ಚರ್ಚೆಯಾಗುತ್ತಿದೆ, ಅದು ಹಾಗೆಯೇ ಇದೆ, ಆ ರೀತಿ ಎಲ್ಲಾ ಅಚ್ಚುಕಟ್ಟಿನ ಪ್ರದೇಶಕ್ಕೆ ನೀರನ್ನು ಹರಿಸುವ, ಸಂಪೂರ್ಣವಾಗಿ ಆ ಕಾಮಗಾರಿಗಳ ಕೆಲಸವನ್ನು ಕೈಗೆತ್ತಿಕೊಳ್ಳುವ ರೀತಿಯಲ್ಲಿ ನೀರಾವರಿ ಇಲಾಖೆ ಇದನ್ನು ಸಂಪೂರ್ಣವಾಗಿ ಕೈಗೆತ್ತಿಕೊಳ್ಳಬೇಕೆಂಬುದು ನನ್ನ ವಿನಂತಿ. K.R.S. ನಿಂದ ಒಂದು high level ಕಾಲುವೆಯನ್ನು ವೀರವೈಷ್ಣವಿ ನದಿಗೆ, ಮಾರ್ಕೋನಹಳ್ಳಿಗೆ ಬಿಡಲಿಕ್ಕೆ ಹಿಂದಿನಿಂದಲೂ proposal ಇದೆ. ಈ ಬಾರಿ ಮಳೆ ಹೆಚ್ಚು ಬಂದು ಒಂದು ಲಕ್ಷ cusecs ನೀರು ಹೊಳೆಯಲ್ಲಿ ಹೋಯಿತು. ನಾವು ಯಾರೂ ಹಿಡಿಯಲಿಕ್ಕಾಗಲ್ಲ. 2–3 ವರ್ಷಕ್ಕೊಂದು ಸಾರಿ ಈ ತರಹ ಆಗುವುದು ಸಹಜವಾಗಿ ಬಂದಿದೆ. ಬಹುಶಃ 200 ಕೋಟಿ ರೂ. ಆಗುವ ಕಾಮಗಾರಿಯದು ಎಂದು ಹೇಳುತ್ತಾರೆ. ಇಂಥ ಒಂದು ಕಾಮಗಾರಿಯನ್ನು ಮಾಡುವುದರ ಮೂಲಕ ಕನಿಷ್ಠ ಮಂಡ್ಯ, ರಾಮನಗರ ಎರಡೂ ಜಿಲ್ಲೆಗಳಲ್ಲಿ ಸಾಕಷ್ಟು ಉಪಯೋಗವನ್ನು ಪಡೆದುಕೊಳ್ಳಲಿಕ್ಕೆ ಅವಕಾಶವಿದೆ. ಬಹುಶಃ ನೀರಾವರಿ ಇಲಾಖೆಯಲ್ಲಿ ನಮ್ಮ ವಿಶ್ವೇಶ್ವರಯ್ಯನವರು ಕಟ್ಟಿದಂಥ K.R.S. dam ಏನಿದೆ ಅಲ್ಲಿ ಹೆಚ್ಚಿನ flood ಬಂದಾಗ ಆ ನೀರು waste ಆಗಿ ಹೊಳೆಗೆ ಹೋಗುವ ಬದಲು ಅದನ್ನು ಮಾರ್ಕೋನಹಳ್ಳಿ ಮತ್ತು ವೀರವೈಷ್ಣವಿ ನದಿಗೆ ತರುವ ಮೂಲಕ ಅಲ್ಲಿ ಶೇಖರಣೆ ಮಾಡಿ, ಬೇರೆಯದಕ್ಕೆ ಉಪಯೋಗಿಸಲಿಕ್ಕೆ ಅನುಕೂಲವಾಗುತ್ತದೆ. ದಯಮಾಡಿ ಈ ನಿಟ್ಟಿನಲ್ಲಿ ಮಾಡಬೇಕು, tail-end ಗೆ ನೀರು ಹೋಗುವುದಕ್ಕೆ ತುಂಬಾ ತೊಂದರೆಯಿರುವುದರಿಂದ

ಆಧುನೀಕರಣಗೊಳಿಸುವುದು ಅತ್ಯಂತ ಅವಶ್ಯಕತೆಯಿದೆ. ಹೀಗಾಗಿ tail-end ಗೆ ಆಧುನೀಕರಣ ಮಾಡಬೇಕೆಂದು ವಿನಂತಿಸುತ್ತೇನೆ. Housing Scheme ನಲ್ಲಿ ಬಹಳಷ್ಟು ಘೋಷಣೆಗಳಾದವು. ಪ್ರತಿ ಪಂಚಾಯತಿಗೆ 20 ಮನೆಗಳನ್ನು ಕೊಟ್ಟಿರಿ, ಆ 20 ಮನೆಗಳ ಕೆಲಸ ಇನ್ನೂ ಪ್ರಾರಂಭವಾಗಿಲ್ಲ, ಒಂದು ವರ್ಷದ progress zero. 20 ಮನೆ ಬಹುಶಃ ಏನೇನೂ ಅಲ್ಲ, ಒಂದು ವರ್ಷದ ಬಜೆಟ್ ಮುಗಿದು ಎರಡನೇ ವರ್ಷದ ಬಜೆಟ್ ಬಂದಾಗ ಆ ಕಟ್ಟಿರುವ ಎಲ್ಲಾ 20 ಮನೆಗಳು ಈಗ ಎಲ್ಲವೂ GPS ಆಗಿ ultimate ಮಂಜೂರಾತಿ ಸಿಗುವ ಪರಿಸ್ಥಿತಿಗೆ ಬಂದಿವೆ. ಹಳೆಯ bills ಇನ್ನೂ payment ಆಗಿಲ್ಲ. ನಮ್ಮ ವಸತಿ ಸಚಿವರಿಗೆ ಇಂದು ಆರೋಗ್ಯ ಸರಿಯಿಲ್ಲ ಅವರಿಗೆ ಆರೋಗ್ಯ ಸರಿ ಹೋಗಿ ಪುನಃ ಈ ಸದನಕ್ಕೆ ಅದಷ್ಟು ಬೇಗನೆ ಬರಲಿ ಎಂದು ನಿನ್ನೆನ್ನೂ ಸಹ ಸದನದ ಮೂಲಕ ದೇವರಲ್ಲಿ ಪ್ರಾರ್ಥಿಸಿದ್ದೇವೆ. ಅವರು ಅನೇಕ ಸಲ ಈ ಸದನದಲ್ಲಿಯೇ ಕಳೆದ ಬಾಕಿಯನ್ನು payment ಮಾಡಲಿಕ್ಕಾಗುತ್ತಿಲ್ಲವೆಂದು ಹೇಳಿದ್ದಾರೆ. ಖಾಸಗಿಯಾಗಿಯೂ ಮಾತನಾಡಿದ್ದಾರೆ. Housing Scheme ನಲ್ಲಿ ಕೊಳಚೆ ಪ್ರದೇಶ, slum ಮತ್ತು ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಕೊಟ್ಟು ಗುಡಿಸಲುರಹಿತವಾಗಿ ಮಾಡುತ್ತೇವೆಂದು ಎಲ್ಲಾ ಸರ್ಕಾರಗಳು announce ಮಾಡಿಕೊಂಡು ಬಂದವು. ಇವತ್ತಿನವರೆಗೆ ಹಳ್ಳಿಯಲ್ಲಿ ಗುಡಿಸಲು ರಹಿತ ಹಳ್ಳಿಗಳನ್ನಾಗಿ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇಂದೂ ಸಹ ಪ್ರತಿ ತಾಲ್ಲೂಕಿಗೂ ಹೋದರೂ ಅಲ್ಲೋ ಇಲ್ಲೋ ಹಳ್ಳಿಗಳಲ್ಲಿ ಗುಡಿಸಲು ಇರುವುದು ನಮ್ಮ ಕಣ್ಣಿಗೆ ಬೀಳುತ್ತದೆ. ಹೀಗೆ ನೀವು ಇನ್ನು ಎಷ್ಟು ವರ್ಷ ತೀರ್ಮಾನ ತೆಗೆದುಕೊಳ್ಳುತ್ತೀರಿ? ಇನ್ನು ಎಷ್ಟು ವರ್ಷ ರೈತರನ್ನು ಈ ತರಹ ಪರಿಸ್ಥಿತಿಯಲ್ಲಿ ಮುಂದುವರಿಸಬೇಕೆನ್ನುವುದು ನಿಮ್ಮ ಸರ್ಕಾರದ ಚಿಂತನೆ ಇದೆ ಎನ್ನುವುದನ್ನು ದಯವಿಟ್ಟು ಹೇಳಬೇಕಾಗುತ್ತದೆ. Housign Scheme ನಲ್ಲಿ ನೀವೊಂದು ಸ್ಪಷ್ಟವಾದ ನಿಲುವು ತೆಗೆದುಕೊಳ್ಳಬೇಕು. ಒಂದು ಪಂಚಾಯಿತಿಗೆ ಕನಿಷ್ಠ ನೂರು ಮನೆಗಳನ್ನು ಕೊಡುವಂಥ ನಿರ್ಧಾರ ತೆಗೆದುಕೊಳ್ಳಬೇಕು.

ಈಗಿರುವ ಪಂಚಾಯಿತಿ ವ್ಯವಸ್ಥೆಯ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಹಾತ್ಮ ಗಾಂಧಿಯವರು ಕನಸು ಕಂಡಿದ್ದಂಥ ಸ್ವರಾಜ್ಯ ಇವತ್ತು ಏನಾಗಿದೆ, ರಾಮರಾಜ್ಯ ಹೋಗಿ, ಇವತ್ತು ಅವರು ನಮ್ಮ ಬಗ್ಗೆ ಮಾಡನಾಡುವುದು ನಾವು ಅವರ ಬಗ್ಗೆ ಮಾಡನಾಡುವುದಿಲ್ಲ, ಬಹುಶಃ ಮನೆಗಳ ಆಯ್ಕೆಯ ವಿಚಾರದಲ್ಲಿ ಸಾಕಷ್ಟು ಸಮಸ್ಯೆಯಾಗುತ್ತಿದೆ. ಈ ವಿಚಾರವನ್ನು ಸರ್ಕಾರ ಏನಾದರೊಂದು ತೀರ್ಮಾನ ತೆಗೆದುಕೊಂಡು, ನೂರು ಮನೆಗಳಿಗೆ ಒಂದು ಬಾರಿ ಆಯ್ಕೆ ಮಾಡಿ ಹಂತ ಹಂತವಾಗಿ ಮನೆಗಳನ್ನು ಬಿಡುಗಡೆ ಮಾಡಿ. ಅಂದೇ ಕೆಲಸ ಮಾಡಿ ಒಟ್ಟಿಗೆ ತೆಗೆದುಕೊಳ್ಳುವುದಿಲ್ಲ, ಆದರೆ, ಆ ನೂರು ಮನೆಗಳನ್ನು ಲಾಟರಿ ಮೂಲಕ ಮಾಡಿ ಆಯ್ಕೆ ಮಾಡುತ್ತೀರಾ ಅಥವಾ ಯಾವ ರೀತಿಯಲ್ಲಿ ಮಾಡುತ್ತೀರಾ ಎಂಬುದರ ಬಗ್ಗೆ ನೀವೊಂದು ತೀರ್ಮಾನ ತೆಗೆದುಕೊಳ್ಳಿ. ಬಹುಶಃ ಲಾಟರಿ ಮೂಲಕ ಆಯ್ಕೆ ಮಾಡುವುದು ಉತ್ತಮ ತೀರ್ಮಾನ ಎಂದೆನಿಸುತ್ತದೆ. ಈ ನಿಟ್ಟಿನಲ್ಲಿ Housing Scheme ನಲ್ಲಿ 20 ಮನೆಗಳನ್ನು ಕೊಡುವುದರ ಮೂಲಕ ಎಲ್ಲರಿಗೂ ಸಹ ಸಂಪೂರ್ಣವಾಗಿ ಮನೆಗಳನ್ನು ಕೊಟ್ಟಿದ್ದೇವೆಂದು ತೃಪ್ತಿ ಪಡಿಸುವುದಕ್ಕಾಗುವುದಿಲ್ಲ. ನಿಮ್ಮ ಆಲೋಚನೆಯಂತೆ ಎಲ್ಲಾ ಹಳ್ಳಿಗಳಲ್ಲಿ ಗುಡಿಸಲುರಹಿತ ಹಳ್ಳಿಗಳನ್ನಾಗಿ ಮಾಡಲು ಸಾಧ್ಯವಾಗುವುದಿಲ್ಲ. ಹೀಗಾಗಿ ಇದನ್ನು ಸರಿಪಡಿಸಬೇಕು. Mysore Sugars ನಮ್ಮ ಮಂಡ್ಯಕ್ಕೆ ಒಂದು credit. ಮೈಸೂರು ಮತ್ತು ಮಂಡ್ಯ ಎರಡೂ ಒಂದೆ. ಮಾನ್ಯ ಸಿದ್ದರಾಮಯ್ಯನವರು ಮೈಸೂರಿನಿಂದ ಬೆಂಗಳೂರಿಗೆ ಬರಬೇಕಾದರೆ ಮಂಡ್ಯದ ಮೂಲಕವೇ ಬರಬೇಕು. ಅವರಿಗೆ ಮೊದಲಿನಿಂದಲೂ ಮಂಡ್ಯದ ಮೇಲೆ ಅಭಿಮಾನವಿದೆ, ಹೀಗಾಗಿ ಮಂಡ್ಯಕ್ಕೆ ಏನಾದರೊಂದು ಮಾಡುತ್ತಾರೆನ್ನುವ ನಂಬಿಕೆಯನ್ನಿಟ್ಟಿದ್ದೆ. ಅವರ ಒಂದು ದೊಡ್ಡ ಸಾಧನೆ ಎಂದರೆ, ಭಾವನಾತ್ಮಕವಾಗಿರುವ My sugar company ಆಸ್ತಿ J.C. Road ನಲ್ಲಿದೆ. ಬಹಳ ವರ್ಷಗಳಿಂದ ಎಂಥಹ ಪರಿಸ್ಥಿತಿ ಬಂದರೂ ಸಹ ವ್ಯತ್ಯಾಸಗಳಾಗದ ರೀತಿಯಲ್ಲಿ ಹಿಂದಿನ ಸರ್ಕಾರಗಳು ನೋಡಿಕೊಂಡು

ಬಂದವು. ಕೆಲವರ ಕೈಯಲ್ಲಿ ಆಗದೇ factory ಗೆ ಬೀಗ ಹಾಕಿ ಬಿಟ್ಟರು. ಅದಕ್ಕಿಂತ ಹೆಚ್ಚಿಗೆ ಅದನ್ನು ಮಾರಲಿಕ್ಕೆ ಹೋಗಲಿಲ್ಲ. ಅಂದು ಕುಮಾರಸ್ವಾಮಿಯವರು ಹಳ್ಳಿಗಳಲ್ಲಿ ಮಾತು ಕೊಟ್ಟ ಹಾಗೆ ನಾನು ಮತ್ತು ಅವರು ಹಾಗೂ ನಮ್ಮ ಎಲ್ಲಾ ಶಾಸಕರೆಲ್ಲರೂ ಸೇರಿ ಆ ಸಂದರ್ಭದಲ್ಲಿ ಅದಕ್ಕೆ 73 ಕೋಟಿ ಕೊಟ್ಟು ಪುನಃ ಪ್ರಾರಂಭಿಸಿದೆವು. ಇವತ್ತು ಏನಾಗಿದೆ ಎಂದರೆ, ಅದನ್ನ joint venture ನಲ್ಲಿ ಅಭಿವೃದ್ಧಿಗೊಳಿಸುತ್ತೇವೆಂದು ಹೋಗಿದ್ದಾರೆ. ಅದನ್ನು joint venture ಗೆ ಕೊಟ್ಟು ಅಲ್ಲಿ ಬರುವ ಹಣದಿಂದ ಆ factory ಯನ್ನು ಸಂಪೂರ್ಣವಾಗಿ ಅಭಿವೃದ್ಧಿಗೊಳಿಸುತ್ತೇವೆಂದು ಹೋಗಿದ್ದಾರೆ. ಸಿದ್ದರಾಮಯ್ಯನವರಿಗೆ ಕೈ ಮುಗಿದು ವಿನಂತಿಸುತ್ತೇನೆ ಸ್ವಾಮಿ ದಯಮಾಡಿ ಇಂಥ ಸಾಹಸಕ್ಕೆ ಕೈ ಹಾಕಬೇಡಿ. ನಮ್ಮ ಜಿಲ್ಲೆಯ ಜನ ಒಂದ್ಹೊತ್ತು ಊಟ ಇರದಿದ್ದರೂ ಪರವಾಗಿಲ್ಲ ಉಪವಾಸ ಇದ್ದರೂ ಸ್ವಾಭಿಮಾನ ಮತ್ತು ಭಾವನಾತ್ಮಕಕ್ಕೆ ಹೆಚ್ಚು ಒತ್ತನ್ನು ಕೊಡತಕ್ಕಂಥವರು. ಇಡೀ ರಾಜ್ಯದಲ್ಲಿ ಸರ್ಕಾರಿ Sugar Factory ಇರುವುದು ಅದೊಂದೆ. ಸರ್ಕಾರದಲ್ಲಿ ಸಾವಿರಾರು ಕೋಟಿ ರೂಪಾಯಿಗಳು ವ್ಯತ್ಯಾಸವಾಗತಕ್ಕಂಥದ್ದನ್ನು ನಾವು ಕಂಡಿದ್ದೇವೆ. ಹೀಗಾಗಿ 1,38,008 ಕೋಟಿ ಬಜೆಟ್‌ನಲ್ಲಿ ನಿಮಗೆ ನೂರು ಕೋಟಿ ಏನೇನು ಅಲ್ಲ. ನೂರು ಕೋಟಿ ರೂಪಾಯಿಗಳನ್ನು ಅದಕ್ಕೆ ವಿಶೇಷವಾಗಿ ಕೊಟ್ಟುಬಿಡಿ. But ಆ ಒಂದು joint venture ಅನ್ನು ತೆಗೆದು, ಬೇಕಾದರೆ ನೀವೇ ಆ ಸಂಸ್ಥೆಯಲ್ಲಿರುವ ಆಸ್ತಿಯನ್ನು ಅಭಿವೃದ್ಧಿಗೊಳಿಸಿ ಅದರಿಂದ ಬರತಕ್ಕಂಥ ಆದಾಯದಿಂದ ಮುಂದಿನ ದಿನಗಳಲ್ಲಿ ಆ factory ಗೆ ಅನುಕೂಲವಾಗಲಿ. ಆದರೆ, ಅದನ್ನು joint venture ಮೂಲಕ ಬೇರೆಯವರಿಗೆ ಆ property ಯನ್ನು sale ಮಾಡತಕ್ಕಂಥದ್ದನ್ನು ದಯಮಾಡಿ ತಪ್ಪಿಸಬೇಕು. ಇದು ನಿಮ್ಮ ಸಾಧನೆಯಾಗಬಾರದು ನಾಳೆ ನೀವು ಮಾಜಿಯಾದ ಮೇಲೂ ಮಂಡ್ಯದಲ್ಲಿ ಹೋದಾಗ, ಅಲ್ಲಿನ ಜನರು, ನೋಡಿ ಈ ಸಿದ್ದರಾಮಯ್ಯನವರೆ ಆ ಆಸ್ತಿ ಮಾರಿದ್ದು ಅದನ್ನು joint venture ಗೆ ಕೊಟ್ಟಿದ್ದು ಎಂದು ನಾಲ್ಕು ಜನ

ಮಾತನಾಡುವ ಪರಿಸ್ಥಿತಿಯಾಗುವುದು ಬೇಡ. ಇಡೀ ಜಿಲ್ಲೆಯ ಜನರ ಅಭಿಪ್ರಾಯವನ್ನು ನಾನು ಈ ಸದನದ ಮೂಲಕ ತಮ್ಮ ಮುಂದೆ ತರುತ್ತಿದ್ದೇನೆಂದು ಹೇಳುತ್ತೇನೆ. ಇನ್ನು ಮೈಸೂರು-ಬೆಂಗಳೂರು ರಸ್ತೆ. ಸಿದ್ದರಾಮಯ್ಯವನರು ಖುಷಿ ಪಡಬೇಕು. ಬೆಂಗಳೂರಿನಿಂದ ಮೈಸೂರಿಗೆ ಹೋಗಲಿಕ್ಕೆ 4 hours ಬೇಕಾಗುತ್ತದೆ. ಬೆಂಗಳೂರಿನ Majestic ನಲ್ಲಿ ನೀವು move ಆಗಬಹುದು, ಕೆಲವೊಮ್ಮೆ ಕೆಂಗೇರಿ ಯಿಂದ ಮೈಸೂರುವರೆಗೆ move ಆಗುವುದಕ್ಕೆ ಆಗುವುದಿಲ್ಲ ಅಂಥ ಒಂದು traffic ದಿನೇ ದಿನೇ ಹೆಚ್ಚಾಗುತ್ತಿದೆ. ಅದಕ್ಕೆ ಕಾರಣ tourism. ಆ ಭಾಗದಲ್ಲಿ ಮಡಿಕೇರಿ ಇರಬಹುದು, ಊಟಿ ಇರಬಹುದು, ಚಾಮುಂಡೇಶ್ವರಿ ಬೆಟ್ಟ ಇರಬಹುದು, ಮೈಸೂರು ಅರಮನೆ ಇರಬಹುದು.

ಅಧ್ಯಕ್ಷರು:- ಅದು ನಿಮ್ಮ ವಿಚಾರ ಅಲ್ಲ ಬಿಡಿ. ಇದು ಬೇರೆ.

ಶ್ರೀ ಅಶೋಕ ಖೇಣಿ:- ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಹೇಳಿಬಿಡುತ್ತೇನೆ. ಇದು Bangalore-Mysore Express Project, we are already waiting CM ರವರು PWD Minister ರವರ ಜೊತೆಯಲ್ಲಿ ಒಂದು meeting ಮಾಡಬೇಕು. ಅವರಿಗೆ ಟೈಂ ಸಿಕ್ಕಿಲ್ಲವಂತೆ, 9 ತಿಂಗಳಾಯಿತು, it is the most important project. ಆ project ಆದರೆ, it would create one lakh jobs. ಇವರು ಆಗಿಲ್ಲವೆಂದು ಹೇಳುತ್ತಾರೆ. ಅದರಿಂದ ಇದೆಲ್ಲಾ problem ಆಗಿ death ಆಗುತ್ತಿರುವುದು. ನನ್ನ request ಏನೆಂದರೆ ಇದನ್ನು budget ನಲ್ಲಿ ಹಾಕಲಿ. Why they are not encouraging? Why they are preventing the other people from doing that job? -

ಶ್ರೀ ಎನ್. ಚಲುವರಾಯಸ್ವಾಮಿ:- ಈಗ ರಸ್ತೆ ಮಾಡಿ ಎಂದು ಚರ್ಚೆ ಮಾಡುವುದಕ್ಕೆ ಹೋದರೆ ದಾರಿ ತಪ್ಪಿ ಬಿಡುತ್ತದೆ ಹೀಗಾಗಿ ನಾನು ಮಾಡುವುದಕ್ಕೆ ಹೋಗುವುದಿಲ್ಲ. ರಸ್ತೆ ಮಾಡಿದ್ದರೆ ಜನ ತೃಪ್ತಿ ಪಡುತ್ತಿದ್ದರೇನೋ, township ಮಾಡುವುದಕ್ಕೆ ಹೋಗಿ ರಸ್ತೆ ಮಾಡುವುದಕ್ಕೆ ಹೋಗಿಲ್ಲ. ಅಂತಿಮವಾಗಿ ರಸ್ತೆ ಮಾಡುತ್ತೇನೆಂದು ಹೇಳುತ್ತಿದ್ದೀರಿ, ನಿಮಗೆ ರಸ್ತೆ ಮಾಡುವ ತೀರ್ಮಾನ ಬಂದರೆ ಸ್ವಾಗತವೆಂದು ಹೇಳುತ್ತೇನೆ.

ಶ್ರೀ ಅಶೋಕ್ ಖೇಣಿ:- ಮಾನ್ಯ ಅಧ್ಯಕ್ಷರೆ, ರೈತರು ಅದಕ್ಕೆ against ಇದ್ದಾರೆಂದು ಹೇಳಿದರು. ಮಂಡ್ಯದಲ್ಲಿ ನಾನೊಂದು function ಮಾಡಿದೆ. ನಾನು ಯಾವ ರೈತರು ಇದಕ್ಕೆ favour ಆಗಿದ್ದಾರೆ ಅವರು ಆ notification ತೆಗೆದುಕೊಂಡು ಬನ್ನಿ ಎಂದು ಹೇಳಿದೆ, 3 ಲಕ್ಷ ಜನ ಆ project ಗೆ favour ಆಗಿ ಬಂದರು. ಏಕೆಂದರೆ, ಈ project ರೈತರ against ಮಾಡುತ್ತಿಲ್ಲ, middlemen, ಬೇನಾಮಿ ಜನರು ಮಾಡುತ್ತಿದ್ದಾರೆ.

ಶ್ರೀ ಎನ್. ಚಲುವರಾಯಸ್ವಾಮಿ:- ಇದು, ಪ್ರಜಾಪ್ರಭುತ್ವ ಬೇಡ ಎನ್ನುವುದಕ್ಕೂ ಬರುತ್ತಾರೆ, ಬೇಕು ಎನ್ನುವುದಕ್ಕೂ ಬರುತ್ತಾರೆ, ಈಗ ಅದು ಬೇಡ. ನಾನು ಸಿದ್ದರಾಮಯ್ಯನವರನ್ನು ಖಾಸಗಿಯಾಗಿ ಎರಡು ಮೂರು ಸಾರಿ ವಿನಂತಿಸಿದೆ. ಅವರ ದೃಷ್ಟಿ ಏಕೋ ಈ ರಸ್ತೆಯ ಮೇಲೆ ಬಿದ್ದಿಲ್ಲ. ಅವರು ಮುಖ್ಯಮಂತ್ರಿಯಾಗಿ ಈಗ ಆ ರಸ್ತೆಯಲ್ಲಿ ಹೋಗಲಿಕ್ಕೆ ಸಮಸ್ಯೆಯಾಗುವುದಿಲ್ಲ. ಮುಖ್ಯಮಂತ್ರಿಯಿಂದ ಮಾಜಿಯಾದ ಮೇಲೆ ಅವರಿಗೆ ಸಮಸ್ಯೆ ಏನೆಂದು ಗೊತ್ತಾಗುತ್ತದೆ. ಈಗ ಅವರು helicopter ನಲ್ಲಿ ಹೋಗುತ್ತಾರೆ. ದಯಮಾಡಿ ಬೆಂಗಳೂರು – ಮೈಸೂರು ರಸ್ತೆಯನ್ನು ಎಂಟು ಪಥದ ರಸ್ತೆಯನ್ನಾಗಿ ಮಾಡಬೇಕಾಗುತ್ತದೆ. ನಾಳೆ ಅದಕ್ಕೆ acquisition ಏನೇ ಸಮಸ್ಯೆ ಬರಬಹುದು. ಮುಂದಿನ ನೂರು ವರ್ಷಗಳ ದೃಷ್ಟಿ ಇಟ್ಟುಕೊಂಡು city ಗಳಲ್ಲಿ flyover ಮಾಡಿದರೂ by-pass ಅವಶ್ಯಕತೆ ಇದೆ. ಇವೆಲ್ಲವನ್ನೂ

ಸಹ ನೀವು serious ಆಗಿ ಆ ಇಲಾಖೆಯಲ್ಲಿ ಗಮನಹರಿಸಿ ಅದನ್ನು ಕೈಗೆತ್ತಿಕೊಳ್ಳಬೇಕೆಂದು ನಿಮ್ಮ ಮೂಲಕ ಹೇಳುತ್ತೇನೆ. ಆರೋಗ್ಯ ಇಲಾಖೆಯ ಬಗ್ಗೆ ಹೇಳುವುದಾದರೆ, ಈಗ ತಾನೇ ನಮ್ಮ ಮಹಿಳಾ ಸದಸ್ಯರೊಬ್ಬರು ಮಾತನಾಡುತ್ತಾ ಹೇಳಿದರು. PHC ಗಳಲ್ಲಿ 24x7 ನ ಪರಿಸ್ಥಿತಿ ಇವೆಲ್ಲಾ ಇಂದು ಅವ್ಯವಸ್ಥೆಗಳಿಂದ ಕೂಡಿದೆ. ಡಾಕ್ಟರ್‌ಗಳಿಗೆ ಸಂಬಳ ಜಾಸ್ತಿ ಮಾಡಬೇಕಾಗುತ್ತದೆ, ಸಂಬಳ ಕಡಿಮೆ ಇದ್ದರೆ ಡಾಕ್ಟರ್‌ಗಳ್ಯಾರೂ ಬರುವುದಿಲ್ಲ. ಇವತ್ತೂ ಸಹ P.H.C. ಗಳಲ್ಲಿ contract basis ಮೇಲೆ ಕರೆದರೆ ಯಾರೂ ಸಹ ಡಾಕ್ಟರ್‌ಗಳು ಬಂದು report ಮಾಡುವುದಿಲ್ಲ. So ಅವರ salary ಹೆಚ್ಚು ಮಾಡುವುದು, ಒಂದು PHC sanction ಮಾಡಿದರೆ ಅಲ್ಲಿ ಸಂಪೂರ್ಣವಾಗಿ quarters, compound, ಕುಡಿಯುವ ನೀರಿನ ವ್ಯವಸ್ಥೆ ಎಲ್ಲವನ್ನೂ ಸಹ ಒಂದು unit ಆಗಿ ಮಾಡಬೇಕು. ಆಗ ಮಾತ್ರ ಅದು ಉಪಯೋಗವಾಗುತ್ತದೆ. ಒಂದು ಕಟ್ಟಡ ನಿರ್ಮಾಣ ಮಾಡಿ ಒಂದು ವರ್ಷದ ನಂತರ ಮತ್ತೆ ಶೌಚಾಲಯ ಕಟ್ಟುವುದು, ಸುಮಾರು ಐದಾರು ವರ್ಷಗಳ ನಂತರ ಮತ್ತೆ ಅಲ್ಲಿ quarters ಕಟ್ಟಿಸಿ ಕೊಡುತ್ತೀರಿ. ಆದರೆ, ಡಾಕ್ಟರ್‌ಗಳು ಅಲ್ಲಗೆ ಬಂದು ವಾಸ ಮಾಡುವುದಿಲ್ಲ. ಏಕೆಂದರೆ, ಅಲ್ಲಿನ ಅನುಕೂಲತೆ ಮತ್ತು ಅನಾನುಕೂಲತೆ ನೋಡಿಕೊಂಡು ಡಾಕ್ಟರ್‌ಗಳ್ಯಾರೂ ಅಲ್ಲಿಗೆ ಬರುವುದಿಲ್ಲ. ಇದರಿಂದ, ಬಹಳ ಸಮಸ್ಯೆ ಆಗುತ್ತದೆ. ಆದ್ದರಿಂದ, ದಯಮಾಡಿ maintenance and construction ಕೆಲಸಗಳೆಲ್ಲವನ್ನೂ planned ಆಗಿ ಮಾಡಿದರೆ ಅಲ್ಲಿಯ ಜನಕ್ಕೆ ಉಪಯೋಗವಾಗುತ್ತದೆ. ಮತ್ತೆ ಇತ್ತೀಚಿನ ದಿನಗಳಲ್ಲಿ contract basis ಮೇಲೆ ಡಾಕ್ಟರ್‌ಗಳು ಬಾರದೇ ಇರುವುದರಿಂದ, ಅವಶ್ಯಕತೆಗೆ ಅನುಗುಣವಾಗಿ ಡಾಕ್ಟರ್‌ಗಳ ನೇಮಕಾತಿಯನ್ನು ಮಾಡಬೇಕೆಂದು ಹೇಳುತ್ತೇನೆ. ಹಾಗೆಯೇ ಇವತ್ತಿನದಿವಸ ಸುಮಾರು ಆರು ಸಾವಿರ ಚಿಲ್ಲರೆ ಅಂಗನವಾಡಿ ಕೇಂದ್ರಗಳಿದ್ದರೂ ಸುಮಾರು ಮೂರು ಸಾವಿರ ಚಿಲ್ಲರೆ ಅಂಗನವಾಡಿಗಳಿಗೆ ಇದುವರೆಗೂ ಕಟ್ಟಡ ಇಲ್ಲ. ಇದು ನಮ್ಮೆಲ್ಲರಿಗೂ ತಲೆತಗ್ಗಿಸುವಂಥ

ವಿಚಾರವಾಗಿದೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಒಂದು ಅಂಗನವಾಡಿ ಕೇಂದ್ರ ಸ್ಥಾಪನೆ ಆದರೆ, ಅಲ್ಲಿ ಕುಡಿಯುವ ನೀರು ಮತ್ತು ಅಡಿಗೆ ಮನೆ ಎಲ್ಲವೂ ಕೂಡ ಸಂಪೂರ್ಣವಾಗಿ ಆಗುವ ರೀತಿಗೆ ಯೂನಿಟ್ ಕಾಸ್ಟ್ ನಿಗದಿ ಮಾಡಿ ಹಾಗೆಯೇ ಉಳಿದಿರುವಂಥ ಅಂಗನವಾಡಿ ಕಟ್ಟಡಗಳ ಕೆಲಸವನ್ನು phase-1, phase-2, phase-3 ಮಾಡಿ ಈ ಐದು ವರ್ಷಗಳಲ್ಲಿ ಸಂಪೂರ್ಣವಾಗಿ ಅಂದರೆ, 100ಕ್ಕೆ 100ರಷ್ಟು ಅಂಗನವಾಡಿ ಕಟ್ಟಡಗಳನ್ನು ನಿರ್ಮಾಣ ಮಾಡತಕ್ಕಂಥ ಕೆಲಸವನ್ನು ನೀವು ಮಾಡಬೇಕು. ಅದನ್ನು ಡಿಲೇ ಮಾಡತಕ್ಕಂಥದ್ದು ಸೂಕ್ತವಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮೊನ್ನೆದಿವಸ ನಮ್ಮ ನಾಯಕರು KIADB ಬಗ್ಗೆ ಸುದೀರ್ಘವಾಗಿ ಮಾತನಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಅದರ ಬಗ್ಗೆ ಎಷ್ಟರಮಟ್ಟಿಗೆ ಉತ್ತರ ಕೊಡುತ್ತಾರೆಯೋ ನಮಗೆ ಗೊತ್ತಿಲ್ಲ. ನಿನ್ನೆ ದಿವಸ ಅವರ ಜೊತೆಯಲ್ಲಿ ನಾವೂ ಸಹ ದಾಬಸ್‌ಪೇಟೆಗೆ ಹೋಗಿದ್ದೆವು. ಅಲ್ಲಿ BPL ಸಂಸ್ಥೆಗೆ 150 ಎಕರೆ ಜಮೀನನ್ನು ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ಇದು ನಿಮಗೂ ಸಹ ಇಷ್ಟವಿಲ್ಲದಂಥದ್ದು ಮತ್ತೆ ಇದೆಲ್ಲವನ್ನು ನೀವು ನೋಡಿ ಸಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. 150 ಎಕರೆ ಜಮೀನಿಗೆ sale deed ಅನ್ನು 3, 10 ವರ್ಷ ಆಗುವುದಕ್ಕಿಂತ ಮೊದಲೇ ಕೊಟ್ಟು ಬೇರೆಯವರಿಗೆ ಮಾರಾಟ ಮಾಡಿದ್ದಾರೆ. ಕೇವಲ ಒಂದು ಲಕ್ಷ ರೂಪಾಯಿ ಪರಿಹಾರವನ್ನು ರೈತರಿಗೆ ಕೊಟ್ಟಿದ್ದಾರೆ. ಆದರೆ, ಅವರು 1.70 ಕೋಟಿ ರೂಪಾಯಿಗೆ ಮಾರಾಟ ಮಾಡಿದ್ದಾರೆ. 150 ರಿಂದ 170 ಎಕರೆ ಜಮೀನನ್ನು KIADB ಯಿಂದ ಅಲಾಟ್ ಮಾಡಿಸಿಕೊಂಡು ಅದಕ್ಕೆ ಮೂರು ವರ್ಷಕ್ಕೆ sale deed ಮಾಡಿಸಿಕೊಂಡು ಅವರು 10 ಎಕರೆ, 20 ಎಕರೆ, 30 ಎಕರೆ, 2 ಎಕರೆ, 3 ಎಕರೆ ಜಮೀನನ್ನು ಒಂದು ಎಕರೆಗೆ 1.70 ಕೋಟಿ ರೂಪಾಯಿಯಂತೆ ಮಾರಾಟ ಮಾಡಿದ್ದಾರೆ. ಆದ್ದರಿಂದ, ಇದರ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಬೇಕು. ಇದನ್ನು COD

ತನಿಖೆಗೆ ಕೊಡುತ್ತೀರಾ? ಆ ಜಮೀನನ್ನು ವಾಪಸ್ಸು ಪಡೆದು ರೈತರಿಗೆ ಕೊಡಿ, ಇಲ್ಲದಿದ್ದರೆ ಆ ದುಡ್ಡನ್ನಾದರೂ ರೈತರಿಗೆ ಕೊಡಿಸಿ. ಕೊನೇಪಕ್ಷ ಒಂದು ಎಕರೆಗೆ ಒಂದು ಕೋಟಿ ರೂಪಾಯಿ ಪರಿಹಾರವನ್ನಾದರೂ ರೈತರಿಗೆ ಕೊಡಿಸಿ, ಇಲ್ಲದಿದ್ದರೆ ವಾಪಸ್ಸು ಪಡೆದು ರೈತರಿಗೆ ಕೊಡಿ. ರೈತರಿಗೆ ಅವರು ಜಾಸ್ತಿ ಹಣ ಕೊಟ್ಟಿದ್ದರೆ ನಾವು ಅದರ ಬಗ್ಗೆ ಚರ್ಚೆ ಮಾಡುತ್ತಿರಲಿಲ್ಲ.

ಅಧ್ಯಕ್ಷರು:- ಮಾನ್ಯ ಕುಮಾರಸ್ವಾಮಿಯವರು ಈ ಬಗ್ಗೆ ಡೀಟೆಲ್ ಆಗಿ ಹೇಳಿದ್ದಾರೆ.

ಶ್ರೀ ಎನ್. ಚಲುವರಾಯಸ್ವಾಮಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಕುಮಾರಸ್ವಾಮಿಯವರು ಈಗಾಗಲೇ ಹೇಳಿರುವುದರಿಂದ ನಾನು ಡೀಟೆಲ್ ಆಗಿ ಹೇಳುವುದಕ್ಕೆ ಹೋಗುವುದಿಲ್ಲ. ಈ ವಿಷಯವನ್ನು ಮೊನ್ನೆದಿವಸ ನಮ್ಮ ನಾಯಕರು ಹೇಳಿದ್ದಾರೆ. ನಾಳೆ ಬೆಳಿಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವುದರಿಂದ ಇದರ ಬಗ್ಗೆ ಮರೆತುಬಿಡಬಹುದೆಂದು ನಾನು ಮತ್ತೊಮ್ಮೆ ಜ್ಞಾಪಕ ಮಾಡುತ್ತಿದ್ದೇನೆ. ಮಾನ್ಯ ಜಯಚಂದ್ರರವರೇ, ತಾವು ನಿಮ್ಮ ಊರಿಗೆ ಹೋಗಿ ಬರುವ ದಾರಿಯಲ್ಲಿ 150 ಎಕರೆ ಜಮೀನಿಗೆ ಈ ಪರಿಸ್ಥಿತಿ ಆಗಿದೆ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಗಳು ನಾಳೆ ದಿವಸ ಉತ್ತರ ಕೊಡುವ ಸಂದರ್ಭದಲ್ಲಿ ಮರೆಯದೆ ದಯಮಾಡಿ ಇದಕ್ಕೆ ಉತ್ತರ ಕೊಡಿಸಬೇಕು. ಹಾಗೆಯೇ ಆ ಜಮೀನನ್ನು ವಾಪಸ್ಸು ತೆಗೆದುಕೊಂಡು ರೈತರಿಗೆ ಕೊಡತಕ್ಕಂಥ ಕೆಲಸ ಮಾಡಿ. ಬೇಕಾದರೆ ರೈತರಿಂದ ಒಂದು ಲಕ್ಷ ರೂಪಾಯಿಯನ್ನು ವಾಪಸ್ಸು ಕೊಡಿಸುವ ಕೆಲಸ ಮಾಡೋಣ.

ಅಧ್ಯಕ್ಷರು:- ಮಾನ್ಯ ಕುಮಾರಸ್ವಾಮಿಯವರು ಈ ಬಗ್ಗೆ ಬಹಳ ವಿಶೇಷವಾಗಿ ಪ್ರಸ್ತಾಪ ಮಾಡಿರುವುದೇನೆಂದರೆ, ಜಮೀನನ್ನು ತೆಗೆದುಕೊಳ್ಳುವುದಕ್ಕೆ ಅವರು ಏನು ಷರತ್ತನ್ನು ಹಾಕಿ ಕೊಟ್ಟಿದ್ದಾರೆಯೋ ಆ ಪ್ರಕಾರ ಮಾಡದೆ ಷರತ್ತನ್ನು ಉಲ್ಲಂಘನೆ ಮಾಡಿ ಬೇರೆಯವರಿಗೆ ಮಾರಾಟ ಮಾಡಿದ್ದಾರೆಂದು ಅವರು ವಿಶೇಷವಾಗಿ ಪ್ರಸ್ತಾಪ ಮಾಡಿದ್ದಾರೆ. ಹಾಗೆಯೇ ನೆಲಮಂಗಲದ ಮಾನ್ಯ ಶಾಸಕರೂ ಸಹ ಈ ವಿಷಯವನ್ನು ಒಂದು ದಿವಸ

ಪ್ರಸ್ತಾಪ ಮಾಡಿದ್ದರು. ಆದ್ದರಿಂದ, ಸರ್ಕಾರದವರು ಈ ಬಗ್ಗೆ ಸ್ಪಷ್ಟವಾದ ನಿರ್ದಿಷ್ಟವಾದಂತಹ ಒಂದು ಉತ್ತರವನ್ನು ಹೇಳಬೇಕಾಗುತ್ತದೆ.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಿಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ. ಈ ರೀತಿಯಾದಂಥವುಗಳು ನಿಮಗೆ ಆಗುವುದಿಲ್ಲವೆಂದು ನಮಗೆ ಗೊತ್ತಿದೆ. ಮಾನ್ಯ ಅಧ್ಯಕ್ಷರ ಮಾತಿಗೆ ಮಾನ್ಯ ಜಯಚಂದ್ರರವರು ಬೆಲೆ ಕೊಟ್ಟು ಮಾನ್ಯ ಮುಖ್ಯಮಂತ್ರಿಗಳ ಮೂಲಕ ಅದಕ್ಕೆ ಉತ್ತರ ಕೊಡಿಸುತ್ತಾರೆಂದು ನಾನು ತಿಳಿದುಕೊಳ್ಳುತ್ತೇನೆ. KIADB ಯಲ್ಲಿ ಇದೇ ರೀತಿಯಾಗಿ ಸಾಕಷ್ಟು ಆಗಿವೆ.

ಅಧ್ಯಕ್ಷರು:– ಅಲ್ಲಿ ಏನಾಗಿದೆ ಎಂದರೆ, ಕೆಲವು ಹುಳುಗಳು ಅಲ್ಲಿದ್ದಾವೆ, ಆ ಹುಳುಗಳನ್ನು ಇಲ್ಲಿ ಬಿಟ್ಟರೆ ಅಲ್ಲಿ, ಅಲ್ಲಿ ಬಿಟ್ಟರೆ ಇಲ್ಲಿ ಬರುತ್ತವೆ. ಆದ್ದರಿಂದ, ಪಕ್ಷಾತೀತವಾಗಿ ಇಂಥ ಹುಳುಗಳು ಯಾವುದು ಇವೆ ಎಂದು ಗುರುತಿಸಿಕೊಂಡು ಅವುಗಳಿಗೆ ಮಂಡೆ ಒಡೆಯತಕ್ಕಂಥ ಕೆಲಸ ಮಾಡಿದರೆ ಮಾತ್ರ ಆಡಳಿತ ಶುದ್ಧವಾಗುತ್ತದೆ. ಆದ್ದರಿಂದ, ಈ ರೀತಿಯಾಗಿ ಮಾಡಿ.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಿಮ್ಮ ಪೀಠದಿಂದ ಬಂದ ಆದೇಶದ ಮುಖಾಂತರವಾದರು ಇದು ಪ್ರಾರಂಭವಾಗಲೆಂದು ನಮ್ಮ ಆಶಯವಾಗಿದೆ. ಇಡೀ ರಾಜ್ಯದಲ್ಲಿ KIADB ಮೂಲಕ ಈ ರೀತಿಯಾಗಿವೆ. ಸೈಟ್ ಅನ್ನು ಅಲಾಟ್ ಮಾಡಿ, ಆದರೆ ಇದು ರಿಯಲ್ ಎಸ್ಟೇಟ್ ಆಗಬಾರದು. ಅದು ಒಂದು ಮಾದರಿಯಾಗಿರಬೇಕೆಂಬುದು ನಮ್ಮ ಅಭಿಪ್ರಾಯ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರು ಸಹ ಇದಕ್ಕೆ ಧ್ವನಿಯನ್ನು ಸೇರಿಸಿದ್ದಾರೆ KIADB ಯಲ್ಲಿ ಆಗಿರುವ ಅವ್ಯವಹಾರ ಮತ್ತು ಎಲ್ಲಿ ಯಾವ ರೀತಿಯಾಗಿ ಡಿನೋಟಿಫಿಕೇಷನ್ ಹಾಗೂ ತಪ್ಪು ಅಲಾಟ್‌ಮೆಂಟ್ ಮಾಡಿರುವ ಎಲ್ಲ ವಿಚಾರಗಳ ಬಗ್ಗೆ CAG ರವರು ಸಮಗ್ರವಾದ ಒಂದು ಮಾದರಿಯನ್ನೂ ಸಹ

ಕೊಟ್ಟಿದ್ದಾರೆ. ಈ ಮಾಹಿತಿಯನ್ನು ಇಟ್ಟುಕೊಂಡು ನೀವು ಮಾತನಾಡಿದ್ದರೆ ಇದರ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲಬಹುದಾಗಿತ್ತು.

ಅಧ್ಯಕ್ಷರು:– Demand ಮೇಲೆ ಚರ್ಚೆಗೆ ಬಂದಾಗ ಈ ಬಗ್ಗೆ ಸುದೀರ್ಘವಾಗಿ ಮಾತನಾಡುವುದಕ್ಕೆ ಅವಕಾಶವಿದೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ CAG ವರದಿಯಲ್ಲಿ ಸಮಗ್ರವಾಗಿದೆ. ಇಂಥ ವಿಚಾರಗಳನ್ನು Public Accounts Committee, Estimates Committee ಯಲ್ಲಿ ಈ ಬಗ್ಗೆ ಚರ್ಚೆ ಮಾಡಿ ಒಂದು ವರದಿ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಜಯಚಂದ್ರರವರೇ, ನೀವು PAC ಸಮಿತಿಯ ಅಧ್ಯಕ್ಷರಾಗಿದ್ದಾಗ ಕೊಟ್ಟಿರುವ ವರದಿ ಏನಾಯಿತು?

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಚರ್ಚೆ ಮಾಡುವಷ್ಟರಲ್ಲಿ ನಮ್ಮ ಅವಧಿ ಮುಗಿದು ಹೋಯಿತು. ಆದ್ದರಿಂದ, ವರದಿ ಕೊಡುವುದಕ್ಕೆ ಆಗಲಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೇ, KIADB ಯಲ್ಲಿ ಏನು ಮಾಡಿದ್ದಾರೆಂದರೆ, ಅಲ್ಲಿ ಇನ್ನೂ ಕಾರ್ಖಾನೆ ಪ್ರಾರಂಭವಾಗಿಲ್ಲ. ಆದರೆ, ಅಲ್ಲಿ ಕಾರ್ಮಿಕರು ಇಲ್ಲದೆ ಇದ್ದರೂ ನೂರಾರು ಎಕರೆ ಜಮೀನನ್ನು ಕಾರ್ಮಿಕರ ಮನೆ ಕಟ್ಟುವುದಕ್ಕೆ ಕೊಟ್ಟಿದ್ದಾರೆ. ಒಟ್ಟು 500 ಎಕರೆ ಭೂಮಿಯನ್ನು ಖಾಸಗಿಯವರಿಗೆ ಅಲಾಟ್‌ಮೆಂಟ್ ಮಾಡಿದ್ದಾರೆ. ಒಂದು ಎಕರೆ ಜಮೀನಿಗೆ ರೈತನಿಗೆ ಒಂದು ಲಕ್ಷ ಕೊಟ್ಟಿದ್ದಾರೆ. ಅದೇ ಜಾಗ ಇವತ್ತು 1.5 ಕೋಟಿ ರೂಪಾಯಿ ಬೆಲೆ ಬಾಳುತ್ತಿದೆ. ನಮ್ಮನ್ನು ಹೊರತುಪಡಿಸಿ ಬೇರೆ ಯಾರು ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಅಧ್ಯಕ್ಷರೇ, ತಾವು ಇಲಾಖಾ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದ್ದೀರಿ. ಬಹುಶಃ ಆಗ ಇದರ ಬಗ್ಗೆ ಸಮಗ್ರವಾಗಿ ಉತ್ತರ ಕೊಡುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಅಧ್ಯಕ್ಷರು:– ಈ ಬಗ್ಗೆ ಸರ್ಕಾರ ಉತ್ತರ ಕೊಡಲೇ ಬೇಕು.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಮುಖ್ಯಮಂತ್ರಿಗಳು ನಾಳೆ ಕೊಡುವ ಉತ್ತರದಲ್ಲಿ ಈ ವಿಷಯದ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ. ಬೆಂಗಳೂರು ನಗರದಲ್ಲಿ ಒಂದು ಸಮಗ್ರ ಅಭಿವೃದ್ಧಿ ಕೆಲಸ ಆಗಬೇಕು. ಬೆಂಗಳೂರಿನಲ್ಲಿ ಕೇವಲ ಬೆಂಗಳೂರಿನ ಜನರು ಮಾತ್ರ ನೀರನ್ನು ಕುಡಿಯುವುದಿಲ್ಲ. ರಾಜ್ಯದ, ರಾಷ್ಟ್ರದ ಮತ್ತು ಅಂತರರಾಷ್ಟ್ರೀಯ ಮಟ್ಟದ ಜನರು ಇಲ್ಲಿಗೆ ಬಂದು ಹೋಗುತ್ತಾರೆ. ಬೆಂಗಳೂರು ನಗರವನ್ನು ಸಿಂಗಾಪುರ ಮಾಡುತ್ತೇನೆಂದು ಹೇಳಿರುವ ಮಾತುಗಳೆಲ್ಲ ಆಗಿವೆ. ಆದರೆ, ಬೆಂಗಳೂರು ನಗರದ ಒಂದು ಸಮಗ್ರ ಅಭಿವೃದ್ಧಿಯ ಯೋಜನೆಯನ್ನು ದಯವಿಟ್ಟು ಕೈಗೆತ್ತಿಕೊಳ್ಳಬೇಕೆಂದು ಹೇಳುತ್ತೇನೆ. ಮಾನ್ಯ ಕುಮಾರಸ್ವಾಯಿಯವರ ಮಾತು ಕೇಳಿ ಅದಕ್ಕೆ ಮಾನ್ಯ ರಮೇಶ್ ಕುಮಾರ್‌ರವರು ಪುಷ್ಟೀಕರಿಸಿದರು. ಬಜೆಟ್ ಮಾಡುವಾಗ ರೈತರನ್ನು, ಸಂಘಸಂಸ್ಥೆಗಳನ್ನು ಹಾಗೂ ಬೇರೆಯವರೆಲ್ಲರನ್ನು ಕರೆದು ಅವರ ಅಭಿಪ್ರಾಯಗಳನ್ನು ಕೇಳುತ್ತೇವೆ. ಬಹುಶಃ ನಾವೆಲ್ಲರೂ ಆಡಳಿತ ಪಕ್ಷ, ವಿರೋಧ ಪಕ್ಷ ಎನ್ನುವುದನ್ನ ಬಿಟ್ಟು opposition party ಯ floor leader ರವರನ್ನು ಇಂಥ ಸಮಯದಲ್ಲಿ ವಿಶ್ವಾಸಕ್ಕೆ ತೆಗೆದುಕೊಂಡು ಬೆಂಗಳೂರು ಅಭಿವೃದ್ಧಿಗೆ ಸಂಬಂಧಪಟ್ಟಂತೆ ಒಂದು ಶಾಶ್ವತವಾದಂಥ ಯೋಜನೆ ರೂಪಿಸಬೇಕು. ಅಂದರೆ, township ಮಾಡುವಂಥದ್ದು ಮತ್ತು ನಗರದ ಮಧ್ಯದಿಂದ ಎಲ್ಲ ದಿಕ್ಕುಗಳಿಗೆ underpass ಮೂಲಕ ಒಳಗಡೆ ಹೋಗಿ

ಬರತಕ್ಕಂಥ ರೀತಿಯಲ್ಲಿ ಅನೇಕ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. 100 ವರ್ಷದ ಒಂದು vision ಇಟ್ಟುಕೊಂಡು ಬೆಂಗಳೂರು ನಗರ ಸಮಗ್ರ ಅಭಿವೃದ್ಧಿಗೆ ನಾವು ಕೈ ಹಾಕಿ 20 ವರ್ಷದೊಳಗೆ ಕೆಲಸ ಮುಗಿದರೂ ಪರವಾಗಿಲ್ಲ. ಇವತ್ತು ನೆಲಮಂಗಲ ರಸ್ತೆಯಲ್ಲಿ ಬರುತ್ತಿದ್ದಾಗ ಅಲ್ಲಿ ಮಾಡಿರುವ ಮೆಟ್ರೋ ಕೆಲಸವನ್ನು ನೋಡಿದೆ. ಅಲ್ಲಿನ ಕೆಲಸವನ್ನು ನೋಡಿದರೆ ಈ ಕೆಲಸ ಮಾಡಿ ನೂರಾರು ವರ್ಷ ಆಗಿರುವಂತೆ ಕಾಣುತ್ತಿದೆ. ಇವತ್ತಿನದಿವಸ ಏನಾಗಿದೆ ಎಂದರೆ, ಯಾವುದೇ ಒಂದು ಕೆಲಸ ಪ್ರಾರಂಭ ಮಾಡಿದರೆ ಆ ಕೆಲಸ ಮುಗಿಯುವುದಕ್ಕೆ 20, 30, 40, ವರ್ಷ ಆಗುತ್ತಿರುವುದರಿಂದ ಒಂದು ಜನರೇಷನ್ ಮುಗಿದು ಇನ್ನೊಂದು ಜನರೇಷನ್ ಬರುವಂಥ ಪರಿಸ್ಥಿತಿ ಆಗಿದೆ. ಆದ್ದರಿಂದ, ಈ ಪರಿಸ್ಥಿತಿ ಆಗಬಾರದೆಂದು ಹೇಳುವುದಕ್ಕೆ ಬಯಸುತ್ತೇನೆ. ಬೆಂಗಳೂರು ನಗರವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಬೇಕೆಂದು ಹೇಳುತ್ತಾ ಕೊನೆಯದಾಗಿ ರೈತರ ಬಗ್ಗೆ ಎರಡು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ದಯಮಾಡಿ ರೈತರಿಗೆ ಶಾಶ್ವತವಾದಂಥ ಒಂದು ಕಾಯಕಲ್ಪವನ್ನು ಕೊಡಿ. ನೀವು ಏನು ಮಾಡುತ್ತೀರೆಂದರೆ, 30 ಕೆ.ಜಿ. ಅಕ್ಕಿ ಕೊಡುತ್ತೀರಿ, ಬಡ್ಡಿ ಮತ್ತು ಸಾಲವನ್ನು ಮನ್ನಾ ಮಾಡುತ್ತೀರಿ. ಆದರೆ, ಇದ್ಯಾವುದೂ ಕೂಡ ಶಾಶ್ವತವಾದ ಪರಿಹಾರವಲ್ಲ. ರೈತರಿಗೆ ಸಂಪೂರ್ಣವಾಗಿ ವಿದ್ಯುತ್ ಅನ್ನು ಒದಗಿಸಬೇಕು ಹಾಗೆಯೇ ಅವರಿಗೆ ನೀರಾವರಿ ಸೌಲಭ್ಯವನ್ನು ಕೊಡಬೇಕು ಮತ್ತೆ ಒಳ್ಳೆಯ ಬಿತ್ತನೆ ಬೀಜ ಸಿಗಬೇಕು ಹಾಗೆಯೇ, ಮಾರ್ಕೆಟಿಂಗ್ ವ್ಯವಸ್ಥೆ ಆಗಬೇಕು. ಇಷ್ಟನ್ನು ರೈತರಿಗೆ ಕೊಟ್ಟರೆ ಸಾಕು. ಬೇಕದರೆ ಕರೆಂಟ್‌ಗೆ ಕಮರ್ಷಿಯಲ್ ದರ ಹಾಕಿ ಮತ್ತೆ ಇತರೇ ಯಾವುದೇ ಸಬ್ಸಿಡಿಯನ್ನು ಸಹ ಕೊಡಬೇಡಿ. Rate of interest ಅನ್ನು ನಿಗದಿ ಮಾಡಿ. Interest-free loan ಸಹ ಬೇಡ. ಮಾನ್ಯ ಸಿದ್ದರಾಮಯ್ಯನವರು ಈ ಸರ್ಕಾರದಲ್ಲಿಯಾದರು ಈ ಬಗ್ಗೆ ಒಂದು ಹೆಜ್ಜೆಯನ್ನು ಇಟ್ಟರೆ ಕೊನೇಪಕ್ಷ ಎರಡು–ಮೂರು ವರ್ಷಗಳಲ್ಲಿ ಇದೊಂದು ಮಟ್ಟಕ್ಕೆ ಬರುತ್ತದೆ. ಅದನ್ನು ಬಿಟ್ಟು

ಇವರೂ ಸಹ ಜನಪ್ರಿಯತೆಗೊಳಿಸಬೇಕೆಂದು ಎರಡು ಲಕ್ಷ ರೂಪಾಯಿ ಇರುವುದನ್ನು ಮೂರು ಲಕ್ಷ ಮಾಡಿ interest-free loan ಮಾಡತಕ್ಕಂಥದು ಮತ್ತು ಸಬ್ಸಿಡಿ ಕೊಡತಕ್ಕಂಥದು ಹಾಗೆಯೇ 30 ಕೆ.ಜಿ. ಅಕ್ಕಿ ಕೊಡತಕ್ಕಂಥದ್ದರ ಬಗ್ಗೆ ಮೊನ್ನೆ ದಿವಸ ನಮ್ಮ ನಾಯಕರು ಮಾತನಾಡುವಂಥ ಸಂದರ್ಭದಲ್ಲಿ ಹೇಳಿದ್ದಾರೆ. 30 ಕೆ.ಜಿ. ಅಕ್ಕಿಯಲ್ಲಿ ಮನೆಗೆ ಬೇಕಾಗಿರುವುದು 10 ಕೆ.ಜಿ. ಮಾತ್ರ ಉಳಿದ 20 ಕೆ.ಜಿ. ಅಕ್ಕಿಯನ್ನು ಇಟ್ಟುಕೊಂಡು ಏನು ಮಾಡುವುದಕ್ಕೆ ಸಾಧ್ಯವಿದೆ. ಅದನ್ನು ಅವರು ಮಾರಿಕೊಳ್ಳಬೇಕಾಗುತ್ತದೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಮಾರಿಕೊಳ್ಳುವ ಪರಿಸ್ಥಿತಿ ಇರುವ ಅಕ್ಕಿಗೆ ಸಬ್ಸಿಡಿ ಕೊಡುವ ಬದಲು ಅವರಿಗೆ ಬೇಕಾಗುವಷ್ಟು ಅಕ್ಕಿ ಕೊಟ್ಟು ಅವರು ಮೂರ್ನಾಲ್ಕು ವರ್ಷದಲ್ಲಿ ಅಕ್ಕಿಯನ್ನು ಬೆಳೆದು ತಿನ್ನುವಂಥ ಪರಿಸ್ಥಿತಿಗೆ ಬರುವಂಥ ಒಂದು ಮಟ್ಟಕ್ಕೆ ಮಾಡಬೇಕು ಹಾಗೆಯೇ ರೈತರನ್ನು ಸಂಪೂರ್ಣವಾಗಿ ಸ್ವಾವಲಂಬಿತರಾಗಿ ಮಾಡಬೇಕು. ರೈತರು ಸರ್ಕಾರದ ಮುಂದೆಯಾಗಲಿ ಅಥವಾ ಒಬ್ಬ ವ್ಯಕ್ತಿಯ ಮುಂದೆ ಹೋಗಿ ಕೈಜೋಡಿಸಿ ಬೇಡತಕ್ಕಂಥ ಪರಿಸ್ಥಿತಿಯನ್ನು ತರಬಾರದು. ರೈತರು ನಾಲ್ಕು ಜನರಿಗೆ ಅನ್ನ ಹಾಕಿ ಬದುಕಿದ್ದಾರೆ ವಿನಃ ಇನ್ನೊಬ್ಬರ ಮನೆಬಾಗಿಲಿಗೆ ಹೋದವರಲ್ಲ. ಆದ್ದರಿಂದ, ಆ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಬೇಕೆ ವಿನಃ ಈಗ ಕೊಟ್ಟಿರುವ ಬಜೆಟ್ ಕಾರ್ಯಕ್ರಮವಲ್ಲ ಎನ್ನುವ ಮಾತನ್ನು ಹೇಳುತ್ತಾ ಅಧ್ಯಕ್ಷರಿಗೆ ಮತ್ತೊಮ್ಮೆ ನಮಸ್ಕರಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಅಧ್ಯಕ್ಷರು:- ಮಾನ್ಯ ಪುಟ್ಟಣ್ಣಯ್ಯನವರೆ, ನೀವು ಮಾಡನಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಧ್ಯಾಹ್ನ ಮಾತನಾಡಿ ಎಂದು ಹೇಳಿದಿರಿ, 3 ಗಂಟೆಗೆ ಮಾತನಾಡುತ್ತೇನೆ.

ಅಧ್ಯಕ್ಷರು:- ಆಯಿತು, ಮಾನ್ಯ ಸವದಿಯವರು, ನೀವು 10 ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ):– ಮಾನ್ಯ ಅಧ್ಯಕ್ಷರೆ, 2014–15ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಎಲ್ಲಾ ವಿಷಯಗಳ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಕೆಲವೊಂದು ವಿಷಯಗಳನ್ನು ಮಾತ್ರ ತಮ್ಮ ಮುಖಾಂತರ ಈ ಸರ್ಕಾರಕ್ಕೆ ಹೇಳಲಿಕ್ಕೆ ನಾನು ಬಯಸುತ್ತೇನೆ. ಈ ಬಜೆಟ್‌ನಲ್ಲಿ ಮೊದಲನೆಯದು ಕೃಷಿ ಎಂದು ತೆಗೆದುಕೊಂಡು ಒಂದು ಸರ್ವಜ್ಞನ ವಚನವನ್ನು ಇಲ್ಲಿ ಅಚ್ಚು ಹಾಕಿಸಿರುತ್ತಾರೆ. "ಒಕ್ಕಲಿಗ ಒಕ್ಕಿದಿರೆ ಬಿಕ್ಕುವುದು ಜಗವೆಲ್ಲಾ". ಬಹುಶಃ ಇದು ಬಹಳ ಅರ್ಥಪೂರ್ಣವಾಗಿರತಕ್ಕಂಥ ಒಂದು ಸರ್ವಜ್ಞನ ವಚನವೆಂದು ನಾನು ಭಾವಿಸಿಕೊಂಡಿದ್ದೇನೆ. ಆದರೆ ಈ ಒಕ್ಕಲಿಗ ಸದೃಢವಾಗಿ, ಶಕ್ತಿಯುತವಾಗಿ, ಒಬ್ಬ ರೈತ ತನ್ನ ಕಾಲ ಮೇಲೆ ತನ್ನ ಬದುಕನ್ನು ತಾನು ಕಟ್ಟಿಕೊಳ್ಳಬೇಕಾದರೆ ಅವನಿಗೆ ಕೆಲವೊಂದು ಮೂಲಭೂತ ಸವಲತ್ತುಗಳನ್ನು ಕೊಡಬೇಕಾಗುತ್ತದೆ. ಬಹುಶಃ ಮಾನ್ಯ ಚಲುವರಾಯಸ್ವಾಮಿಯವರು ಇದರ ಬಗ್ಗೆ ಉಲ್ಲೇಖ ಮಾಡಿದರು. ಒಬ್ಬ ರೈತ ತನ್ನ ಕಾಲ ಮೇಲೆ ತಾನು ಶಾಶ್ವತವಾಗಿ ನಿಂತು ಬದುಕಬೇಕಾದರೆ ರೈತನ ಹೊಲಗಳಿಗೆ ನೀರು ಸಿಗಬೇಕು, ರೈತ ಬಳಸತಕ್ಕಂಥ ವಿದ್ಯುತ್ ಉತ್ತಮವಾಗಿರಬೇಕು, ರೈತ ಬೆಳೆದಿರತಕ್ಕಂಥ ಬೆಳೆಗೆ ಯೋಗ್ಯ ಬೆಲೆ ಸಿಗಬೇಕು, ರೈತ ಬೆಳೆದಿರತಕ್ಕಂಥ ಬೆಳೆಯನ್ನು ಮಾರುಕಟ್ಟೆಗೆ ಒಯ್ಯಲು ಉತ್ತಮವಾದ ರಸ್ತೆಗಳು ಇರಬೇಕು. ಅದರ ಜೊತೆಯಲ್ಲಿ ರೈತನ ಮಕ್ಕಳಿಗೆ ಉತ್ತಮವಾದಂಥ ಶಿಕ್ಷಣ ಸಿಗಬೇಕು.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇಷ್ಟು ಕೊಟ್ಟರೆ ಬಹುಶಃ ಈ ದೇಶದಲ್ಲಿರತಕ್ಕಂಥ ರೈತ ತನ್ನ ಕಾಲ ಮೇಲೆ ತಾನು ನಿಂತು ಬದುಕಲಿಕ್ಕೆ ಒಂದು ಅವಕಾಶ ಸಿಗುತ್ತದೆ. ಈ ಮೂಲಭೂತ ಸವಲತ್ತುಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ ನಮ್ಮ ಸರ್ಕಾರಗಳು

ಇರಬಹುದು, ಹಿಂದಿನ ಸರ್ಕಾರಗಳು ಇರಬಹುದು, ಈಗಿನ ಸರ್ಕಾರಗಳು ಇರಬಹುದು ಮುಂದೆ ಬರತಕ್ಕಂಥ ಯಾವುದೇ ಸರ್ಕಾರಗಳು ಇರಬಹುದು, ಇಂತಹ ಮೂಲಭೂತವಾಗಿರತಕ್ಕಂಥ ಸವಲತ್ತುಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ ಬಹಳಷ್ಟು ಎಡವಿರತಕ್ಕಂಥದ್ದನ್ನು ನಾವು ಕಂಡಿರುತ್ತೇವೆ. ರೈತನ ಹೊಲಗಳಿಗೆ ನೀರು ಸಿಗಬೇಕೆಂದರೆ, ಇವತ್ತು ಈ ಬಜೆಟ್‌ನಲ್ಲಿ 11,000 ಕೋಟಿ ರೂ.ಗಳನ್ನು ನಾನು ನೀರಾವರಿಗೆ ಕೊಡುತ್ತೇವೆಂದು ಹೇಳಿರುತ್ತಾರೆ. ಬಹುಶಃ ಹಿಂದಿರತಕ್ಕಂಥ ಯೋಜನೆಗಳನ್ನು ಪೂರ್ಣ ಮಾಡಲಿಕ್ಕೆ ಆ ಹಣ ಸಾಕಾಗುವುದಿಲ್ಲ. ಹೊಸ ಯೋಜನೆಗಳನ್ನು ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿಯೂ ಕೂಡ ಕೇಂದ್ರ ಸರ್ಕಾರ ಈಗಾಗಲೇ ಒಂದು AIBP ಯೋಜನೆಯ ಸುತ್ತೋಲೆಗಳನ್ನು ಬದಲಾವಣೆ ಮಾಡಿದೆ. ಮೊದಲು 90–10 ರ ಅನುಪಾತ ಎಂದು ಇತ್ತು, ಕೇಂದ್ರ ಸರ್ಕಾರ 90% ರಾಜ್ಯ ಸರ್ಕಾರ 10% ಕೊಡತಕ್ಕಂಥ ಒಂದು ವ್ಯವಸ್ಥೆ ಇತ್ತು. ಇವತ್ತು 75–25ರ ಅನುಪಾತವನ್ನು ಮಾಡಿದೆ. ಈಗ ಇಟ್ಟಿರತಕ್ಕಂಥ ಬಜೆಟ್‌ನ ಹಣದಲ್ಲಿ ಹೊಸ ಯೋಜನೆಗಳಿಗೆ ಪ್ರಾರಂಭ ಮಾಡಲಿಕ್ಕೆ ಬಹಳ ಕಷ್ಟವಾಗುತ್ತದೆ ಎನ್ನುವ ಕಲ್ಪನೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಅದರ ಜೊತೆಗೆ ಇವತ್ತು ರೈತ ಬೆಳೆದಿರತಕ್ಕಂಥ ಬೆಳೆಗೆ ಯೋಗ್ಯ ಬೆಲೆ ಸಿಗಬೇಕೆಂದು ನೀವು ಬಜೆಟ್‌ನಲ್ಲಿ ಹೇಳಿರುತ್ತೀರಿ. ಕೃಷಿ ಬೆಲೆ ಆಯೋಗ ರಚನೆ ಮಾಡುತ್ತೇವೆಂದು ಹೇಳಿರುತ್ತೀರಿ. ಇದರಿಂದ ನಮಗೆ ಬಹಳ ದೊಡ್ಡ ಆಸೆ ಆಗಿದೆ ಎನ್ನುವ ಭಾವನೆ ನಮಗೆ ಇಲ್ಲ. ಇದರಿಂದ ದೊಡ್ಡ ಲಾಭವಾಗುತ್ತದೆನ್ನುವ ಭಾವನೆಯೂ ನಮ್ಮಲ್ಲಿಲ್ಲ. ಏಕೆಂದರೆ ಇದು ರಾಷ್ಟ್ರ ಮಟ್ಟದಲ್ಲಿ ಆದಾಗ ಮಾತ್ರ ಇದಕ್ಕೊಂದು ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಯಾವುದೇ ಒಂದು ರಾಜ್ಯ ಕೃಷಿ ಬೆಲೆಯನ್ನು ನಿಗದಿ ಮಾಡತಕ್ಕಂಥ ಆಯೋಗವನ್ನು ರಚನೆ ಮಾಡಿ ಅದನ್ನು ಮಾಡಿದಾಗ ಮಾತ್ರ ಅದಕ್ಕೊಂದು ಪರಿಹಾರ ಸಿಗುತ್ತದೆ ಇಲ್ಲದಿದ್ದರೆ ಅದಕ್ಕೆ ಶಾಶ್ವತವಾದ ಪರಿಹಾರ ಸಿಗುವುದಿಲ್ಲ. ಬಹುಶಃ ತಮಗೆಲ್ಲಾ ಗೊತ್ತಿದೆ. ಬೆಳಗಾಂ

ನಲ್ಲಿ ನಡೆದಿರತಕ್ಕಂಥ ಅಧಿವೇಶನದ ಸಂದರ್ಭದೊಳಗೆ ಕಬ್ಬು ಬೆಳೆದಿರತಕ್ಕಂಥ ರೈತ ನಮಗೆ ಯೋಗ್ಯ ಬೆಲೆ ಸಿಗಬೇಕು ನಮಗೆ ಅನ್ಯಾಯವಾಗುತ್ತಿದೆ, ಆ ಅನ್ಯಾಯವನ್ನು ಸರಿ ಮಾಡಲಿಕ್ಕೆ ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕೆಂದು ಹೇಳಿ ಆ ಭಾಗದಲ್ಲಿರತಕ್ಕಂಥ ಕಬ್ಬು ಬೆಳೆಗಾರರು ಹೋರಾಟವನ್ನು ಪ್ರಾರಂಭ ಮಾಡಿದರು. ಬಹುಶಃ ಅಲ್ಲಿ ಒಬ್ಬ ರೈತ ಆತ್ಮಹತ್ಯೆಯನ್ನು ಕೂಡ ಮಾಡಿಕೊಂಡನು. ಆ ಆತ್ಮಹತ್ಯೆ ಆದಂಥ ಸಂದರ್ಭದಲ್ಲಿ ಸರ್ಕಾರ ಕೂಡ ರೈತರಿಗೆ ಭರವಸೆಯನ್ನು ಕೊಟ್ಟಿತು. ಕಾರ್ಖಾನೆಗಳಿಂದ 2500 ರೂ.ಗಳನ್ನು ಕೊಡಿಸುತ್ತೇವೆ, ರಾಜ್ಯ ಸರ್ಕಾರದಿಂದ 150 ರೂ.ಗಳನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿತ್ತು. ಸರ್ಕಾರ ಅದನ್ನು ಕೊಡಲಿಕ್ಕೆ ಪ್ರಾರಂಭ ಮಾಡಿದೆ. ಬಹುಶಃ ಅದರ ಬಗ್ಗೆ ನಾನು ಆಕ್ಷೇಪಣೆ ಎತ್ತಲಿಕ್ಕೆ ಹೋಗುವುದಿಲ್ಲ. ಆದರೆ ಕಾರ್ಖಾನೆಯ ಮಾಲೀಕರು 2500 ರೂ.ಗಳನ್ನು ಕೊಡಬೇಕಾಗಿರತಕ್ಕಂಥದ್ದನ್ನು ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿ ಇವತ್ತು 2000 ರೂ.ಗಳು ಮತ್ತು 1800 ರೂ.ಗಳನ್ನು ಕೊಡಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಖಾಸಗಿ ಕಾರ್ಖಾನೆಯವರು ನ್ಯಾಯಾಲಯಗಳಿಗೆ ಹೋದರು. ನ್ಯಾಯಾಲಯ ಆದೇಶ ಮಾಡಿತು. ಕಾರ್ಖಾನೆಯ ಮಾಲೀಕರು ಮತ್ತು ಸರ್ಕಾರದ ಮಧ್ಯೆ ಇದನ್ನು ಚರ್ಚೆ ಮಾಡಿ ಬಗೆಹರಿಸಬೇಕು. ಬಹುಶಃ ನನಗೆ ಅನಿಸುತ್ತದೆ. ನೆಪಕ್ಕೆ ಮಾತ್ರ ಆ ಕಾರ್ಖಾನೆಯ ಮಾಲೀಕರನ್ನು ಕರೆಸಿಕೊಂಡು ಅವರ ಜೊತೆಯಲ್ಲಿ ಚರ್ಚೆ ಮಾಡಿ ಯಾವುದೇ ಒಂದು ಪರಿಹಾರವನ್ನು ಕಂಡುಕೊಳ್ಳದೆ ಇವತ್ತು ಸರ್ಕಾರ ಕೊಟ್ಟಿರತಕ್ಕಂಥ ಭರವಸೆ ಆ ಕಬ್ಬು ಬೆಳೆಗಾರರಲ್ಲಿ ಆತಂಕವನ್ನು ಉಂಟು ಮಾಡಿದೆ. ಆ ಕಬ್ಬು ಬೆಳೆಗಾರರು ಇವತ್ತು ನಿರಾಸೆಯಾಗಿದ್ದಾರೆ. ಮಾನ್ಯ ಸಚಿವರು ಉತ್ತರ ಕೊಡುವಾಗ ಹೇಳಲಿ.

ಉಪಾಧ್ಯಕ್ಷರು:- ಅವರು ಯೀಲ್ಡ್ ಆಗಿರುವುದಿಲ್ಲ.

ಶ್ರೀ ಪ್ರಕಾಶ್ ಬಿ. ಹುಕೇರಿ (ಮಾನ್ಯ ಸಣ್ಣ ಕೈಗಾರಿಕೆ, ಮುಜರಾಯಿ ಮತ್ತು ಸಕ್ಕರೆ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಈಗ ಅವರು ಏನು ಹೇಳಿದರು. ಸಕ್ಕರೆ ಕಾರ್ಖಾನೆಯ ಮಾಲೀಕರನ್ನು ಕರೆದು ಮಾತನಾಡಬೇಕೆಂದು ಹೇಳಿದರು. ಎರಡು ಸಲ ಆ ಕಾರ್ಖಾನೆಯ ಮಾಲೀಕರನ್ನು ಕರೆದು ಮೀಟಿಂಗ್ ಮಾಡಿ ಅವರ ಮೇಲೆ ನಾವು ಒತ್ತಡವನ್ನು ಕೂಡ ತಂದಿದ್ದೇವೆ. 2500 ರೂ.ಗಳನ್ನು ಕೊಡಬೇಕೆಂದು ಸರ್ಕಾರ ಏನು ಘೋಷಣೆ ಮಾಡಿದೆ ಅದನ್ನು ಕೊಡಬೇಕೆಂದು ಹೇಳಿದ್ದೇವೆ. ಅದಕ್ಕೆ ಅವರು ವಿಚಾರ ಮಾಡಿಕೊಂಡು ಒಂದು ವಾರದಲ್ಲಿ ಒಂದು ಸಭೆಯನ್ನು ಕರೆಯಿರಿ ನಾವು ಮತ್ತೆ ಬರುತ್ತೇವೆಂದು ಹೇಳಿರುತ್ತಾರೆ. ನಾವು ಕಾರ್ಖಾನೆಯ ಮಾಲೀಕರನ್ನು ಕರೆಯಬಾರದು ಎಂದು ನಾವು ಆ ತರಹ ಏನೂ ಮಾಡಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ಇಲಾಖೆಯ ಎಲ್ಲಾ ಅಧಿಕಾರಿಗಳು ಮತ್ತು ಸಹಕಾರ ಸಚಿವರು ನಾವು ಎಲ್ಲರೂ ಕೂಡಿಕೊಂಡು ಮೀಟಿಂಗ್‌ನ್ನು ಮಾಡಿರುತ್ತೇವೆ. ಎರಡು ಸಲ ಮೀಟಿಂಗ್ ಆಗಿದೆ ನಾವು ಇನ್ನೊಂದು ಸಲ ಕರೆದು ಮಿಟಿಂಗ್ ಮಾಡುತ್ತೇವೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಸಕ್ಕರೆ ಸಚಿವರು ವಿಫಲರಾಗಿದ್ದಾರೆ, ಕಾರ್ಯನಿರ್ವಹಿಸುತ್ತಿಲ್ಲ ಅಸಮರ್ಥರು ಎಂದು ನಾನು ಯಾವೊತ್ತು ಹೇಳುವುದಕ್ಕೆ ಹೋಗುವುದಿಲ್ಲ. ಅತ್ಯಂತ ಬಲಿಷ್ಠರಾಗಿರತಕ್ಕಂಥ ಒಬ್ಬ ಸಕ್ಕರೆ ಸಚಿವರು ನಮಗೆ ಸಿಕ್ಕಿದ್ದಾರೆ ಅವರು ನಮ್ಮ ಜಿಲ್ಲೆಯವರು. ಬಹುಶಃ ಅವರನ್ನು ನೋಡಿದರೆ ನಮಗೆ ಅರ್ಥವಾಗುತ್ತದೆ. ಸಿಂಧೂರ ಲಕ್ಷ್ಮಣ, ಸಂಗೊಳ್ಳಿ ರಾಯಣ್ಣ ಇವರು ನಮ್ಮ ಪಕ್ಕದ ಜಿಲ್ಲೆಯಲ್ಲಿ ಇದ್ದವರು. ಅವರೆಲ್ಲಾ ತೀರಿ ಹೋದ ಮೇಲೆ ನಮ್ಮ ಜಿಲ್ಲೆಯಲ್ಲಿ ನಮಗೆ ಒಬ್ಬ ಗಂಡುಗಲಿ ಸಿಕ್ಕಿದರೆ ಸನ್ಮಾನ್ಯ ಸಕ್ಕರೆ ಸಚಿವರು. ನಾನು ಮಾನ್ಯ ಸಕ್ಕರೆ ಸಚಿವರಿಗೆ ಏಕೆ ಪ್ರಾರ್ಥನೆ ಮಾಡುವುದಕ್ಕೆ ಹೊರಟಿದ್ದೇನೆಂದರೆ, ನಾನು

ಪತ್ರಿಕೆಯನ್ನು ನೋಡಿದೆ. ಲೋಕಸಭೆಯ ಸದಸ್ಯರಾಗಿ ಅವರು ಹೋಗುವುದಕ್ಕೆ ಇಚ್ಛೆಪಡುತ್ತಿದ್ದಾರೆ ಪಕ್ಷ ಕೂಡ ಅವರಿಗೆ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಒತ್ತಡ ಹಾಕುತ್ತಿದೆ ಎನ್ನುವುದರ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ನೀವು ಹೇಳಿಲ್ಲ ನಾನು ಕೇಳಿಲ್ಲ. ಆ ಚಿಕ್ಕೋಡಿ ಲೋಕಸಭೆ ಕ್ಷೇತ್ರದಲ್ಲಿ 100 ಕ್ಕೆ 70 ರಷ್ಟು ಜನ ಕಬ್ಬು ಬೆಳೆಗಾರರು ಇದ್ದಾರೆ. ನನ್ನ ಪ್ರಾರ್ಥನೆ ಇಷ್ಟೆ ಇದೆ. ಸನ್ಮಾನ್ಯ ಸಕ್ಕರೆ ಸಚಿವರು ದೆಹಲಿಗೆ ಹೋಗಬೇಕು ಕೇಂದ್ರ ಸರ್ಕಾರದ ಯೋಜನೆಗಳನ್ನು ನಮ್ಮ ಜಿಲ್ಲೆಗೆ ತರಬೇಕು. ನಮ್ಮ ಜಿಲ್ಲೆ ಸಂಪೂರ್ಣವಾಗಿರತಕ್ಕಂಥ ಅಭಿವೃದ್ಧಿಯಾಗಬೇಕೆಂದು ಆಸೆ ಇಟ್ಟುಕೊಂಡಿರತಕ್ಕಂಥವರಲ್ಲಿ ನಾನು ಒಬ್ಬ. ಆದರೆ ಕಬ್ಬು ಬೆಳೆಗಾರರಿಗೆ ನೀವು ಘೋಷಣೆ ಮಾಡಿರತಕ್ಕಂಥ ಆ ಕಾರ್ಖಾನೆಯ ಮಾಲೀಕರಿಂದ ನೀವು ಹಣ ಕೊಡಿಸದೇ ಹೋದರೆ ಆ ಕಬ್ಬು ಬೆಳೆಗಾರರು ನಿಮಗೆ ತಿರುಗಿ ಬಿದ್ದರೆ ಬಹುಶಃ ನೀವು ಸೋತರೆ ನಮಗೆಲ್ಲರಿಗೂ ಕೂಡ ಅವಮಾನವಾಗಬಹುದು ಎನ್ನುವ ಒಂದು ಆತಂಕ ನನಗೆ ಪ್ರಾರಂಭವಾಗಿದೆ. ಮಾನ್ಯ ಪ್ರಕಾಶ್ ಹುಕ್ಕೇರಿಯವರಿಗೆ ನಾನು ಒಂದು ಮಾತನ್ನು ಹೇಳುವುಕ್ಕೆ ಬಯಸುತ್ತೇನೆ. ಅವರು ಬಹಳ ಬಲಿಷ್ಠವಾಗಿರತಕ್ಕಂಥ ಸಚಿವರು. ಯಾವುದೇ ಸಕ್ಕರೆ ಕಾರ್ಖಾನೆಯ ಮಾಲೀಕರನ್ನು ನೀವು ಒಳಗೆ ಹಾಕಿಕೊಳ್ಳುವುದಕ್ಕೆ ಹೋಗಬೇಡಿ. ನಿಮಗೆ ಅಧಿಕಾರ ಇದೆ. ಮಾನ್ಯ ಮುಖ್ಯಮಂತ್ರಿಗಳು ನಿಮ್ಮ ಜೊತೆಗೆ ಇದ್ದಾರೆ. ಆ ಸಕ್ಕರೆ ಮಾಲೀಕರನ್ನು ಜೈಲಿಗಾದರೂ ಹಾಕಿ, ಆ ಕಾರ್ಖಾನೆಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಿ. ಅವು ಖಾಸಗಿ ಕಾರ್ಖಾನೆಗಳು ಇರಬಹುದು. ಸಹಕಾರಿ ಸಕ್ಕರೆ ಕಾರ್ಖಾನೆಗಳು ಇರಬಹುದು. ಅಧಿಕಾರ ಇದೆ, ರೈತರಿಗೆ ಭರವಸೆ ಮೂಡಬೇಕು. ಬೆಳಗಾಂ ಜಿಲ್ಲೆಯಲ್ಲಿರತಕ್ಕಂಥ ಸಕ್ಕರೆ ಸಚಿವರು...

ಶ್ರೀ ಎನ್. ಚಲುವರಾಯಸ್ವಾಮಿ:– ಪ್ರಕಾಶ್ ಹುಕ್ಕೇರಿಯವರನ್ನು ಎತ್ತಿಕಟ್ಟಿ ಏನು ಮಾಡಬೇಕೆಂದು ಮಾಡಿದ್ದೀರಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಅವರು ನಮ್ಮವರು.

ಶ್ರೀ ವೈ.ಎನ್. ರುದ್ರೇಶಗೌಡ:– ನಿಮ್ಮ ಅಧಿಕಾರದ ಅವಧಿಯಲ್ಲಿ ಈ ರೇಟ್‌ನ್ನು ಫಿಕ್ಸ್ ಮಾಡಿ ಮುಗಿಸಬಗಹುದಾಗಿತ್ತಲ್ಲಾ ಎಂದು ಹೇಳಿದೆ.

ಶ್ರೀ ಆನಂದ ವಿಶ್ವನಾಥ್ ಚಂದ್ರಶೇಖರ್ ಮಾಮನಿ:– ಆಗ ರೇಟ್ ಮಾತಾಡಿದಷ್ಟು ಕೊಟ್ಟಿದ್ದಾರೆ. ಆ ರೇಟ್ ಕೊಡದವರನ್ನು ಜೈಲಿಗೆ ಹಾಕಬೇಕಾಗಿತ್ತು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಇಲ್ಲಿ ಏನಾಗುತ್ತದೆ ಎಂದರೆ ಮಾನ್ಯ ಉಪಾಧ್ಯಕ್ಷರೆ, ಆ ಕಡೆ ಕುಳಿತಾಗ ಒಂದು ಮಾತನಾಡುವುದು, ಈ ಕಡೆ ಕುಳಿತಾಗ ಒಂದು ಮಾತನಾಡುವುದು ಇದೊಂದು ಪರಂಪರೆ ನಮ್ಮ ರಾಜ್ಯದಲ್ಲಿ ಬಂದುಬಿಟ್ಟಿದೆ. ದೇಶದೊಳಗೂ ಬಂದಿದೆ. ಒಂದು ಕಾಲಕ್ಕೆ ಅದರ ಬಗ್ಗೆ ಚಿಂತನೆ ಮಾಡೋಣ. ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಕಾನೂನಿನ ರಚನೆ ಆಯಿತು. ಈಗ ಸರ್ಕಾರ ಕಳೆದುಕೊಂಡಿದ್ದೇವೆ. ಈ ಕಡೆ ಬಂದು ಕುಳಿತಿದ್ದೇವೆ. ಒಂದು ಸರ್ಕಾರ ಮಾಡಿರುವಂತಹ ಕಾನೂನು ರಚನೆ ಆದಮೇಲೆ ಯಾವುದೇ ಸರ್ಕಾರ ಬಂದ ಮೇಲೆ ಅದನ್ನು ಅನುಷ್ಠಾನ ಮಾಡುವಂಥದ್ದು ಆ ಸರ್ಕಾರದ ಜವಾಬ್ದಾರಿ. ಆ ಕೆಲಸವನ್ನು ನಮ್ಮ ಸಕ್ಕರೆ ಸಚಿವರು ಮಾಡುತ್ತಾರೆ ಎನ್ನುವ ಆತ್ಮವಿಶ್ವಾಸ ನನ್ನಲ್ಲಿದೆ. ಆದರೆ ಸಕ್ಕರೆ ಸಚಿವರು ಲೋಕಸಭೆಯ ಚುನಾವಣೆಯಲ್ಲಿ ಗೆಲ್ಲಬೇಕಾದರೆ ಮುತುವರ್ಜಿ ವಹಿಸಬೇಕಾಗುತ್ತದೆ. ಆ ಭಾಗದಲ್ಲಿರವಂತಹ ಕಬ್ಬು ಬೆಳಗಾರರಿಗೆ 2,500 ರೂ.ಗಳನ್ನು ಕೊಡಿಸಿದಾಗ ಬಹುಶಃ ಅವಿರೋಧ ಆಯ್ಕೆಯಾದರೂ ಸಹಿತ ಆಗಬಹುದು. ವಿರೋಧ ಪಕ್ಷದ ಅಭ್ಯರ್ಥಿಗಳು ಹಿಂಪಡೆಯುವ ಸನ್ನಿವೇಶ ನಿರ್ಮಾಣವಾಗುತ್ತದೆ. ಏಕೆಂದರೆ, ಇಡೀ ರಾಜ್ಯದಲ್ಲಿ ಒಂದು ಸಂದೇಶ ಹೋಗುತ್ತದೆ. ಒಬ್ಬರು ಸಕ್ಕರೆ ಸಚಿವರಾಗಿ ಎಲ್ಲಾ ಕಾರ್ಖಾನೆ ಮಾಲೀಕರನ್ನು ಜೈಲಿಗೆ ಹಾಕಿ ಆ ಕಾರ್ಖಾನೆಗಳನ್ನು ವಶಕ್ಕೆ ತೆಗೆದುಕೊಂಡು ಇವತ್ತು ಆ ರೈತರಿಗೆ ಹಣ ಕೊಡಿಸಿರುವಂತಹ ಕೀರ್ತಿ ಯಾರಾದರೊಬ್ಬರಿಗೆ ಬರುತ್ತದೆ

ಎಂದರೆ ಅದು ಇತಿಹಾಸದೊಳಗೆ ಉಳಿಯುತ್ತದೆ. ಮಾನ್ಯ ಪ್ರಕಾಶ್ ಹುಕ್ಕೇರಿಯವರ ಹೆಸರು ಶಾಶ್ವತವಾಗಿ ಉಳಿಯುತ್ತದೆ ಎಂದು ತಮ್ಮ ಮೂಲಕ ಹೇಳಲು ಬಯಸುತ್ತೇನೆ.

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :– ಮಾನ್ಯ ಸವದಿಯವರೆ ನಿಮ್ಮ ಮಾತು ಕೇಳಿ, ನಾನು ಇನ್ನೇನೂ ಮಾಡುವುದಿಲ್ಲ. ನೇರವಾಗಿ ಹೊರಗೆ ಹೋಗಿ ಯಾವುದಾದರೂ ಹುಚ್ಚಾಸ್ಪತ್ರೆಗೆ ದಾಖಲಾಗಬೇಕಾಗುತ್ತದೆ.

(ಗೊಂದಲ)

ಶ್ರೀ ವಿ. ಸುನೀಲ್‌ಕುಮಾರ್:– ನಿಮ್ಮ ಬಗ್ಗೆ ಇಷ್ಟು ಅಭಿಮಾನದಿಂದ ಮಾತನಾಡಬೇಕಾದರೆ, ನೀವು ಹುಚ್ಚಾಸ್ಪತ್ರೆಗೆ ಏಕೆ ಹೋಗಬೇಕು ಎಂದು ಹೇಳುತ್ತೀರಿ?

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ:– ಅವರು ನಾವೂ ಕುಳಿತುಕೊಂಡೇ, ಅವರು ಆ ಕಡೆಯಿಂದ ಮತ್ತು ನಾವು ಈ ಕಡೆ ಕುಳಿತುಕೊಂಡೇ ಈಗ ಏನು ಸಮಸ್ಯೆ ಉದ್ಭವವಾಗಿದೆ ಆ ಸಮಸ್ಯೆಯನ್ನು ಬಗೆಹರಿಸಲು ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುತ್ತೇನೆ.

(ಗೊಂದಲ)

ಶ್ರೀ ವಿ. ಸುನೀಲ್‌ಕುಮಾರ್:– ಮಾನ್ಯ ಉಪಾಧ್ಯಕ್ಷರೇ, ಹಾಗಾದರೆ ಅಭಿಮಾನ ಕೊಡುವುದು ತಪ್ಪೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಬೆಳಗಾವಿ ಜಿಲ್ಲೆಯ ಪಕ್ಕದಲ್ಲಿರುವ ಧಾರವಾಡ ಜಿಲ್ಲೆಯಲ್ಲಿ mental hospital ಇದೆ.

(ಗೊಂದಲ)

ಶ್ರೀ ಪ್ರಕಾಶ್.ಬಿ. ಹುಕ್ಕೇರಿ:– ಧಾರವಾಡದಲ್ಲಿ ಇದೆ ಎಂದು ಕಳುಹಿಸಿ, ಅಲ್ಲಿಗೆ ಸಂಜೆ ಮತ್ತು ಬೆಳಗ್ಗೆ ಎರಡು ಹೊತ್ತು ಊಟ ಕಳುಹಿಸುವಂತಹ ವ್ಯವಸ್ಥೆ ಮಾಡಿ. ಸಾಕು.

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಸವದಿಯವರೆ ನೀವು ಮಾತನಾಡಲು ಪ್ರಾರಂಭ ಮಾಡಿ ಆಗಲೇ ಹತ್ತು ನಿಮಿಷ ಆಗುತ್ತಿದೆ. ಹತ್ತು ನಿಮಿಷ ಮಾತನಾಡಲು ಅವಕಾಶ ಕೊಡಿ ಎಂದು ನೀವು ಹೇಳಿದ್ದೀರಿ. ಇನ್ನು ಐದು ನಿಮಿಷ ಇದೆ. ಮಾತನಾಡಿ ಮುಗಿಸಿ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ನಾನು ಹೇಳಿದ್ದು 1 ಗಂಟೆ 10 ನಿಮಿಷ.

(ಗೊಂದಲ)

ಉಪಾಧ್ಯಕ್ಷರು:– ನೀವು ಹೇಳಿದ್ದು 10 ನಿಮಿಷ. ಆಯಿತು ಬೇಗ ಮಾತನಾಡಿ ಮುಗಿಸಿ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಮಾನ್ಯ ಉಪಾಧ್ಯಕ್ಷರೆ, ನಾನು ಏಕೆ ಹೇಳುವುದಕ್ಕೆ ಹೊರಟಿದ್ದೇನೆಂದರೆ, ಮನುಷ್ಯನಿಗೆ ಆಯುಷ್ಯ, ಅಂತಸ್ತು ಮತ್ತು ಅಧಿಕಾರ ಇವು ಯಾವತ್ತೂ ಶಾಶ್ವತವಾಗಿರುವುದಿಲ್ಲ. ಹುಟ್ಟಿದ ಮನುಷ್ಯ ಒಂದು ಬಾರಿ ಸಾಯಲೇ ಬೇಕು. ಬಂದಿರುವಂತಹ ಅಧಿಕಾರ ಒಂದು ಬಾರಿ ಹೋಗಲೇ ಬೇಕು. ಐಶ್ವರ್ಯವೂ ಅಷ್ಟೆ. ಹಂಪಿ ಸಾಮ್ರಾಜ್ಯ ಆಳಿರುವಂತಹ ರಾಜ್ಯ, ಅವತ್ತಿನ ದಿವಸ ಹಾದಿ ಬೀದಿಯಲ್ಲಿ ರತ್ನಮುತ್ತುಗಳನ್ನು

ಅಳೆಯುತ್ತಿದ್ದರು. ಇವತ್ತು ಅದು ಇಲ್ಲ. ಅಂದರೆ ಶಾಶ್ವತ ಯಾವುದೂ ಅಲ್ಲ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ಮಾನ್ಯ ಪ್ರಕಾಶ್ ಹುಕ್ಕೇರಿಯವರು ನಮ್ಮ ಜಿಲ್ಲೆಯವರಾಗಿರುವಂತಹ ಸಕ್ಕರೆ ಸಚಿವರು. ಅವರ ಕಾಲಾವಧಿಯೊಳಗೆ ಈ ಒಂದು ಘನ ಕಾರ್ಯ ಮಾಡಿದರೆ ಇತಿಹಾಸದೊಳಗೆ ಶಾಶ್ವತವಾಗಿ ಅವರ ಹೆಸರು ಉಳಿಯುವದಕ್ಕೆ ಸಾಧ್ಯವಾಗುತ್ತದೆ. ಎಷ್ಟು ದಿವಸ ನಾವು ಮಂತ್ರಿಗಳಾಗಿದ್ದೇವೆ, ಎಷ್ಟು ದಿವಸ ಬದುಕಿದ್ದೇವೆ, ಎಷ್ಟು ದಿವಸ ನಾವು ಅಧಿಕಾರವನ್ನು ಅನುಭವಿಸಿದ್ದೇವೆ ಎನ್ನುವುದಕ್ಕಿಂತಲೂ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ನಾವು ಏನು ಮಾಡಿದ್ದೇವೆ ಎನ್ನುವುದು ಮಾತ್ರ ಶಾಶ್ವತವಾಗಿ ಉಳಿಯುತ್ತದೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ:– ನನಗೆ ತಿಳಿದ ಹಾಗೆ, ಇವರು ಲೋಕಸಭಾ ಚುನಾವಣಾ ಪ್ರಚಾರ ಮಾಡುತ್ತಿದ್ದಾರೆ. ಇದು ಚುನಾವಣಾ ಪ್ರಚಾರವಾಗುತ್ತಿದೆ. ಸಮಸ್ಯೆಗಳ ಬಗ್ಗೆ ಹೇಳಲಿ. ಅವರು ಯಾವ ಅಂತಸ್ತು, ಅಧಿಕಾರ ಶಾಶ್ವತವಲ್ಲ ಎಂದು ಹೇಳುತ್ತಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರು ಲೋಕಸಭಾ ಚುನಾವಣಾ ಪ್ರಚಾರ ಮಾಡುತ್ತಿದ್ದಾರೆ. ಇದು ಒಂದು ಮಾಧ್ಯಮದ ಮೂಲಕ ಹೋಗಲಿ, ಪ್ರಚಾರವಾಗಲಿ ಎಂದು ಇವತ್ತು ಬಿ.ಜೆ.ಪಿ. ಅಭ್ಯರ್ಥಿಗಳ ಪರವಾಗಿ ಅವರು ಪ್ರಚಾರ ಮಾಡುತ್ತಿದ್ದಾರೆ ಹೊರತಾಗಿ ನಾವೂ ಅವರೂ ಕೂಡ ಈ ಸಮಸ್ಯೆ ಹೇಗೆ ಬಗೆಹರಿಸಬೇಕು ಎನ್ನುವುದರ ಬಗ್ಗೆ ಮಾತನಾಡುತ್ತಿರುತ್ತೇವೆ. ಆ ದೃಷ್ಟಿಯಿಂದ ತಾವು ಏನು ಸಲಹೆಯನ್ನು ಕೊಟ್ಟಿದ್ದೀರಿ ಅದಕ್ಕೆ ನಾವು ಸಂಪೂರ್ಣವಾಗಿ ಸ್ಪಂದನೆ ಮಾಡುತ್ತೇವೆ ಎಂದು ಹೇಳಿ ಮುಂದಿನ ವಿಚಾರದ ಬಗ್ಗೆ ಮಾತನಾಡಿ ಎಂದು ಹೇಳುತ್ತಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು:– ನೀವು ಮಾಡನಾಡುವುದೆಲ್ಲಾ ಅವರು ಒಪ್ಪಿಕೊಂಡಿದ್ದಾರೆ.

(ಗೊಂದಲ)

ಶ್ರೀ ಬಿ.ಆರ್. ಯಾವಗಲ್:– ಮಾನ್ಯ ಸವದಿಯವರೆ, ಅವರ ಅಭ್ಯರ್ಥಿ ಬಹುತೇಕ ರಮೇಶ್ ಕತ್ತಿಯವರೆ. ಅವರದ್ದೂ ಅವರದೇ ಸಕ್ಕರೆ ಕಾರ್ಖಾನೆ ಇದೆ. ಆ ಉದ್ದೇಶ ಇಟ್ಟುಕೊಂಡು ಇಬ್ಬರೂ ಜಗಳ ಮಾಡಿ ಎಂದು ಹೇಳುತ್ತಿದ್ದಾರಾ ಹೇಗೆ?

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ನಮ್ಮ ಜಿಲ್ಲೆಯೊಳಗೆ ನಾವು ಯಾವತ್ತೂ ಪಕ್ಷಭೇದ ಬಿಟ್ಟು ಜಗಳ ಮಾಡುವುದಿಲ್ಲ. ನಾವೆಲ್ಲರೂ ಒಂದಾಗಿ ಇರುತ್ತೇವೆ. ನಾನು ಏಕೆ ಹೇಳುತ್ತಿದ್ದೇನೆ ಎಂದು ಮಾನ್ಯ ಸಕ್ಕರೆ ಸಚಿವರು ಅರ್ಥ ಮಾಡಿಕೊಳ್ಳಬೇಕು. ಈ ಕೆಲಸ ಮಾಡಿದರೆ ರಮೇಶ್ ಕತ್ತಿ ಮತ್ತು ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ಜೈಲಿಗೆ ಹೋಗುತ್ತಾರೋ, unopposed ಆಗುತ್ತದೆಯೋ ಎಂದು ನಾನು ಹೇಳುವುದಕ್ಕೆ ಹೊರಟಿದ್ದೇನೆ. ಆ ಕೆಲಸವನ್ನು ಮಾಡಬೇಕು. ಇವತ್ತು ರೈತ ಬೆಳೆದಿರುವಂತಹ ಬೆಳೆಗಳನ್ನು ಮಾರುಕಟ್ಟೆಗೆ ಒಯ್ಯಲು ಉತ್ತಮವಾದಂತಹ ರಸ್ತೆ ಬೇಕು. ತಾಲ್ಲೂಕು ಮಟ್ಟದಿಂದ ಜಿಲ್ಲಾ ಮಟ್ಟಕ್ಕೆ ಹೋಗುವಂತಹ ರಸ್ತೆ ಬೇರೆ ಇದೆ. ಜಿಲ್ಲೆಯಿಂದ ರಾಜ್ಯಕ್ಕೆ ಬರುವಂತಹ ರಸ್ತೆಗಳು ಬೇರೆ. ಆದರೆ ರೈತರ ಹೊಲದಿಂದ ಅವರು ಬೆಳೆದ ಬೆಳೆಯನ್ನು ಮಾರುಕಟ್ಟೆಗೆ ಒಯ್ಯಲು ಉತ್ತಮವಾದಂತಹ ರಸ್ತೆಗಳ ಅವಶ್ಯಕತೆ ಇದೆ. ತೋಟಗಳಿಗೆ ಹೋಗುವಂಥದ್ದು, ಹೊಲಗಳಿಗೆ ಹೋಗವಂಥದ್ದು, ಆ ಕಲ್ಪನೆಯನ್ನು ಇಟ್ಟುಕೊಂಡು ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ "ನಮ್ಮ ಗ್ರಾಮ ನಮ್ಮ ರಸ್ತೆ" ಎನ್ನುವ ಕಾರ್ಯಕ್ರಮವನ್ನು ತಂದಿದ್ದೇವೆ. ಅದು ಏಕೋ ಏನೋ ಗೊತ್ತಿಲ್ಲ ಇವತ್ತಿನ ಸರ್ಕಾರ ಆ ಗ್ರಾಮೀಣ ಪ್ರದೇಶಗಳಲ್ಲಿ ರೈತರಿಗೆ ಉಪಯುಕ್ತವಾಗುವಂತಹ ರಸ್ತೆಗಳು ಏನಿತ್ತು, "ನಮ್ಮ ಗ್ರಾಮ ನಮ್ಮ ರಸ್ತೆ" ಎನ್ನುವ ಕಾರ್ಯಕ್ರಮವನ್ನು ಒಂದು ವರ್ಷದಿಂದ ಕಾರ್ಯ ಪ್ರಾರಂಭ

ಮಾಡಿಲ್ಲ. ಬಹುಶಃ ಮುಂದಿನ ದಿನಮಾನಗಳಲ್ಲಿ ಮಾಡಲಿ, ಅಂತಹ ಸದ್ಬುದ್ಧಿ ಈ ಸರ್ಕಾರಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿಕೊಂಡು "ನಮ್ಮ ಗ್ರಾಮ ನಮ್ಮ ರಸ್ತೆ" ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರೆ ಗ್ರಾಮೀಣ ಪ್ರದೇಶದಲ್ಲಿರುವ ರೈತರಿಗೆ ಬಹಳ ಉಪಯುಕ್ತವಾದಂತಹ ಕಾರ್ಯಕ್ರಮ ಅದನ್ನು ಮುಂದುವರೆಸಬೇಕೆಂದು ಹೇಳಲು ಬಯಸುತ್ತೇನೆ. ಅದರ ಜೊತೆಗೆ 'ಸುವರ್ಣ ಗ್ರಾಮ ಯೋಜನೆ. ಅದು ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಆ ಒಂದು ಕಲ್ಪನೆ ಪ್ರಾರಂಭವಾಯಿತು. ನಮ್ಮ ಪಕ್ಷದ ನಾಯಕರಾಗಿದ್ದಂತಹ ಸನ್ಮಾನ್ಯ ಯಡಿಯೂರಪ್ಪನವರು ಅವತ್ತು ಹಣಕಾಸು ಸಚಿವರು ಹಾಗೂ ಉಪಮುಖ್ಯಮಂತ್ರಿಗಳಾಗಿದ್ದರು. ಆ ಒಂದು ಕಾಲಾವಧಿಯೊಳಗೆ "ಸುವರ್ಣ ಗ್ರಾಮೋದಯ ಯೋಜನೆ" ಎನ್ನುವ ಯೋಜನೆ ಬಂದಿರುವಂಥದ್ದು. ಅದು ಯಾವುದೇ ಪಕ್ಷದ ಹೆಸರು, ವ್ಯಕ್ತಿಯ ಹೆಸರು ಅಲ್ಲ. ಕರ್ನಾಟಕ ಏಕೀಕರಣವಾದ 50ನೇ ವರ್ಷಕ್ಕೆ ಆ ಕಾರ್ಯಕ್ರಮ ಜಾರಿಗೆ ಆಗಿರುವಂಥದ್ದು. ಅದರ ಸವಿನೆನಪಿಗಾಗಿ "ಸುವರ್ಣ ಗ್ರಾಮೋದಯ ಯೋಜನೆ" ಎನ್ನುವುದು ಪ್ರಾರಂಭವಾಯಿತು. ಬಹುಶಃ ಎಲ್ಲಾ ಶಾಸಕರು ಅದನ್ನು ಒಪ್ಪಿಕೊಳ್ಳುತ್ತಾರೆ ಎಂದು ನಾನು ತಿಳಿದುಕೊಳ್ಳುತ್ತೇನೆ. ನಾವು ಹಳ್ಳಿಗೆ ಹೋದಾಗ ಖುಷಿಯಾಗುತ್ತದೆ. ಯಾವ ಗ್ರಾಮಗಳನ್ನು ನಾವು ಆಯ್ಕೆ ಮಾಡಿ ಕಾರ್ಯವನ್ನು ಪೂರ್ಣಗೊಳಿಸಿದ್ದೇವೆ ಆ ಹಳ್ಳಿಗೆ ಹೋದಾಗ ಅಲ್ಲಿರುವಂತಹ ಜನ ನಮ್ಮನ್ನು ನೋಡಿ ಖುಷಿಪಡುತ್ತಾರೆ. ಅದು ಪಕ್ಷಾತೀತವಾಗಿರುವಂಥದ್ದು, ಬಿ.ಜೆ.ಪಿ. ಪಕ್ಷದವರಿಗಾಗಲಿ, ಜೆ.ಡಿ.ಎಸ್. ಪಕ್ಷದವರಾಗಲಿ ಯಾವುದೇ ಆಡಳಿತ ಪಕ್ಷಕ್ಕೆ ಅಲ್ಲ. ಪ್ರತಿಯೊಬ್ಬ ಶಾಸಕರೂ ಅಭಿಮಾನಪಡತಕ್ಕಂಥ ಮತ್ತು ಶಾಸಕರಿಗೆ ಗೌರವ ತರತಕ್ಕಂಥ ಒಂದು ಕಾರ್ಯಕ್ರಮ ಯಾವುದಾದರೂ ಇದ್ದರೆ ಅದು "ಸುವರ್ಣ ಗ್ರಾಮ ಯೋಜನೆ". ಅದನ್ನು ಪುನ: ಮುಂದುರೆಸಬೇಕು. ಆ ಹೆಸರನ್ನು ಬದಲಾವಣೆ ಮಾಡಬಾರದೆಂದು ನನ್ನದೊಂದು ವಿನಂತಿ. ಏಕೆಂದರೆ

ಅದು ಯಾವುದೇ ವ್ಯಕ್ತಿಗೆ ಸಂಬಂಧಪಟ್ಟಿದ್ದು ಅಲ್ಲ. ಕರ್ನಾಟಕ ಏಕೀಕರಣವಾದ 50ನೇ ವರ್ಷದ ಶುಭ ಸಂದರ್ಭದಲ್ಲಿ ಬಂದಿರತಕ್ಕಂಥ ಯೋಜನೆ. ಅದರ ಜೊತೆಗೆ ಇಲ್ಲಿ ನಮ್ಮ ಕಾನೂನು ಸಚಿವರು ಇದ್ದಾರೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಳವಳ್ಳಿ):– ಸರ್, ಅದಕ್ಕೆ ಪೂರಕವಾಗಿ ಒಂದು ಮಾತು. ಮಾನ್ಯ ಉಪಾಧ್ಯಕ್ಷರೆ, ಸುವರ್ಣ ಗ್ರಾಮೋದಯದ ವಿಚಾರದಲ್ಲಿ ಹೆಸರನ್ನು ಬದಲಾಯಿಸಿದ್ದಾರೆ ಎನ್ನುವ ವಿಚಾರ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡುತ್ತಾರೆ ಅದರ ಬಗ್ಗೆ ನನ್ನದೇನೂ ಆಕ್ಷೇಪಣೆ ಇಲ್ಲ. ಇವತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಆ ಗ್ರಾಮದ ಸಮಗ್ರ ಅಭಿವೃದ್ಧಿಗೆ, ನಿಮಗೂ ಗೊತ್ತಿದೆ, ಎಲ್ಲಾ ಶಾಸಕರಿಗೂ ಗೊತ್ತಿದೆ, ಸುವರ್ಣ ಗ್ರಾಮೋದಯದಲ್ಲಿ ಯಾವ ಗ್ರಾಮದಲ್ಲಿಯೂ ಪೂರ್ಣ ಪ್ರಮಾಣದ ಕಾಮಗಾರಿ ಪೂರ್ಣಗೊಂಡಿಲ್ಲ. ಕಾಮಗಾರಿ ನಡೆದಿದೆ, ಇಲ್ಲವೆಂದು ಅಲ್ಲ. ಆದರೆ ಪೂರ್ಣ ಪ್ರಮಾಣದ ಕಾಮಗಾರಿ ನಡೆಯುತ್ತಿರಲಿಲ್ಲ. ಅದನ್ನು ಇವತ್ತಿನ ಬಜೆಟ್‌ನಲ್ಲಿ ಪೂರ್ಣ ಪ್ರಮಾಣದ ಕಾಮಗಾರಿಗೆ ಒತ್ತು ಕೊಟ್ಟು ಮಾಡಿದ್ದಾರೆ ಎಂದು ಜ್ಞಾಪಿಸುವದಕ್ಕೆ ಇಚ್ಛೆಪಡುತ್ತೇನೆ. ಧನ್ಯವಾದಗಳು.

ಉಪಾಧ್ಯಕ್ಷರು:– ಯೀಲ್ಡ್ ಆಗಬೇಡಿ. ಐದು ನಿಮಿಷದಲ್ಲಿ ಮುಗಿಸಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ನಮ್ಮ ಕಾನೂನು ಸಚಿವರು ಇಲ್ಲೇ ಇದ್ದಾರೆ. ಹೆಚ್ಚುವರಿಯಾಗಿ ಪಶುಸಂಗೋಪನಾ ಇಲಾಖೆಯನ್ನೂ ಹೊಂದಿದ್ದಾರೆ. ಮಾನ್ಯ ಜಯಚಂದ್ರರವರೆ, ನಿಮ್ಮ ಇಲಾಖೆಯ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಇವತ್ತು ಗ್ರಾಮೀಣ ಪ್ರದೇಶದಲ್ಲಿರುವಂತಹ ನಮ್ಮ ರೈತ ಕಷ್ಟಪಟ್ಟು ದನಕರುಗಳನ್ನು ಸಾಕಿರುತ್ತಾನೆ. ಯಾವುದೋ ಒಂದು ಗುಡಿಸಲಿನಲ್ಲಿ ಕಟ್ಟಿರುತ್ತಾನೆ. ಆ ಗುಡಿಸಲಿಗೆ ಬೆಂಕಿ ಹತ್ತಿ ಆ ದನಕರುಗಳು ಸತ್ತುಹೋದಾಗ, ನೀವು ಕುರಿಗಳು ಸತ್ತುಹೋದಾಗ 5,000 ರೂ.ಗಳನ್ನು ಕೊಡುತ್ತೇವೆ ಎಂದು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದೀರಿ.

ಅದಕ್ಕಾಗಿ ಅಭಿನಂದನೆಗಳು. ಆದರೆ ಉಳಿದಿರುವಂತಹ ರೈತರು ಲಕ್ಷಾಂತರ ರೂಪಾಯಿ ಬೆಲೆಬಾಳುವಂತಹ ಆಕಳು ಇರಬಹುದು, ಹಸು, ಎಮ್ಮೆ, ಎತ್ತುಗಳು ಇರಬಹುದು, ಆ ಬಡ ರೈತ ದನಕರುಗಳನ್ನು ಗುಡಿಸಲಿನಲ್ಲಿ ಕಟ್ಟಿರುವಂತಹ ಸಂದರ್ಭದಲ್ಲಿ ಆಕಸ್ಮಿಕವಾಗಿ ಬೆಂಕಿ ಹತ್ತಿದರೆ ಆ ಎಲ್ಲಾ ದನಕರುಗಳು ಸತ್ತು ಹೋಗುತ್ತವೆ. ಉದಾಹರಣೆಗಾಗಿ ನನ್ನ ಕ್ಷೇತ್ರದಲ್ಲಿ ಅತ್ಯಂತ ಬಡವ ಸುಮಾರು 3 ಎಮ್ಮೆಗಳನ್ನು ಕಟ್ಟಿಕೊಂಡು ಹೈನುಗಾರಿಕೆ ಮಾಡುತ್ತಿದ್ದ. ಆಕಸ್ಮಿಕವಾಗಿ ಬೆಂಕಿ ಹತ್ತಿಕೊಂಡು ಆ ಗುಡಿಸಲು ಸುಟ್ಟುಹೋಗಿ ಆ 3 ಎಮ್ಮೆಗಳೂ ಸತ್ತುಹೋದವು. ಒಂದೊಂದು ಎಮ್ಮೆಯ ಕಿಮ್ಮತ್ತು ಸುಮಾರು 50,000 ರೂಪಾಯಿಗಳಾಗುತ್ತದೆ. ಇಲ್ಲಿ ಸರ್ಕಾರ ಕೊಡುವುದರ ಬಗ್ಗೆ ತಮಗೆ ಗೊತ್ತಿದೆ. ಅದಕ್ಕಾಗಿ ದಯಮಾಡಿ ನಿಮ್ಮ ಕಾಲದಲ್ಲಿಯಾದರೂ ನಿಮ್ಮ ಬಗ್ಗೆ ಇಡೀ ರಾಜ್ಯದಲ್ಲಿರುವಂತಹ ರೈತಾಪಿ ಜನರು ಬಹಳಷ್ಟು ಅಭಿಮಾನವನ್ನು ಇಟ್ಟುಕೊಂಡಿದ್ದಾರೆ. ನಿಮ್ಮ ಬಗ್ಗೆ ಒಂದು ಆಶಾಕಿರಣ ಇದೆ. ದಯಮಾಡಿ ತಾವು ಆಕಸ್ಮಕವಾಗಿ ಸತ್ತಿರುವಂತಹ ದನಕರುಗಳಿಗೆ ಕನಿಷ್ಠ ಪಕ್ಷ ಇಪ್ಪತ್ತು ಸಾವಿರ ರೂಪಯಿಗಳನ್ನಾದರೂ ಕೊಡುವಂತಹ ಒಂದು ಕೆಲಸಕ್ಕೆ ತಾವು ಚಾಲನೆಯನ್ನು ಕೊಟ್ಟರೆ ಶಾಶ್ವತವಾಗಿ ನಿಮ್ಮ ಹೆಸರು ಈ ರಾಜ್ಯದ ರೈತರು ನೆನೆಸಿಕೊಳ್ಳುವಂತಹ ಸಂದರ್ಭ ಬರುತ್ತದೆನ್ನುವಂತಹ ಮಾತನ್ನು ತಮ್ಮ ಮುಂದೆ ಹೇಳುವುದಕ್ಕೆ ಬಯಸುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಕಾನೂನು ಸಚಿವರೆ, ಮಾನ್ಯ ಸದಸ್ಯರು ಸರ್ಕಾರಕ್ಕೆ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ಪಶುಸಂಗೋಪನಾ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ನಾವು ಯಾವಾಗ ರೈತರು ತೊಂದರೆಗೆ ಒಳಗಾಗುತ್ತಾರೆ ಎನ್ನುವಂತಹ ಸಂದರ್ಭದಲ್ಲಿ ಈ ಬಗ್ಗೆ ಸರ್ಕಾರವೂ ಕೂಡ ದೃಢವಾದ ನಿರ್ಧಾರವನ್ನು ಮಾಡಿದೆ.

ಎಲ್ಲದಕ್ಕೂ ನಿಯಮವನ್ನು ಪಾಲಿಸಿ ಮಾಡುತ್ತೇವೆಂದಲ್ಲ. ಕಾಲುಬಾಯಿ ಜ್ವರದಿಂದಾಗಿ ಇದು ದಕ್ಷಿಣ ಭಾರತದ ಎಲ್ಲಾ ಕಡೆಗಳಲ್ಲಿಯೂ ಕೂಡ ಎಲ್ಲಾ ರಾಜ್ಯಗಳಲ್ಲಿಯೂ ಕೂಡ ಇವತ್ತಿನದಿವಸ ಪಶುಸಂಪತ್ತು ಹಾಳಾಗಿದೆ. ನಮ್ಮಲ್ಲಿ ಇದು ಗೊತ್ತಾದ ತಕ್ಷಣ ಸುಮಾರು 15,000 ರೂಪಾಯಿಗಳವರೆಗೂ ಈ ರೀತಿ ಸತ್ತು ಹೋದಂತಹ ಪ್ರಾಣಿಗೆ ಎಂದು 27 ಕೋಟಿ ರೂಪಾಯಿಗಳನ್ನು ಒಂದು ಪ್ರಾಣಿಗೆ 25,000 ರೂಪಾಯಿಗಳನ್ನು ಕೊಟ್ಟಂತಹ ಯಾವುದಾದರೂ ರಾಜ್ಯ ಇದ್ದರೆ ಅದು ಕರ್ನಾಟಕ ರಾಜ್ಯ ಸರ್ಕಾರವೇ ಕೊಟ್ಟಿರುವುದು. ಅಂದರೆ ನಮಗೆ ಅನುಕಂಪ ಇಲ್ಲವೆಂದಲ್ಲ, ನೀವು ಸಲಹೆಯನ್ನು ಕೊಡುತ್ತಿದ್ದೀರಿ. ಬಹುಶಃ ನೀವು ಕೊಟ್ಟಂತಹ ಸಲಹೆಯನ್ನು ನಾವು ನಿರಾಕರಿಸುವುದಿಲ್ಲ. ಯಾವುದಾದರೂ ರೀತಿಯಲ್ಲಿ ಕೊಡುವುದಕ್ಕೆ ಬರುತ್ತದೆ. ಇಂತಹ ಎಲ್ಲೋ ಒಂದು ಕಡೆಯಲ್ಲಿ rare ಆಗಿ ಆಗತಕ್ಕಂಥದ್ದು ಇದು. ಅದಕ್ಕಾಗಿ ನಾನು ಈಗಾಗಲೇ ಅಧಿಕಾರಿಗಳಿಗೂ ಹೇಳಿ ಈ ಬಗ್ಗೆ ಚರ್ಚೆಯನ್ನು ಕೂಡ ಮಾಡಿದ್ದೇನೆ. ಇಂತಹ ಪ್ರಸಂಗಗಳು ಯಾವುದಾದರೂ ಇದ್ದರೆ ನನಗೆ ಕಳುಹಿಸಿಕೊಡಿ ಎನ್ನುವಂತಹ ಮಾತನ್ನು ಹೇಳಿದ್ದೇನೆ. ಆ ಬಗ್ಗೆಯೂ ಕೂಡ ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು:– ಮಾನ್ಯ ಸವದಿಯವರೆ, ತಾವು ಬೇಗ ಮುಗಿಸಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ನಾನು ಪಶುಸಂಗೋಪನಾ ಸಚಿವರನ್ನು ಅಭಿನಂದಿಸುತ್ತೇನೆ. ಬಹಳ ಪೂರಕವಾಗಿ ಈ ವಿಷಯವನ್ನು ತೆಗೆದುಕೊಂಡು ಮುಂದಿನ ದಿನಗಳಲ್ಲಿ ಈ ರಾಜ್ಯದ ರೈತರಿಗೆ ಸಹಾಯವಾಗಿ ನಿಲ್ಲುತ್ತೇನೆಂದು ಹೇಳುತ್ತಿದ್ದಾರೆ. ಅದು ನೀವು ಇರುವ ತನಕ ನಡೆಯಬಹುದು. ಆದರೆ ನಿಮಗೆ ಕೊಟ್ಟಿರುವಂತಹ ಖಾತೆಗಳು ಯಾವಾಗ ಬದಲಾವಣೆಯಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ನಿಮ್ಮ ಕಾಲಾವಧಿಯೊಳಗಡೆ ಒಂದು ಶಾಶ್ವತವಾಗಿರುವಂತಹ Government ಆದೇಶವನ್ನು ಹೊರಡಿಸಿದರೆ ಆ

ಆದೇಶವು ನಿರಂತರವಾಗಿ ನಡೆದುಕೊಂಡು ಹೋಗುವುದಕ್ಕೆ ಸಾಧ್ಯವಿದೆ. ಇದರ ಜೊತೆಯಲ್ಲಿ ಗ್ರಾಮೀಣ ಪ್ರದೇಶಕ್ಕೆ ಹೋದರೆ ಪಶು ವೈದ್ಯರ ಕೊರತೆ ಇದೆ. ಸರ್ಕಾರವು ಪಶು ವೈದರನ್ನು ಭರ್ತಿ ಮಾಡುವ ಬಗ್ಗೆ ಇಚ್ಛಾಶಕ್ತಿಯನ್ನು ತೋರಿಸಿದರೂ ಕೂಡ ಪಶು ವೈದ್ಯರು- ಸಿಗುತ್ತಿಲ್ಲ. ನಮ್ಮ ರಾಜ್ಯದಲ್ಲಿರತಕ್ಕಂತಹ ಪಶು ವೈದ್ಯಕೀಯ ಕಾಲೇಜುಗಳು ಕೇವಲ ನಾಲ್ಕು ಇದೆ. ಹೊಸದಾಗಿ ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ನನ್ನ ಕ್ಷೇತ್ರವಾದ ಅಥಣಿಯಲ್ಲಿ ಒಂದು, ಗದಗ್‌ನಲ್ಲಿ ಒಂದು, ಎರಡು ಪಶು ವೈದ್ಯಕೀಯ ಕಾಲೇಜು ಪ್ರಾರಂಭವಾಗಿತ್ತು. ಮೊನ್ನೆ ನಾನು ಸನ್ಮಾನ್ಯ ಸಚಿವರಿಗೂ ಕೂಡ ವೈಯಕ್ತಿಕವಾಗಿ ಭೇಟಿ ಮಾಡಿ ವಿನಂತಿ ಮಾಡಿಕೊಂಡು ಅದನ್ನು ಆದಷ್ಟು ಬೇಗ ಕೆಲಸ ಪ್ರಾರಂಭವಾಗಿ ಬೇಗ ಮುಗಿಸಬೇಕೆಂದು ಹೇಳಿದಾಗ ಅವರು ಬಹಳ ಸಕಾರಾತ್ಮಕವಾಗಿ ನನಗೆ ಸ್ಪಂದನೆ ಮಾಡಿ ಮುಗಿಸಿಕೊಡುತ್ತೇನೆಂದು ಹೇಳಿದರು. ಇದರ ಜೊತೆಗೆ ಇನ್ನೂ ಹೆಚ್ಚಿನ ಪಶುವೈದ್ಯಕೀಯ ಕಾಲೇಜನ್ನು ಸೃಷ್ಟಿ ಮಾಡಿದರೆ ಇಡೀ ರಾಜ್ಯದಲ್ಲಿರುವಂತಹ ಪಶು ವೈದ್ಯರನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಮಾಡಿದಾಗ ಮಾತ್ರ ಈ ಪಶುಗಳನ್ನು ರಕ್ಷಣೆ ಮಾಡುವುದಕ್ಕೆ ಅದು ಹೆಚ್ಚು ಪೂರಕವಾಗುತ್ತದೆ ಎನ್ನುವಂತಹ ಸಲಹೆಯನ್ನು ನಾನು ಕೊಡುವುದಕ್ಕೆ ಬಯಸುತ್ತಿದ್ದೇನೆ. ಇನ್ನು ಸಹಕಾರ ಇಲಾಖೆಯ ಬಗ್ಗೆ ಹೇಳುವುದಾದರೆ ಹೊಸದಾಗಿ ನನಗೇನೂ ಕಂಡುಬರಲಿಲ್ಲ. ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿಗಳವರೆಗೆ ಬಡ್ಡಿರಹಿತ ಸಾಲವನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದೆವು. ಕಳೆದ ವರ್ಷ 2 ಲಕ್ಷದವರೆಗೆ ಎಂದು ಹೇಳಿದರು, ಈ ವರ್ಷ 3 ಲಕ್ಷ ರೂಪಾಯಿಗಳವರೆಗೆ ಬಡ್ಡಿರಹಿತ ಸಾಲ ಕೊಡುತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಕೇವಲ ಇದು ಘೋಷಣೆಯಾಗುತ್ತದೆಯೇ ಹೊರತಾಗಿ ಇದು ಅನುಷ್ಠಾನ ಆಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಮೂರು ಲಕ್ಷ ರೂಪಾಯಿಗಳವರೆಗೆ ಸಾಲ

ಪಡೆಯುವಂತಹ ರೈತ ಬಹಳಷ್ಟು ಜಿಲ್ಲೆಯಲ್ಲಿ ಬೆರಳೆಣಿಕೆಯಷ್ಟು ಮಾತ್ರ ಇದ್ದಾನೆ. ಸರ್ಕಾರವು 3 ಲಕ್ಷದವರೆಗೆ ಬಡ್ಡಿರಹಿತ ಸಾಲ ಕೊಡುತ್ತೇವೆಂದು ಹೇಳುತ್ತಾರೆ ಇವರು ಎಲ್ಲಿಂದ ಕೊಡುತ್ತಾರೆ? ಸರ್ಕಾರವು ಬಡ್ಡಿ ರಿಯಾಯಿತಿಯನ್ನು ಕೊಡುತ್ತದೆ. ಯಾವುದೇ ಒಂದು ಜಿಲ್ಲಾ ಮಧ್ಯವರ್ತಿ ಬ್ಯಾಂಕ್‌ಗಳಲ್ಲಿ ಇವತ್ತು ನಾವು ಹಣದ ಲಭ್ಯತೆಯನ್ನು ನೋಡಬೇಕಾಗುತ್ತದೆ. ಸರ್ಕಾರ ಹಣದ ಲಭ್ಯತೆಯನ್ನು ನೋಡಿಕೊಂಡು ಸಾಲ ಕೊಡುವಂತಹ ವ್ಯವಸ್ಥೆಯಾಗುತ್ತದೆ. ನಿಮ್ಮ ಸರ್ಕಾರಕ್ಕೆ ಇಚ್ಛಾಶಕ್ತಿ ಇದೆ. ಪ್ರತಿಯೊಬ್ಬ ರೈತನಿಗೂ 3 ಲಕ್ಷ ರೂಪಾಯಿಗಳವರೆಗೆ ಬಡ್ಡಿರಹಿತ ಸಾಲ ಸಿಗಬೇಕೆನ್ನುವಂತಹ ನಿಮ್ಮ ಅಪೇಕ್ಷೆ ಇದೆಯಲ್ಲಾ, ನೀವು ಸರ್ಕಾರದಿಂದ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಸರ್ಕಾರದ ಏನು deposit ಹಣವಿದೆ ಅಲ್ಲಿ ಸಿ.ಡಿ.ಅಕೌಂಟ್‌ಗಳು ಇವೆ, ಎಸ್.ಬಿ. ಅಕೌಂಟ್‌ಗಳು ಇವೆ ಅದನ್ನು ಸಹಕಾರಿ ಸಂಘಗಳಲ್ಲಿ ಇಡುವಂತಹ ಪ್ರಯತ್ನವನ್ನು ನೀವು ಪ್ರಾರಂಭ ಮಾಡಬೇಕು. ಆ ಹಣವನ್ನು ಸದ್ಬಳಕೆಯನ್ನು ಮಾಡಿಕೊಳ್ಳಬೇಕು.

ಶ್ರೀ ವೈ.ಎನ್. ರುದ್ರೇಶ್‌ಗೌಡ:- ನೀವೇಕೆ ಮಾಡಲಿಲ್ಲ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ನೀವು ಇದಕ್ಕೆ ಬಂದಿದ್ದೀರಾ? ನಾನು ಈಗ ಮಾತನಾಡುತ್ತೇನೆ. ಆಮೇಲೆ ನೀವು ಸರ್ಕಾರದ ಪರವಾಗಿ ಏನು ಬೇಕಾದರೂ ಉತ್ತರ ಕೊಡಿ ಈ ಬಗ್ಗೆ ನನ್ನದೇನೂ ತಕರಾರು ಇಲ್ಲ. ರಾಯರೆಡ್ಡಿಯವರು ಹೋದ ಮೇಲೆ ನೀವು ಹೊಸದಾಗಿ ಬಂದಿದ್ದೀರಿ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಸವದಿಯವರೆ, ತಾವು ತಮ್ಮ ಮಾತನ್ನು ಮುಂದುವರೆಸಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ನನ್ನ ವಿಚಾರವನ್ನು ನಾನು ಮಾತನಾಡುವುದು, ಹೇಳಿಕೊಳ್ಳುವುದು ಅದು ನನ್ನ ಹಕ್ಕಾಗಿದೆ, ನೀವು ಯಾವಾಗ ಬೇಕಾದರೂ ಸರ್ಕಾರದ ಪರವಾಗಿ ಉತ್ತರ ಕೊಡಬೇಕಾದರೆ ಕೊಡಿ.

ಉಪಾಧ್ಯಕ್ಷರು:– ಮಧ್ಯ interfere ಆಗಬೇಡಿ. ನೀವು ಮಾತನಾಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ನನ್ನ ಕೈಯಲ್ಲಿ ಮಾಡುವುದಕ್ಕಾಗಲಿಲ್ಲ, ಸಮರ್ಥವಾಗಿ ನಾವು ಮಾಡುತ್ತೇವೆ ಎಂದು ಜನರಿಗೆ ಭರವಸೆಯನ್ನು ಕೊಟ್ಟು ಮಾಡಲಿಕ್ಕೆ ಆಗದೇ ಇಲ್ಲಿಗೆ ಬಂದು ಕುಳಿತಿದ್ದೇನೆ. ನಿಮಗೆ ಇಚ್ಛಾಶಕ್ತಿ ಇದ್ದರೆ ನೀವು ಮಾಡಿ ತೋರಿಸಿ. ಈ ಸಹಕಾರಿ ಸಾಲವನ್ನು ಕೊಡುವಂತಹ ಸಂದರ್ಭದಲ್ಲಿ ಸನ್ಮಾನ್ಯ ಸಹಕಾರಿ ಸಚಿವರು ಸದನದಲ್ಲಿಲ್ಲ. ಆದರೂ ಕೂಡ ನಾನು ಮಾತನಾಡಿರುವ ಬಗ್ಗೆ ಇಲ್ಲಿಂದ ವರದಿ ಹೋಗುತ್ತದೆ. ಮಾಧ್ಯಮಿಕ ಸಾಲಗಳಿಗೆ 10 ಲಕ್ಷ ರೂಪಾಯಿಗಳವರೆಗೆ ಪ್ರತಿಶತ 3 ರಷ್ಟು ಸಾಲವನ್ನು ಕೊಡುತ್ತೇವೆಂದು ಒಂದು ಆದೇಶವನ್ನು ಮಾಡಿದರು. ಈ ಆದೇಶದಲ್ಲಿ ಒಂದು ಬದಲಾವಣೆಯಾಗಬೇಕಾಗಿದೆ. ನಾನು ಒಬ್ಬ ರೈತ, 10 ಲಕ್ಷ ರೂಪಾಯಿಗಳಿಂದ 20 ಲಕ್ಷ ರೂಪಾಯಿಗಳವರೆಗೆ ಸಾಲ ಕೊಡುತ್ತೇವೆಂದು ಮಾಡಿದರೆ ನಾನು ಸ್ವಾಗತ ಮಾಡುತ್ತೇನೆ. ಆದರೆ ಅಲ್ಲಿ ಅಧಿಕಾರಿಗಳು ಎಂತಹ ಆದೇಶವನ್ನು ಕೊಟ್ಟಿದ್ದಾರೆಂದರೆ ಒಬ್ಬ ರೈತ ಮಾಧ್ಯಮಿಕ ಸಾಲವನ್ನು ಪಡೆದುಕೊಂಡು ಟ್ರ್ಯಾಕ್ಟರ್ ಕೊಂಡರೆ ಅದು 12 ಲಕ್ಷ ರೂಪಾಯಿಗಳಾಗುತ್ತದೆ. 12 ಲಕ್ಷ ರೂಪಾಯಿಗಳ ಸಾಲವನ್ನು ತೆಗೆದುಕೊಂಡರೆ ಇದಕ್ಕೆ ಬಡ್ಡಿ ಅನ್ವಯವಾಗುವುದಿಲ್ಲ. ನಾನು - ಸಹಕಾರಿ ಸಚಿವನಾಗಿದ್ದಂತಹ ಸಂದರ್ಭದಲ್ಲಿಯೂ ಸಹ ಕೂಡ ಮಾಧ್ಯಮಿಕ ಸಾಲಗಳಿಗೆ 10 ಲಕ್ಷ ರೂಪಾಯಿಗಳವರೆಗೆ ಸಾಲವನ್ನು ಕೊಡುತ್ತಿದ್ದೆವು. ಆಗ ಹೇಗೆ ಮಾಡಿದ್ದೇವೆಂದರೆ, 10 ಲಕ್ಷ ರೂಪಾಯಿಗಳವರೆಗೆ ಪ್ರತಿಶತ 3 ರಷ್ಟು, ಅದರ

ಮೇಲಿರತಕ್ಕಂತಹದ್ದು ಬ್ಯಾಂಕಿನವರು ತಮಗೆ ಕೊಡತಕ್ಕಂತಹ ಪ್ರತಿನಿತ್ಯ ಸಾಲದ ಬಡ್ಡಿಯನ್ನು ಕೊಡಬೇಕು. ಇವರು ಆದೇಶ ಏನು ಮಾಡಿದ್ದಾರೆಂದರೆ 10 ಲಕ್ಷಕ್ಕಿಂತ ಮೇಲ್ಪಟ್ಟು ಯಾರೇ ರೈತ ಸಾಲವನ್ನು ಪಡೆದುಕೊಂಡರೆ ಇಡೀ entire amount ಗೆ regular interest ಹಾಕುವುದನ್ನು ತೆಗೆದುಹಾಕಬೇಕು. ಇಲ್ಲದಿದ್ದರೆ, ಇದರಿಂದ ಬಹಳಷ್ಟು ರೈತರಿಗೆ ತೊಂದರೆಯಾಗುತ್ತದೆ. ಆ ರೈತರ ತೊಂದರೆಯನ್ನು ನೀಗಿಸುವುದಕೋಸ್ಕರ 10 ಲಕ್ಷದ ವರೆಗೆ ಕೊಡತಕ್ಕಂತಹ ಮಾಧ್ಯಮಿಕ ಸಾಲಕ್ಕೆ ಸೀಮಿತಗೊಳಿಸಿರುವಂತಹದ್ದೂ ಕೂಡ ಬದಲಾವಣೆಯಾಗಬೇಕು. ಇದರ ಜೊತೆಗೆ ಮಾಧ್ಯಮಿಕ ಸಾಲದ ಮೂರು ಪ್ರತಿಶತ ಎಂದು ಹೇಳಿರುವುದು ಅದು ಇದುವರೆಗೂ rate of interest ಇವತ್ತಿನವರೆಗೂ ಕೂಡ final ಆಗಿರುವುದಿಲ್ಲ. ರೈತನು ಪ್ರತಿ ಶತ 3 ರಷ್ಟು ಬಡ್ಡಿ ಕಟ್ಟಬೇಕು. ಆದರೆ ಸರ್ಕಾರ ಸಹಕಾರಿ ಸಂಘಗಳಿಗೆ ಎಷ್ಟು ಹಣ ಕೊಡಬೇಕೆಂಬುವುದು ಇದುವರೆಗೂ ಸುಮಾರು 8 ತಿಂಗಳಿಂದ ನಿರ್ಣಯವಾಗಿಲ್ಲ. ಆ ಬಗ್ಗೆ ಸರ್ಕಾರವು ಬೇಗನೆ ನಿರ್ಣಯ ಮಾಡಿ ಈ ಮಾಧ್ಯಮಿಕ ಸಾಲವನ್ನು ಹೆಚ್ಚು ಮಾಡುವುದು ಆಗಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಸವದಿಯವರೆ, ತಾವು ಕ್ಲೋಸ್ ಮಾಡಿ. conclude ಮಾಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ನಾನು ನಾಲ್ಕು ಪಾಯಿಂಟ್‌ಗಳ ಬಗ್ಗೆ ಸಲಹೆಯನ್ನು ಕೊಡುತ್ತೇನೆ. ನಾನು ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇನ್ನು ಕಂದಾಯ ಇಲಾಖೆಯ ಬಗ್ಗೆ ಹೇಳುವುದಾದರೆ, ಒಬ್ಬ ರೈತ ತನ್ನ ಪಹಣಿಯನ್ನು ಪಡೆದುಕೊಳ್ಳಬೇಕಾದರೆ, ನೆಮ್ಮದಿ ಕೇಂದ್ರ ಅಥವಾ ತಾಲ್ಲೂಕು ಕೇಂದ್ರಕ್ಕೆ ಹೋಗಿ ಪಹಣಿಗಳನ್ನು ಪಡೆದುಕೊಳ್ಳಬೇಕಾಗುತ್ತದೆ. ಸನ್ಮಾನ್ಯ ಕಾನೂನು ಸಚಿವರಿಗೆ ನನ್ನದು ಒಂದು ವಿನಂತಿ ಇದೆ. ನಿಮ್ಮ

ಅಧ್ಯಕ್ಷತೆಯೊಳಗೆ ಕಂದಾಯ ಇಲಾಖೆಯ ಅಧಿಕಾರಿಗಳನ್ನು ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳನ್ನು ಕರೆಸಿಕೊಂಡು ಒಂದು ಸಭೆಯನ್ನು ಮಾಡಿ. ನಾನು ಸಹಕಾರ ಸಚಿವನಾಗಿದ್ದಾಗಲೂ ಒಂದು ಸಭೆಯನ್ನು ಮಾಡಿ ಒಂದು ಹಂತಕ್ಕೆ ತಂದಿದ್ದೆ. ನಾವು ಇದ್ದಂತಹ ಸಂದರ್ಭದಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಮಾತ್ರ ನಾವು ಛಾಪಾ ಕಾಗದಗಳನ್ನು ಕೊಡುತ್ತಿದ್ದೆವು. ಅದನ್ನು ಇಡೀ ರಾಜ್ಯದಲ್ಲಿರತಕ್ಕಂತಹ ಸಹಕಾರಿ ಸಂಘಗಳ ಮುಖಾಂತರ ಛಾಪಾ ಕಾಗದಗಳನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದೆವು. ಅದೇ ತರಹ ಇವತ್ತು ಪಹಣಿ ಪತ್ರಿಕೆಗಳನ್ನು ಉತಾರಗಳನ್ನು ಆಯಾಯಾ ಸಹಕಾರಿ ಸಂಘಗಳ ಮುಖಾಂತರವೇ ಕೊಡುವುದಕ್ಕೆ ಸಾಧ್ಯವಿದೆ. ನಿಮ್ಮ ತಹಶೀಲ್ದಾರ್ ಕಛೇರಿಯಲ್ಲಿರುವಂತಹ ಡಾಟಾವನ್ನು ಆಯಾಯಾ ಸಂಘಗಳಿಗೆ ಕೊಟ್ಟು ಅವರಿಂದ ಒಂದು agreement ಮಾಡಿಕೊಳ್ಳವುದಾದರೆ ನೇರವಾಗಿ ಕೃಷಿ ಪತ್ತಿನ ಸಹಕಾರ ಸಂಘಗಳು ಇರಬಹುದು, Urban Bank ಇರಬಹುದು, ಯಾವುದೇ ಸಹಕಾರ ಸಂಘಗಳ ಮುಖಾಂತರ ಪಹಣಿ ಪತ್ರಿಕೆಗಳನ್ನು ಕೊಡುವುದಕ್ಕೆ ಅದು ಸಾಧ್ಯವಾಗುತ್ತದ್ದೆ ಆ ಕೆಲಸವನ್ನು ಮಾಡಿದರೆ ಬಹುಶಃ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ ಹಳ್ಳಿಯಿಂದ ಪಟ್ಟಣಕ್ಕೆ ಬರುವಂತಹ ರೈತನ ಕೆಲಸ ತಪ್ಪುತ್ತದೆ, ಆ ರೈತನಿಗೆ ಅವರವರ ಗ್ರಾಮಗಳಲ್ಲಿ ಪಹಣಿ ಪತ್ರಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆ ಕೆಲಸವನ್ನು ತಮ್ಮ ಅಧ್ಯಕ್ಷತೆಯಲ್ಲಿ ತಮ್ಮ ಇಚ್ಛಾಶಕ್ತಿಯನ್ನು ಉಪಯೋಗ ಮಾಡಿಕೊಂಡರೆ ಬಹುಶಃ ರಾಜ್ಯದ ಜನರು ನಿಮ್ಮನ್ನು ಮೆಚ್ಚಿಕೊಳ್ಳುತ್ತಾರೆಂಬುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಕೊನೆಯದಾಗಿ ಆರೋಗ್ಯ ಇಲಾಖೆಯ ಬಗ್ಗೆ ಹೇಳುವುದಾದರೆ, ಸರ್ಕಾರವು ಒಂದು ಜಿಲ್ಲೆಗೆ ಒಂದು ತಾಲ್ಲೂಕನ್ನು ಆಯ್ಕೆ ಮಾಡಿ ಡಯಾಲಿಸಿಸ್ ಕೇಂದ್ರವನ್ನು ಮಾಡುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದೀರಿ. ನಾನು ಸರ್ಕಾರದಲ್ಲಿ ವಿನಂತಿ ಮಾಡುತ್ತೇನೆ, ಇದು ಏನಾಗುತ್ತದೆ

ಎಂದರೆ ಒಂದೊಂದು ಜಿಲ್ಲೆಗೆ ಒಂದೊಂದು ತಾಲ್ಲೂಕು ಮಾಡುವುದರಿಂದ ಇದು ಸಂಪೂರ್ಣವಾಗಿ ಯಶಸ್ವಿಯಾಗುವುದಕ್ಕೆ ಸಾಧ್ಯವಿಲ್ಲ. ನೀವು ಏಕ ಕಾಲಕ್ಕೆ ಮಾಡುವುದಕ್ಕೆ ಆಗದೆ ಇರಬಹುದು, ಎಲ್ಲೆಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಸೌಲಭ್ಯಗಳಿರತಕ್ಕಂತಹ ಸಂದರ್ಭದಲ್ಲಿ ಅದರ ಜೊತೆಗೆ ಸರ್ಕಾರವು ಒಡಂಬಡಿಕೆಯನ್ನು ಮಾಡಿಕೊಂಡು ಪ್ರತಿ ತಾಲ್ಲೂಕಿನಲ್ಲಿ ಒಂದು ಉಚಿತವಾಗಿರುವಂತಹ ಡಯಾಲಿಸಿಸ್ ಕೇಂದ್ರವನ್ನು ಮಾಡುವುದಕ್ಕೆ ಚಿಂತನೆಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೆ, ಗೃಹ ಸಚಿವರು ಈಗ ಸದನದಲ್ಲಿ ಇದ್ದಾರೆ. ಸನ್ಮಾನ್ಯ ಗೃಹ ಸಚಿವರೇ, ಉಪಾಧ್ಯಕ್ಷರ ಮೂಲಕ ತಮ್ಮಲ್ಲಿ ನಾನು ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಕಳೆದ 10 ವರ್ಷಗಳಿಂದ ಈ ರಾಜ್ಯದಲ್ಲಿ ಮಟ್ಕಾ ದಂಧೆ ಇರಲಿಲ್ಲ. ಆದರೆ ಇವತ್ತಿನ ದಿವಸ ಮಟ್ಕಾ ದಂಧೆ ಪ್ರಾರಂಭವಾಗಿದೆ, ಇಡೀ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಇಡೀ ರಾಜ್ಯದಲ್ಲಿ ಇವತ್ತು ಮಟ್ಕಾ ದಂಧೆ ಪ್ರಾರಂಭವಾಗಿದೆ. ಇದರ ಬಗ್ಗೆ ನೀವು ಮುತುವರ್ಜಿ ವಹಿಸಬೇಕು. ಇಡೀ ರಾಜ್ಯದಲ್ಲಿ ಜನ ನಿಮ್ಮ ಬಗ್ಗೆ ಒಳ್ಳೆಯ ಭಾವನೆಯನ್ನು ಇಟ್ಟುಕೊಂಡಿದ್ದಾರೆ. ಕೆಳ ಅಧಿಕಾರಿಗಳು ಮಾಡತಕ್ಕಂಥ ತಪ್ಪಿನಿಂದ ಅವರು ಮಾಡತಕ್ಕಂಥ ಒಂದು ಸಮಾಜಘಾತುಕ ಕಾರ್ಯಗಳಿಂದ ಅದು ನಿಮ್ಮ ಹೆಸರಿಗೆ ಕಳಂಕ ಬರಬಾರದೆಂಬುದು ನನ್ನ ಅಪೇಕ್ಷೆಯಾಗಿದೆ. ಗ್ರಾಮೀಣ ಮಟ್ಟದಲ್ಲಿ ಇರಬಹುದು, ತಾಲ್ಲೂಕು ಮಟ್ಟದಲ್ಲಿ ಇರಬಹುದು, ಇವತ್ತು ಇಡೀ ರಾಜ್ಯದಲ್ಲಿ ಮಟ್ಕಾ ದಂಧೆ ಶುರುವಾಗಿದೆ. ಅದನ್ನು ತಡೆ ಹಿಡಿಯುವಂಥ ಕೆಲಸವಾಗಬೇಕು. ಅದರ ಜೊತೆಗೆ ಪೂರಕವಾಗಿ ಇಸ್ಪೀಟು ಅಡ್ಡೆಗಳು ಪ್ರಾರಂಭವಾಗಿವೆ. ಇಡೀ ತಾಲ್ಲೂಕುಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಇಸ್ಪೀಟು ಅಡ್ಡೆಗಳು ಪ್ರಾರಂಭವಾಗಿವೆ. ನೀವು ಮಾಹಿತಿಯನ್ನು ತರಿಸಿಕೊಳ್ಳಿ. ನನ್ನ ತಾಲ್ಲೂಕಿನಲ್ಲಿಯೇ ಒಂದು ಇಸ್ಪೀಟು ಅಡ್ಡೆ ಪ್ರಾರಂಭವಾಗಿದೆ. ತಾಲ್ಲೂಕು ಅಧಿಕಾರಿಗಳು ಅಲ್ಲಿ ಗಮನ ಹರಿಸದೆ ಇರುವ ಸಂದರ್ಭದಲ್ಲಿ ಜಿಲ್ಲಾ ಮಟ್ಟದ

ಅಧಿಕಾರಿಗಳಿಗೆ ನಾನು ಅಭಿನಂದನೆ ಹೇಳುತ್ತೇನೆ. ಅಲ್ಲಿರತಕ್ಕಂಥ ಪೋಲೀಸ್ ವರಿಷ್ಠಾಧಿಕಾರಿ special squad ಅನ್ನು ಕಳುಹಿಸಿ ಅಲ್ಲಿ raid ಮಾಡಿರುವಂಥದ್ದು. Raid ಆದ ಮೇಲೆ ಒಬ್ಬ ಸಬ್ ಇನ್ಸ್‌ಪೆಕ್ಟರ್, ಒಬ್ಬ ಇನ್ಸ್‌ಪೆಕ್ಟರ್ suspend ಆಗಿರುವಂಥ ಮಾಹಿತಿ ತಮ್ಮಲ್ಲಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಇಂಥ ದಂಧೆಗಳು ರಾಜ್ಯದಲ್ಲಿ ತಲೆ ಎತ್ತಲಿಕ್ಕೆ ದಯಮಾಡಿ ತಾವು ಬಿಡಬಾರದು, ತಾವು special squad ಕಳುಹಿಸಿ ಇದನ್ನು ನಿಯಂತ್ರಿಸಬೇಕೆಂದು ತಮ್ಮಲ್ಲಿ ನಾನು ವಿನಂತಿಯನ್ನು ಮಾಡಬಯಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು):– ಈ ಮಟ್ಕಾ ದಂಧೆ, Single digit lottery, ಯಾವುದೇ ರೀತಿಯ gambling ವಿಚಾರದಲ್ಲಿ ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಹಿರಿಯ ಅಧಿಕಾರಿಗಳನ್ನು ಸಭೆಗೆ ಕರೆಸಿ ಈಗಾಗಲೇ ಕಟ್ಟುನಿಟ್ಟಿನ ಆದೇಶವನ್ನು ಕೊಟ್ಟಿದ್ದೇವೆ. ಬಹುಶಃ ಯಾವುದಾದರೂ ಪ್ರಕರಣದಲ್ಲಿ ನಮ್ಮ ಅಧಿಕಾರಿಗಳು ಇದರಲ್ಲಿ ಪಾಲುದಾರರಾಗಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಅವರ ವಿರುದ್ಧ enquiry ಮಾಡಿ ತಕ್ಕ ಶಿಕ್ಷೆಯನ್ನು ವಿಧಿಸುವ ಕೆಲಸವನ್ನು ಮಾಡುತ್ತೇವೆ. ಇದನ್ನು ಈ ಸದನದ ಮೂಲಕ ತಮಗೆ ಹೇಳುತ್ತಿದ್ದೇನೆ. ಯಾವುದೇ ರೀತಿಯ ಇಂಥ ವಿಚಾರಗಳಿಗೆ ಅವಕಾಶವನ್ನು ಕೊಡುವುದಿಲ್ಲ. ಈಗಾಗಲೇ ಕ್ರಮ ಕೈಗೊಂಡಿದ್ದೇವೆ, ಮತ್ತೊಮ್ಮೆ ನಾನು ಎಲ್ಲಾ ಅಧಿಕಾರಿಗಳಿಗೆ ಈ ವಿಚಾರವನ್ನು ಹೇಳುತ್ತೇನೆ. ಮತ್ತು ಕ್ಲಬ್‌ಗಳ ವಿಚಾರದಲ್ಲಿ ಈಗಾಗಲೇ ನಾವು ಗೈಡ್‌ಲೈನ್ಸ್ ಮಾಡಿಕೊಟ್ಟಿದ್ದೇವೆ. ಆ ಗೈಡ್‌ಲೈನ್ಸ್ ವಿರುದ್ಧವಾಗಿ ಯಾರಾದರೂ ನಡೆದುಕೊಂಡರೆ ದಯವಿಟ್ಟು ಎಲ್ಲಾ ಸದಸ್ಯರು ಇಂಥ ಪ್ರಕರಣಗಳು ತಮ್ಮ ಗಮನಕ್ಕೆ ಬಂದರೆ ನಾವು ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶವನ್ನು ಕೊಡುತ್ತೇವೆ.

ಉಪಾಧ್ಯಕ್ಷರು:- ನೀವು ಮುಗಿಸಿಬಿಡಿ, ಟೈಮ್ ಆಯಿತು. ಪುಟ್ಟಣ್ಣಯ್ಯನವರೆ, ನೀವು ಮಾತನಾಡುವಾಗ ಹೇಳಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಒಂದೇ sentence, ನಾನು ಜಾಸ್ತಿ ಮಾತನಾಡುವುದಿಲ್ಲ. Club Licensing Authority ಇದೆ, ಕ್ಲಬ್‌ಗೆ ಲೈಸೆನ್ಸ್ ಅನ್ನು ಬೆಳಿಗ್ಗೆ 12.00 ಗಂಟೆಯಿಂದ ರಾತ್ರಿ 11.00 ಗಂಟೆಯವರೆಗೆ ಇಸ್ಪೀಟ್, ಕುಡಿತ ಎಲ್ಲವನ್ನು ಮಾಡಲಿಕ್ಕೆ ಕ್ಲಬ್‌ಗೆ ಏನು ಲೈಸೆನ್ಸ್ ಕೊಡುತ್ತೀರಿ, ಅದನ್ನು ಕನಿಷ್ಠ entertainment ಗೆಂದು 5 ರಿಂದ 9.00, 9.30 ರವರೆಗೆ close ಮಾಡುವಂಥ ಒಂದು ನೀತಿಯನ್ನು ಅನುಷ್ಠಾನಕ್ಕೆ ತಂದರೆ ಕನಿಷ್ಠ ಆ ಹಳ್ಳಿಗಳಾಗಲಿ, ನಗರಗಳಾಗಲೀ, ಕನಿಷ್ಠ ದುಡಿಯುವ ಯುವಕರು ತಮ್ಮ ಕೆಲಸವನ್ನು ಮಾಡಲಿಕ್ಕೆ ಅನುಕೂಲವಾಗುತ್ತದೆ, ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ, ಸರ್ಕಾರವೇ ಲೈಸೆನ್ಸಿಂಗ್ authority ಆಗಿರುವುದರಿಂದ ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿ.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು):- ಈಗ ಕ್ಲಬ್‌ಗಳಿಗೆ skill games ಅದಕ್ಕೆ actual ಆಗಿ ಲೈಸೆನ್ಸ್ authority ಇಲ್ಲ. ನಾವು ಅವರಿಗೆ ಒಂದು ಗೈಡ್‌ಲೈನ್ಸ್ ಕೊಟ್ಟಿದ್ದೇವೆ. ಆ ಗೈಡ್‌ಲೈನ್ಸ್ ಪ್ರಕಾರ ನಡೆಯಬೇಕೆಂದು ಹೇಳಿದ್ದೇವೆ. ಅದನ್ನೆಲ್ಲಾ ನಮ್ಮ Superintendent of Police ನವರಿಗೆ ಕಳುಹಿಸಿ ಕೊಟ್ಟಿದ್ದೇವೆ. ಇನ್ನೇನಾದರೂ ಪುಟ್ಟಣ್ಣಯ್ಯನವರು ಹೇಳಿದ ಹಾಗೆ ನಡೆಯುತ್ತಿದ್ದರೆ ಅದರ ಬಗ್ಗೆ ನಾವು ಕ್ರಮಕೈಗೊಳ್ಳುತ್ತೇವೆ.

ಶ್ರೀ ರಮೇಶ್ ಬಂಡಿಸಿದ್ದೇಗೌಡ:- ಮಾನ್ಯ ಉಪಾಧ್ಯಕ್ಷರೆ, ಊರು, ಊರುಗಳಲ್ಲಿ, ಗ್ರಾಮ, ಗ್ರಾಮಗಳಲ್ಲಿ ಕ್ಲಬ್‌ಗಳು ಅಂಗಡಿಗಳ ರೀತಿಯಲ್ಲಿ ಆಗಿವೆ. ಯಾವುದಕ್ಕೆ permission ಕೊಡುತ್ತಾರೆ, ಏನು,ಎಲ್ಲಿ ಎಂದು ಮಾಹಿತಿಯೇ ಗೊತ್ತಾಗುವುದಿಲ್ಲ. ಅಷ್ಟೊಂದು ಕೆಟ್ಟ ಪರಿಸ್ಥಿತಿ, ಕೆಟ್ಟ ವಾತಾವರಣ ಇದೆ, ಅಂಗಡಿಗಳಲ್ಲಿ ಬಾಟಲ್‌ಗಳು ಸಿಗುತ್ತವೆ, ಅಲ್ಲೇ ಕ್ಲಬ್‌ಗಳು ಬೇರೆ, ಊರುಗಳಲ್ಲಿ

ಹೆಂಗಸರು, ಮಕ್ಕಳು ವಾಸ ಮಾಡಲಿಕ್ಕಾಗದೇ ಇರುವಂಥ ಪರಿಸ್ಥಿತಿ ನಿರ್ಮಾಣ ಆಗುವಂಥ ಒಂದು ವ್ಯವಸ್ಥೆಯನ್ನು ನಾವು ತಲುಪುತ್ತಿದ್ದೇವೇನೋ ಎಂಬ ಭಯ ಇದೆ. ದಯಮಾಡಿ ಗೃಹ ಇಲಾಖೆ ಇದರ ಬಗ್ಗೆ ಬಿಗಿಯಾದ ಕ್ರಮ ವಹಿಸಿಕೊಳ್ಳದೇ ಹೋದರೆ ಬಹಳ ತಪ್ಪಾಗುತ್ತದೆ.

ಉಪಾಧ್ಯಕ್ಷರು:– ಸವದಿಯವರೇ, ನೀವು ಮಾತನಾಡಿ.

ಶ್ರೀ ಎಂ. ಕೃಷ್ಣಾರೆಡ್ಡಿ:–ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸವದಿಯವರು ಹೇಳಿರತಕ್ಕಂಥ ವಿಚಾರ ಅದು ನಿಜವಾಗಲೂ ಕೂಡ ನೂರಕ್ಕೆ ನೂರು ಸತ್ಯ. ಗಡಿಭಾಗದಲ್ಲಿರುವಂಥ ತಾಲ್ಲೂಕುಗಳಿಂದ ಉದಾಹರಣೆಗೆ ಚಿಂತಾಮಣಿ ತಾಲ್ಲೂಕುಗಳಿಗೆ ಆಂಧ್ರ, ಮದನಪಲ್ಲಿಯಿಂದ ಸಾಕಷ್ಟು ಜನರು ಬಂದು ಇವತ್ತು ಜೂಜು, ಮಟ್ಕಾ, ಈ gambling ಮಾಡುತ್ತಿರುವುದರಿಂದ ಆದಷ್ಟು ಬಡ ಕುಟುಂಬಗಳು ಬೀದಿಪಾಲಾಗಿವೆ, ಅದಕ್ಕಾಗಿ ಈ ಸರ್ಕಾರ ಗಂಭೀರವಾಗಿ ಇದನ್ನು ಚಿಂತನೆ ಮಾಡಬೇಕಾಗಿದೆ.

ಉಪಾಧ್ಯಕ್ಷರು:– ಬೇಗ ಮುಕ್ತಾಯಗೊಳಿಸಿ.

ಶ್ರೀ ಕೆ.ಜೆ. ಜಾರ್ಜ್:– ಪೊಲೀಸಿನವರಿಂದ ಮಾತ್ರ ಇದನ್ನು ತಡೆಯಲಿಕ್ಕೆ ಆಗುವುದಿಲ್ಲ, ಸಾರ್ವಜನ್ರಿಕರೂ ಸಹ ಸಹಕಾರ ನೀಡಬೇಕು. ಮಾನ್ಯ ಸದಸ್ಯರು ಹೇಳಿದಂತೆ ಆಂಧ್ರ ಪ್ರದೇಶದಲ್ಲಿದೆ ಎಂದು ಹೇಳುತ್ತಿದ್ದಾರೆ, ದಯವಿಟ್ಟು ಜನರ ಸಮೇತ, ಸಾರ್ವಜನಿಕರ ಸಮೇತ ನಮಗೆ ನೀವು ಸಹಕಾರ ಮಾಡಬೇಕಾಗಿದೆ. ಎಲ್ಲೆಲ್ಲಿ ಈ ರೀತಿ ಆಗುತ್ತಿದೆ ಅದರ ಬಗ್ಗೆ ನಿರ್ದಿಷ್ಟವಾಗಿ ಮಾಹಿತಿಯನ್ನು ಕೊಟ್ಟರೆ ನಾವು Special squad ಎಂದು ನಾವು ಮಾಡುತ್ತಿದ್ದೇವೆ. ಆ squad ಗಳನ್ನು ಕಳುಹಿಸಿ ಬಿಟ್ಟು ಅದನ್ನು closs ಮಾಡಿಸುವಂಥ ಕೆಲಸವನ್ನು ನಾವು ಮಾಡುತ್ತೇವೆ.

(ಗೊಂದಲ)

ಉಪಾಧ್ಯಕ್ಷರು:- ಸಾಕು, ಈಗ ಸಚಿವರು ಹೇಳಿದ್ದಾರಲ್ಲಾ, ಅದೇ ವಿಚಾರ ತಾನೆ? ಸವದಿಯವರೆ ಮುಂದುವರೆಸಿ, ಮಂತ್ರಿಗಳು ಹೇಳಿದ್ದಾರಲ್ಲಾ? ಆಯಿತು.

ಶ್ರೀ ಎಂ. ಕೃಷ್ಣಾರೆಡ್ಡಿ:- ನಾವು ಈ ಬಗ್ಗೆ ಗೃಹ ಸಚಿವರಿಗೆ ಸಾಕಷ್ಟು ಪತ್ರಗಳನ್ನು ಬರೆದಿದ್ದೇವೆ. S.Pಯವರಿಗೆ ಪತ್ರವನ್ನು ಬರೆದಿದ್ದೇವೆ. IGಯವರಿಗೆ ಪತ್ರಗಳನ್ನು ಬರೆದಿದ್ದೇವೆ. ಎಷ್ಟೇ ಪತ್ರಗಳನ್ನು ಬರೆದರೂ ಸಹ ಇವತ್ತಿನವರೆಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಎಷ್ಟೋ ಬಡ ಕುಟುಂಬಗಳು ಇವತ್ತು ಬೀದಿ ಪಾಲಾಗಿವೆ.

ಶ್ರೀ ಕೆ.ಜೆ. ಜಾರ್ಜ್:- ನಮಗೆ ಬಂದಿರುವ ಪತ್ರಗಳ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಗೈಡ್‌ಲೈನ್ಸ್ ಕೊಟ್ಟಿದ್ದೇವೆ. ಯಾವುದೇ ಕ್ರಮ ಕೈಗೊಳ್ಳದಿದ್ದರೆ ನೇರವಾಗಿ ನನ್ನ ಗಮನಕ್ಕೆ ತಂದರೆ ನಾನು action ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಮಂಜುನಾಥಗೌಡ:- ಎಷ್ಟೋ ಕಡೆ ಹಳ್ಳಿಗಳಲ್ಲಿ, ನಗರಗಳಲ್ಲಿಯೂ ಇಂಥ ಪ್ರಕರಣಗಳು ನಡೆಯತ್ತಿವೆ ಯಾವುದೇ ಕ್ರಮವನ್ನು ಪೊಲೀಸ್ ಇಲಾಖೆಯವರು ತೆಗೆದುಕೊಳ್ಳುತ್ತಿಲ್ಲ.

ಶ್ರೀ ಕೆ.ಜೆ. ಜಾರ್ಜ್:- ಎಲ್ಲಿ ಇಂಥ ಪ್ರಕರಣಗಳ ಬಗ್ಗೆ ಕ್ರಮ ಕೈಗೊಂಡಿಲ್ಲ, ಅದರ ಬಗ್ಗೆ ಮಾಹಿತಿ ಕೊಡಿ, ನಾನೇನು ನಮ್ಮ ಪೊಲೀಸಿನವರೆಲ್ಲಾ ಒಳ್ಳೆಯವರೆಂದು ಹೇಳುವುದಿಲ್ಲ. ಆದರೆ ಸಾಕಷ್ಟು ಜನ ಒಳ್ಳೆಯವರು ಇದ್ದಾರೆ. ಎಲ್ಲರೂ ಕೆಟ್ಟವರು ಎಂದು ಇವತ್ತು ಹೇಳಬೇಡಿ. ಎಲ್ಲಿ ಕೆಟ್ಟವರಿದ್ದಾರೆ, ಎಲ್ಲಿ ನಡೆಯುತ್ತಿದೆ ಆ ಬಗ್ಗೆ ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತೆಗೆದುಕೊಂಡು ಬನ್ನಿ. ನಾನು ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ. ನಾನು ಎಸ್.ಪಿ.ಯವರಿಗೂ ಈ ಬಗ್ಗೆ ಹೇಳುತ್ತೇನೆ.

ಶ್ರೀ ಬಿ.ಆರ್. ಪಾಟೀಲ್:- ವಿಷಯ ಪ್ರಸ್ತಾಪವಾಗಿದೆ. ನಾವು ಬೆಂಗಳೂರಿನಲ್ಲಿ ಓಡಾಡಲೇಬೇಕು, ಏಕೆಂದರೆ ನಾವು ಹೊರಗಡೆಯಿಂದ

ಬಂದವರು. ಬೆಂಗಳೂರಿನಲ್ಲಿ ಒಂದು ಕ್ಲಬ್ ನಡೆಯುತ್ತಿರುವ ಬಗ್ಗೆ ಅಂದು ಪೊಲೀಸ್ ಕಮಿಷನರ್‌ಗೆ ಹೇಳಿದರೂ ಕೂಡ ಏನೂ ಆಗಲಿಲ್ಲ.

ಶ್ರೀ ಕೆ.ಜೆ. ಜಾರ್ಜ್:– ದಯವಿಟ್ಟು specific ಆಗಿ ಎಲ್ಲಿ ನಡೆಯುತ್ತಿದೆ ಎಂದು ಹೇಳಿದರೆ ಅನುಕೂಲವಾಗುತ್ತದೆ. ನೀವು ಎಲ್ಲಾ ಕಡೆ ನಡೆಯುತ್ತಿದೆ. ಎಂದು ಹೇಳಿದರೆ ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಯಾವುದಾದರೂ ಒಂದು ವಿಚಾರ ಇಂಥ area ದಲ್ಲಿ ನಡೆಯುತ್ತಿದೆ ಎಂದು ಹೇಳಿದರೆ ಅವರ ವಿರುದ್ಧ action ತೆಗೆದುಕೊಳ್ಳಬಹುದು. ಆದ್ದರಿಂದ specific ಆಗಿ ಹೇಳಿ.

ಶ್ರೀ ಬಿ.ಆರ್. ಪಾಟೀಲ್:– ನಿಮ್ಮ ಸರ್ಕಾರವಿರಲಿಲ್ಲ. ಆಗ ಬೇರೆ ಸರ್ಕಾರವಿತ್ತು. ಆಗಲೂ ಏನೂ ಆಗಲಿಲ್ಲ.

ಶ್ರೀ ಕೆ.ಜೆ. ಜಾರ್ಜ್:– ಬೇರೆ ಸರ್ಕಾರ ಇದ್ದಾಗ ನಡೆದರೆ ನಾವೇನು ಮಾಡಲಿಕ್ಕಾಗುತ್ತದೆ?

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ:– ಚಿತ್ರದುರ್ಗದಲ್ಲಿ ಶಿಕ್ಷಕರ ದಿನಾಚರಣೆ ನಡೆಯುತ್ತಿತ್ತು. ಜಿಲ್ಲಾಧಿಕಾರಿಗಳು, ಪೊಲೀಸಿನವರು, ಅಧಿಕಾರಿಗಳು ಎಲ್ಲರೂ ಇದ್ದ ಸಮಯದಲ್ಲಿ ಆ ಭಾಷಣದಲ್ಲಿ ಸಾಕಷ್ಟು comment ಮಾತನಾಡಿದ್ದೇವೆ, ನಗರದಲ್ಲಿ ಕ್ಲಬ್‌ಗಳು ತಲೆ ಎತ್ತಿವೆ. ಅದರ ಬಗ್ಗೆ ಸಾಕಷ್ಟು ಪತ್ರಗಳು ಬಂದಿದ್ದವು. ಆ ರೀತಿ ನಾವು ಭಾಷಣದಲ್ಲಿ comments ಮಾಡಿದ ಮೇಲೆ 15 ದಿವಸಗಳು ನಿಂತಿದ್ದವು. ತಕ್ಷಣ ಅಂದೇ ನಿಂತುಹೋಯಿತು. ಈಗ ಮತ್ತೆ clubs ಪ್ರಾರಂಭವಾಗಿವೆ. ಇದರ ಬಗ್ಗೆ ಮಾಹಿತಿ ಕೊಡುತ್ತೇವೆ, ಅದರ ಬಗ್ಗೆ action ತೆಗೆದುಕೊಳ್ಳಬೇಕು ಎಂದು ತಮ್ಮ ಮೂಲಕ ಸಚಿವರ ಗಮನಕ್ಕೆ ತರಬಯಸುತ್ತೇವೆ.

ಉಪಾಧ್ಯಕ್ಷರು:– ನೀವು ಮಂತ್ರಿಗಳ ಗಮನಕ್ಕೆ ತನ್ನಿ.

ಶ್ರೀ ಕೆ.ಜೆ. ಜಾರ್ಜ್:– ಈಗ ಸಾಕಷ್ಟು ಮಾನ್ಯ ಸದಸ್ಯರುಗಳು ಈ ವಿಚಾರದಲ್ಲಿ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ನಾನು ಇವತ್ತು ಮತ್ತೆ ನಮ್ಮ ಪೊಲೀಸ್ ಇಲಾಖೆಯವರಿಗೆ, ನಮ್ಮ DGP, ADGP, Intelligence

ಇವರಿಗೆಲ್ಲಾ ಹೇಳಿ ತಕ್ಷಣ ಕಠಿಣ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶವನ್ನು ಕೊಡುತ್ತೇನೆ.

ಉಪಾಧ್ಯಕ್ಷರು:- ಸವದಿಯವರೇ ಮುಗಿಸಿ, ಬಹಳ ಹೊತ್ತಾಯಿತು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಮಧ್ಯದಲ್ಲಿ ಸದಸ್ಯರು ಅರ್ಧ ಸಮಯವನ್ನು ತೆಗೆದುಕೊಂಡರು.

ಉಪಾಧ್ಯಕ್ಷರು:- ನೀವು yield ಆಗಿದ್ದೀರಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಏನು ಮಾಡಲಿಕ್ಕಾಗುತ್ತದೆ? ಅನಿವಾರ್ಯವಾಗುತ್ತದೆ.

ಉಪಾಧ್ಯಕ್ಷರು:- ಮುಗಿಸಿ ಬೇಗ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಸಾರಿಗೆ ಸಚಿವರು ಇಲ್ಲ, ನಾನು ಅವರಿಗೆ ವಿಶೇಷವಾಗಿ ಒಂದು ಅಭಿನಂದನೆಯನ್ನು ಹೇಳಬೇಕೆಂಬ ಉದ್ದೇಶವಷ್ಟೆ. ಬಹುಶಃ ಯಾವುದೇ ಸಚಿವರು ಉತ್ತರ ಕರ್ನಾಟಕದಲ್ಲಿ ನಮ್ಮ ಹುಬ್ಬಳ್ಳಿಯಲ್ಲಿ KSRTC, ವಾಯುವ್ಯ ಸಾರಿಗೆ ಇವತ್ತು ಲಾಭದಲ್ಲಿ ಬರಲಿಕ್ಕೆ ಪ್ರಾರಂಭವಾಗಿದೆ, ಏಕೆಂದರೆ ಅವರ ಇಚ್ಛಾಶಕ್ತಿ. ವಿರೋಧ ಪಕ್ಷದ ಶಾಸಕನಾಗಿ ನಾನು ಎಲ್ಲವನ್ನು ತೆಗಳಬೇಕೆಂದು ಇಲ್ಲ, ಕೆಲವೊಂದು ಒಳ್ಳೆಯ ಕೆಲಸವನ್ನು ಮಾಡಿರುವುದನ್ನು ನಾವು ಹೇಳಬೇಕಾಗುತ್ತದೆ. ಸಾರಿಗೆ ಸಚಿವರು ಆ ಭಾಗದಲ್ಲಿರುವಂಥ ಖಾಸಗಿ ವಾನಗಳ permitಗಳನ್ನು ರದ್ದು ಮಾಡಿ ಅವರ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಿ ಒಳ್ಳೆಯ ಹುಬ್ಬಳ್ಳಿ, ಬೆಳಗಾಂ, ಬೆಳಗಾಂ ನಿಂದ ಬಿಜಾಪುರಕ್ಕೆ ಖಾಸಗಿ ವಾಹನಗಳು ಓಡಾಡುತ್ತಿತ್ತು. ಆ ವಾಹನಗಳನ್ನು ಸಂಪೂರ್ಣವಾಗಿ ನಿಲ್ಲಿಸಿ, ರಾಜ್ಯ ಸಾರಿಗೆ ಬಸ್ಸುಗಳಲ್ಲಿ ಹೆಚ್ಚು ಜನ ಓಡಾಡುವುದಕ್ಕೆ ಒಂದು ಪ್ರಯೋಗವನ್ನು ಮಾಡಿರುವುದು ಬಹುಶಃ ನಮ್ಮ ಭಾಗದಲ್ಲಿ NWKRTC ಇವತ್ತು ಲಾಭದಾಯಕವಾಗಿ ಬರುವುದಕ್ಕೆ ಅದೊಂದು ಪೂರಕವಾದಂತಹ ಕ್ರಮವಾಗಿದೆ. ಅದಕ್ಕೆ ನಾನು

ಮಾನ್ಯ ಸಾರಿಗೆ ಸಚಿವರಿಗೆ ವಿಶೇಷವಾದ ಅಭಿನಂದನೆಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಅದರ ಜೊತೆಗೆ ಮಾನ್ಯ ಸಾರಿಗೆ ಸಚಿವರಲ್ಲಿ ನನ್ನ ಎರಡು ಬೇಡಿಕೆಗಳಿವೆ. ಅಥಣಿ ತಾಲ್ಲೂಕಿನಲ್ಲಿ ಸುಮಾರು ಐದು ಸಕ್ಕರೆ ಕಾರ್ಖಾನೆಗಳಿವೆ. ಅದು ಅತಿ ಹೆಚ್ಚು ವಾಹನಗಳು ಇರುವಂತಹ ತಾಲ್ಲೂಕು. ಅಲ್ಲಿ ಒಂದು RTO office ಅನ್ನು ಪ್ರಾರಂಭ ಮಾಡಿದರೆ ಅಲ್ಲಿರತಕ್ಕಂತ ಜನರಿಗೆ ಬಹಳ ಉಪಯುಕ್ತವಾಗುತ್ತದೆ. ಏಕೆಂದರೆ ನಾವು ಒಂದು driving license ತೆಗೆದುಕೊಳ್ಳಬೇಕಾದರೆ 75 ಕಿ.ಮೀ. ದೂರದ ಚಿಕ್ಕೋಡಿಗೆ ಹೋಗಬೇಕು. ಅಥಣಿಯೊಳಗೆ ಒಂದು ಹೆಚ್ಚುವರಿಯಾಗಿ Assistant Regional Transport officer ಅವರ ಕಛೇರಿ ಸ್ಥಾಪನೆ ಮಾಡಿದರೆ ಅನುಕೂಲವಾಗುತ್ತದೆ ಮತ್ತು ಆ ಭಾಗದಲ್ಲಿರುವಂತಹ ಎರಡು ತಾಲ್ಲೂಕಿನ ಜನರಿಗೆ ಮಧ್ಯದಲ್ಲಿ ಬರುವಂತಹ ಒಂದು ಕೇಂದ್ರವಾಗುತ್ತದೆ. ಹಾಗಾಗಿ ಅಲ್ಲಿ ವಿಶೇಷವಾದಂತಹ ಒಂದು ಕಛೇರಿಯನ್ನು ಪ್ರಾರಂಭ ಮಾಡಬೇಕೆನ್ನುವುದು ಒಂದು ಬೇಡಿಕೆ. ಇನ್ನು ಎರಡನೆಯದಾಗಿ; ಇಲ್ಲಿ ಮಾನ್ಯ ಲೋಕೋಪಯೋಗಿ ಮಂತ್ರಿಯವರು ಇಲ್ಲ. ನಾವು ತಮಗೆ ತಿಳಿಸುವುದೇನೆಂದರೆ ನಮ್ಮ ಅಥಣಿ ಪಟ್ಟಣದಲ್ಲಿ ವಾರಕ್ಕೆ ಒಂದಾದರೂ accident ಆಗುತ್ತದೆ. ಏಕೆಂದರೆ ಅಷ್ಟೊಂದು ಜನದಟ್ಟಣೆ ಇದೆ. ಅದಕ್ಕೆ ಕಾರಣವೇನೆಂದರೆ ಅಲ್ಲಿ ಐದು ಸಕ್ಕರೆ ಕಾರ್ಖಾನೆಗಳಿರುವುದರಿಂದ ಸಾವಿರಾರು ವಾಹನಗಳು ಮುಖ್ಯರಸ್ತೆಯಲ್ಲಿ ಓಡಾಡುವ ಸಂದರ್ಭದಲ್ಲಿ ಜನ ಆ ರಸ್ತೆಯಲ್ಲಿ ದಾಟಿ ಹೋಗುವುದಕ್ಕೆ ಬಹಳಷ್ಟು ಸಮಸ್ಯೆಯಾಗಿದೆ. ಅದಕ್ಕೆ ದಯಮಾಡಿ ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ ಹೊರವಲಯದ ಒಂದು ರಸ್ತೆಯನ್ನು ತಾವು ಮಾಡಿ ಕೊಟ್ಟಿದ್ದಾದರೆ, ಆ ಭಾಗದ ಜನದಟ್ಟಣೆಯಿರುವ ಭಾಗದಲ್ಲಿ ಅಪಘಾತವನ್ನು ತಪ್ಪಿಸುವುದಕ್ಕೆ ಆಗುತ್ತದೆ ಮತ್ತು ಕಬ್ಬು ಸಾಗಣೆ ಮಾಡುವಂತಹ ವಾಹನಗಳು ಹೊರಗೆ ಹೋಗುವುದಕ್ಕೆ ಒಂದು ಬೈಪಾಸ್ ರಸ್ತೆ ಮಾಡಿಕೊಟ್ಟರೆ, ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಅಧಿವೇಶನ

ನಾಳೆ ಕೊನೆಯ ದಿವಸವಿರುವುದರಿಂದ ಈಗ ಸಮಯದ ಅಭಾವವಿರುವುದು ನನಗೆ ಅರ್ಥವಾಗುತ್ತದೆ, ನಾನು ಇನ್ನೂ ಸಾಕಷ್ಟು ವಿಷಯಗಳನ್ನು ಮಾತನಾಡಬೇಕೆಂಬ ಅಪೇಕ್ಷೆ ಇದ್ದರೂ ಕೂಡ ನಿಮ್ಮ ಮನಸ್ಸಿಗೆ ಬೇಸರ ಮಾಡಿ ಮಾತನಾಡಬಾರದೆಂದು ತಿಳಿದುಕೊಂಡು 2014–15 ನೇ ಸಾಲಿನ ಬಜೆಟ್ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ):– ಮಾನ್ಯ ಉಪಾಧ್ಯಕ್ಷರೆ, 2014–15ನೇ ಸಾಲಿನ ಆಯವ್ಯಯಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ನಾವು ಗ್ರಾಮೀಣ ಪ್ರದೇಶದಿಂದ ವಿಶೇಷವಾಗಿ ಬರಗಾಲದ ನೀರು ಬರದಿರುವಂತಹ ಪ್ರದೇಶದಿಂದ ಬಂದಿದ್ದೇವೆ. ನಮ್ಮ ಬಯಲು ಸೀಮೆ ಜನ ನೀರು ನೋಡಿರುವುದಿಲ್ಲ. ಅಲ್ಲಿ ನೀರಾವರಿ ಇರುವುದಿಲ್ಲ. ಹಾಗಾಗಿ ಬೆಳೆಯನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಅಲ್ಲಿ ನಾಡೂ ಕೂಡ ಹಚ್ಚ ಹಸಿರಾಗಿರುವುದಿಲ್ಲ. ನಮ್ಮ ಜನ ಆ ಪ್ರದೇಶಕ್ಕೆ ಹೋದರೆ ಈ ನೀರು ನಮಗೆ ಸಿಕ್ಕರೆ ನಾವು ಹೇಗೆ ಬೆಳೆ ಬೆಳೆಯಬಹುದು, ಇಂತಹ ಚೆನ್ನಾಗಿರುವಂತಹ ನೀರು ಸಿಕ್ಕರೆ ನಾವು ಕುಡಿದು ಹೇಗೆ ಆರೋಗ್ಯವಾಗಿ ಇರಬಹುದು ಎಂದು ಅಂದುಕೊಳ್ಳುತ್ತಾರೆ. ಈಗ ವಾತಾವರಣ ವಿಪರೀತ ಅಸಮತೋಲನವಾಗಿಬಿಟ್ಟಿದೆ. ನಾಡಿನ ಮನುಷ್ಯ ಕಾಡಿನ ಪ್ರಾಣಿ ಜೊತೆಗೆ ಸಂಘರ್ಷ ಮಾಡುತ್ತಿದ್ದಾನೆ. ಇದರಿಂದ ಪರಿಸರದ ಅಸಮತೋಲನ ಆಗುತ್ತಿದೆ. ಎಲ್ಲೋ ಒಂದು ಕಡೆ ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅನ್ಯಾಯವಾಗಿದೆ ಎನ್ನುವ ಮಾತು ಕೇಳಿ ಬರುತ್ತಿದೆ.

(ಈ ಹಂತದಲ್ಲಿ ಮಾನ್ಯ ಬಿ.ಆರ್. ಯಾವಗಲ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು.)

ನಮ್ಮ ಜನಕ್ಕೆ ಉದ್ಯೋಗ, ನೀರು, ಕಾರ್ಖಾನೆ, ಕೈಗಾರಿಕೆ, ವಿದ್ಯೆ, ಮತ್ತು ಆರೋಗ್ಯ ಇವೆಲ್ಲ ಬಹಳ ಮುಖ್ಯ. ಇಂತಹ ವಿಚಾರಗಳ ಬಗ್ಗೆ ಈ ಸದನ ಇಲ್ಲಿರುವಂತಹ ಎಲ್ಲಾ ಪಕ್ಷದ ಶಾಸಕರು ಸೇರಿ ನೀರಿನ ಬಗ್ಗೆ ಮುಂದಿನ ದಿವಸಗಳಲ್ಲಿ ಒಂದು ಒಗ್ಗಟ್ಟಿನ ಮಂತ್ರವನ್ನು ಜಪಿಸಬೇಕಾಗುತ್ತದೆ. ಈ ಸಮಾಜಕ್ಕೆ ಮತ್ತು ದೇಶಕ್ಕೆ ಎಲ್ಲರಿಗೂ ನೀರಿನ ಹಕ್ಕುದಾರಿಕೆ ಬೇಕಾಗುತ್ತದೆ. ಅದರಲ್ಲೂ ಆರೋಗ್ಯಕರವಾದಂತಹ ನೀರು ಬೇಕಾಗುತ್ತದೆ. ಕೆಲವು ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿಗೋಸ್ಕರ 12 ಅಥವಾ 1 ಗಂಟೆ ಕಾಲ ಕೊಡ ಹಿಡಿದುಕೊಂಡು ಕಾಯುತ್ತಿರುತ್ತಾರೆ. ಕೆಲವು ಕಡೆ ನಾವು ದುಡ್ಡು ಕೊಡುತ್ತೇವೆ ಕುಡಿಯುವುದಕ್ಕೆ ಆರೋಗ್ಯಕರವಾದ ನೀರು ಕೊಡಿ ಎಂದು ಕೇಳುತ್ತಾರೆ. ಆದರೆ ಅಲ್ಲಿ ನೀರು ಸಿಗುತ್ತಿಲ್ಲ. ಜನರಿಗೆ ಜಾನುವಾರುಗಳನ್ನು ಸಾಕುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ಅವುಗಳನ್ನು ಮಾರಿ ಬಿಡುತ್ತಾರೆ. ಕೆಲವು ಜನ ನಮಗೆ ಏನೂ ಸಿಗುವುದಿಲ್ಲವೆಂದು ವಲಸೆ ಹೋಗಿಬಿಡುತ್ತಾರೆ. ಈ ರೀತಿ ಪರಿಸ್ಥಿತಿ ಇರಬೇಕಾದರೆ ನೀರು ಮತ್ತು ನೀರಾವರಿ ಬಗ್ಗೆ ಸಮಗ್ರವಾಗಿ ಚಿಂತನೆಯನ್ನು ಮಾಡಿ ಒಂದು ಪಾಲಿಸಿ ಮಾಡಬೇಕಾಗುತ್ತದೆ. ಈಗಾಗಲೇ ಅಧಿಕಾರಿಗಳು ಸಾಕಷ್ಟು ಯೋಜನೆಗಳನ್ನು ಮಾಡಿದ್ದಾರೆ. Major Irrigation and Minor Irrigation Departments, ಜಿಲ್ಲಾ ಪಂಚಾಯತ್ Department ಇವೆ, ಹಲವಾರು ಇಲಾಖೆಗಳು ಬರುತ್ತಿವೆ. ಹಲವಾರು ಇಲಾಖೆಗಳು ಸೇರಿ coordinate ಮಾಡಿದರೆ ನಮಗೆ ಕೊಡತಕ್ಕಂಥ ಹಣ ನಿಜವಾದ ಪ್ರದೇಶಕ್ಕೆ, ನಿಜವಾದ ವ್ಯಕ್ತಿಗೆ ಹೋಗತಕ್ಕಂಥ ಕೆಲಸವಾಗಬೇಕು. ಈ ರೀತಿ ಆಡಳಿತದ ವ್ಯತ್ಯಾಸದಿಂದ ನೀರಾವರಿ ಆಗದೆ, ನಮ್ಮ ಪ್ರದೇಶಕ್ಕೆ ನೀರು ಬರುವುದಿಲ್ಲ. ನಾವು 69ರ ನಿಯಮದಡಿಯಲ್ಲಿ 15 ಜನ ಶಾಸಕರು ಈ ವಿಷಯದಲ್ಲಿ ಚರ್ಚೆಯಾಗಬೇಕೆಂದು ಕೊಟ್ಟಿದ್ದೇವೆ. ಅದರಲ್ಲಿ ವಿಶೇಷವಾಗಿ ಪಾವಗಡದಲ್ಲಿ ಕುಡಿಯುವ ನೀರು ಇಲ್ಲವೆನ್ನುವ ಬಗ್ಗೆ ಹೈಕೋರ್ಟ್‌ನಲ್ಲಿ ಪ್ರಸ್ತಾಪವಾಗಿದೆ. ಮೊಳಕಾಲ್ಮೂರು, ಚಳ್ಳಕೆರೆ, ಜಗಳೂರು, ಪಾವಗಡ ಸೇರಿದಂತೆ ಮಧುಗಿರಿ,

ಕೊರಟಗೆರೆ, ಈ ರೀತಿ ಹದಿನೆಂಟು ಪ್ರದೇಶಗಳಲ್ಲಿ ನೀರಿನ ಸಮಸ್ಯೆಯಿದ್ದು, ಮಾನ್ಯ ಶಾಸಕರು ಆಗಿಂದಾಗ್ಗೆ ಬಯಲು ಪ್ರದೇಶದ ಆಡಳಿತದ ಬಗ್ಗೆ ಮಾತನಾಡುತ್ತಿದ್ದು, ಅಲ್ಲಿ ಕುಡಿಯುವ ನೀರಿನ ಬಗ್ಗೆ ಮೊದಲನೆಯದಾಗಿ ಯೋಚನೆ ಮಾಡಬೇಕಾಗುತ್ತದೆ. ಈಗ ನಮಗೆ ಶುದ್ಧವಾದ ನೀರು ಸಿಗುತ್ತಿಲ್ಲ. ಬೋರ್‌ವೆಲ್ ಕೊರೆಯುವುದಕ್ಕೆ ಹೋದರೆ ನೀರು ಬಹಳ ಆಳಕ್ಕೆ ಹೋಗಿದೆ. ಶುದ್ಧವಾದ ಮತ್ತು ಆರೋಗ್ಯಕರವಾದ ನೀರು ಕೊಡುವುದಕ್ಕೆ ವಿಶೇಷವಾಗಿ ಯಾವ ರೀತಿಯ ಕಾರ್ಯಕ್ರಮವನ್ನು ಹಾಕಿದ್ದೀರಿ? I am talking about drinking water, which is essential and it is a fundamental right. ಎಲ್ಲಿ ಕುಡಿಯುವುದಕ್ಕೆ ನೀರು ಇಲ್ಲ, ಇದರ ಬಗ್ಗೆ ಒಂದು mechanism ಮಾಡಬೇಕು. ನದಿಗಳಲ್ಲಿ ನೀರು ಏನಿದೆ, ಅದು ಹರಿದು ಹೋಗಿ ಸಮುದ್ರವನ್ನು ಸೇರುತ್ತದೆ. ಮಳೆಗಾಲದಲ್ಲಿ ಯಥೇಚ್ಛವಾಗಿ ಮಳೆ ಬರುತ್ತದೆ. ಮಳೆ ಬರದಿದ್ದರೆ ಬರಗಾಲವಾಗುತ್ತದೆ. ಆ ನೀರನ್ನು ನಾವು ಹಿಡಿದಿಟ್ಟುಕೊಂಡು ಶೇಖರಣೆ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಯೋಜನೆಗಳನ್ನು ಹಾಕಬೇಕಾಗುತ್ತದೆ. ಆ ನೀರು ಸಮರ್ಪಕ ರೀತಿಯಲ್ಲಿ ವಿತರಣೆಯಾಗಬೇಕಾಗುತ್ತದೆ. ಹಾಗಾಗಿ ನಮ್ಮ ನೀರಾವರಿ ಯೋಜನೆಗಳು ಮತ್ತು ಚಿಂತನೆಗಳು ಸಮರ್ಪಕವಾಗಿ- ಆಗಲಿಲ್ಲ. ನಮ್ಮ ಸರ್ಕಾರ 5,000 ಕೋಟಿ ರೂಪಾಯಿಯನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೇವೆ. ಇದರಲ್ಲಿ ಕುಡಿಯುವ ನೀರಿಗೆ ಆದ್ಯತೆ ಏನು? ಇದರಲ್ಲಿ ಕೆರೆಗಳನ್ನು ತುಂಬಿಸುವುದಕ್ಕೆ ಆದ್ಯತೆ ಏನು? ನೀರಿನ ಜಲಾಶಯವನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೆ ಏನು ಆದ್ಯತೆ? ಬರಗಾಲ ಪೀಡಿತ ಪ್ರದೇಶಕ್ಕೆ ಮತ್ತು ಬಯಲು ಸೀಮೆಗೆ ಯಾವ ಪ್ರಮಾಣದಲ್ಲಿ ನಾವು ಯೋಜನೆಯನ್ನು ಹಾಕಿಕೊಂಡಿದ್ದೇವೆ? ಯಾವ ಪ್ರಮಾಣದಲ್ಲಿ ನೀರು ಕೊಡುವುದಕ್ಕೆ ಆಗುತ್ತದೆ? ನಾವು ಜನರಿಗೆ ಕುಡಿಯುವುದಕ್ಕೆ ಆರೋಗ್ಯಕರವಾದ ನೀರು ಕೊಡದಿದ್ದರೆ ಕ್ಷಮಿಸುತ್ತಾರೆಯೇ? ಕುಡಿಯುವ ನೀರನ್ನು ಜನ, ಜಾನುವಾರು ಮತ್ತು ಸಕಲ ಕೋಟಿ

ಜೀವಾಣುಗಳಿಗೆ ಕೊಡದಿದ್ದರೆ ನಾವು ಯಾವ ಪರಿಸ್ಥಿತಿಯಲ್ಲಿದ್ದೇವೆಂದು ಯೋಚನೆ ಮಾಡಬೇಕು. ಅದಕ್ಕೋಸ್ಕರ ಮುಂದಿನ ದಿವಸಗಳಲ್ಲಿ major and minor irrigation, ಜಿಲ್ಲಾ ಪಂಚಾಯತ್ ಮೂರು ಇಲಾಖೆಗಳು ಸೇರಿ ಕುಡಿಯುವ ನೀರಿನ ಬಗ್ಗೆ ಒಂದು ಯೋಜನೆಯನ್ನು ಮಾಡಬೇಕು. All the departments should coordinate regarding dringking, protected and healthy water. ಎಲ್ಲಿ ಕಲ್ಮಷವಾದ ನೀರಿದೆ, ಅಲ್ಲಿಗೆ war-footingನಲ್ಲಿ ತಾವು ನೀರನ್ನು ಒದಗಿಸುವುದಕ್ಕೆ ಕಾರ್ಯಕ್ರಮವನ್ನು ಮಾಡುವುದಕ್ಕೆ ಯೋಜನೆಯನ್ನು ಹಾಕಬೇಕು. ಅದಕ್ಕೆ ನೀವು relaxation ಕೊಡಬೇಕು ಮತ್ತು ಅದಕ್ಕೆ administrative sanction ಕೊಡಬೇಕು. ನಮ್ಮ ಭಾಗ ತುಂಗಭದ್ರಾ ಅಚ್ಚುಕಟ್ಟಿನಲ್ಲಿ ಬರತಕ್ಕಂಥ ಸುಮಾರು ಪ್ರದೇಶಗಳು ಬಯಲುಸೀಮೆಗೆ ಬರುತ್ತವೆ. ನಮ್ಮ ನೀರು ಸಮುದ್ರಕ್ಕೆ ಹಾಗೂ ಬೇರೆ ರಾಜ್ಯಕ್ಕೆ ಹೋಗುತ್ತದೆ. ನನ್ನ ಕ್ಷೇತ್ರದ ಒಂದು ಕಿ.ಮೀ. ನದಿ ಹರಿಯುತ್ತಿದೆ. ಆದರೆ ಒಂದು ಕಿ.ಮೀ. ದೂರದಲ್ಲಿರುವಂತಹ ಪ್ರದೇಶಕ್ಕೆ ಕುಡಿಯುವ ನೀರಿಲ್ಲ ಮತ್ತು ಕೆರೆಗಳಿಗೆ ನೀರಿಲ್ಲ, ನೀರಾವರಿ ಇಲ್ಲ. ಎಷ್ಟು ದಿನ ಈ ರೀತಿ ತಾರತಮ್ಯವಾಗುತ್ತಿದೆ. ಜನ ಹೇಳುತ್ತಾರೆ, ನೀವು ಪ್ರತಿನಿಧಿಗಳಾಗಿ ಕೆಲವೇ ಜನ ಮಾತನಾಡುತ್ತಾರೆ, ಕೆಲವೇ ಜನ ಕಬಳಿಸುತ್ತಾರೆ, ಕೆಲವೇ ಜನ ಅದನ್ನು ಸರಿ ಮಾಡುತ್ತಾರೆ ಕಾವೇರಿ ಬಗ್ಗೆ ನಾಲ್ಕು ಜಿಲ್ಲೆಯವರೇ ಸೌಲಭ್ಯವನ್ನು ತೆಗೆದುಕೊಳ್ಳುತ್ತಾರೆ. ಕೃಷ್ಣಾ ಕಣಿವೆಯಲ್ಲಿರುವವರೇ ಅದರ ಸೌಲಭ್ಯವನ್ನು ತೆಗೆದುಕೊಳ್ಳುತ್ತಾರೆ. ಆದರೆ ನಾವೇನು ಬೇರೆ ಏನೂ ಕೇಳುತ್ತಿಲ್ಲ, ಪ್ರಾಥಮಿಕವಾಗಿ ನಮಗೆ ಕುಡಿಯವ ನೀರನ್ನು ಕೊಡಿ. You give us drinking and protected water. ನಮ್ಮ ಕಡೆ ಊರೂರು ಕೂಲಿಗೋಸ್ಕರ ಮನೆ ಖಾಲಿ ಮಾಡಿಕೊಂಡು ಹೋಗಿಬಿಟ್ಟಿದ್ದಾರೆ. ನಾವೆಲ್ಲ ಕೂಲಿಗೋಸ್ಕರ ಮನೆಯವರನ್ನು, ಮಕ್ಕಳನ್ನು ಬಿಟ್ಟು, senior citizens, ಅಲ್ಲಿಯೇ ಇರುತ್ತಾರೆ, ಅವರನ್ನು ಯಾರೂ ನೋಡಿಕೊಳ್ಳುವುದಿಲ್ಲ. ಊರೆಲ್ಲಾ ಖಾಲಿಯಾಗಿದೆ. ದಯವಿಟ್ಟು ಈ ನಾಲ್ಕು ಇಲಾಖೆಯವರು

ಕುಡಿಯುವ ನೀರಿನ ಬಗ್ಗೆ ಯೋಚನೆ ಮಾಡಬೇಕು. ಕಾನೂನನ್ನು ಯಾವ ರೀತಿ ಸಡಲೀಕರಣಗೊಳಿಸಬೇಕು? ಮಾತೆತ್ತಿದರೆ ಟೆಂಡರ್ ಎಂದು ಹೇಳುತ್ತಾರೆ, administrative sanction ಎಂದು ಹೇಳುತ್ತಾರೆ. You please relax all the rules prescribed. ಕುಡಿಯುವ ನೀರಿನ ಬಗ್ಗೆ ನೀವು ರೂಲ್ಸ್ relax ಮಾಡಬೇಕೆನ್ನುವ ಒತ್ತಾಯವನ್ನು ಹಾಗೂ ವಿನಂತಿಯನ್ನು ಮಾಡುತ್ತೇನೆ. ಎರಡನೆಯದಾಗಿ ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆ ಬಗ್ಗೆ ಹೇಳಬೇಕೆಂದರೆ, ಒಂದೊಂದು ಕೆರೆಗೆ ನೀರನ್ನು ತುಂಬಿಸಿದರೆ, ಹಿಂದೆ ಯಾವ ರೀತಿ ಕೆರೆ-ಕಟ್ಟೆ ನೀರು ತುಂಬುತ್ತಿತ್ತೆಂದರೆ ನಮ್ಮಲ್ಲಿ ಹಿಂದೆ ಜಗಳೂರು ಇಮಾಮ್ ಸಾಹೆಬರೆಂದು ಮಹಾರಾಜರ ಕಾಲದಲ್ಲಿದ್ದರು. ಆ ಕಾಲದಲ್ಲಿ ಒಂದು ಕೆರೆಗೆ ನೀರು ಬಂತೆಂದರೆ ಹತ್ತು ಕೆರೆಗೆ ನೀರು ಹೋಗುತ್ತಿತ್ತು. ಅಷ್ಟು technical ಆಗಿ ಮುಂದಾಲೋಚನೆಯಿಂದ ಕೆರೆಗಳನ್ನು ಕಟ್ಟಿದ್ದಾರೆ. ನಾವು 10 ಕಿ.ಮೀ.– 20 ಕಿ.ಮೀ. ದೂರದಲ್ಲಿದ್ದೇವೆ ನೀವು ನೀರನ್ನ ಕೊಡಿ, ಬೇರೆ ದೇಶಗಳಲ್ಲಿ ಸಾವಿರಾರು ಕಿ.ಮೀ. ದೂರದಲ್ಲಿರುವ ಸಮುದ್ರದಿಂದ ನೀರನ್ನು ತರುತ್ತಿದ್ದಾರೆಂಬ ಮಾತನ್ನು ಕೇಳಿದ್ದೇನೆ. ಇಷ್ಟು technology advance ಆಗಿದೆ. ಆದರೂ ಕೂಡ ನಮ್ಮಲ್ಲಿ ಅಷ್ಟು ಯೋಚನೆಯಿಲ್ಲ. ನೀವು technical experts, ಇಂಜಿನಿಯರ್ಸ್‌ಗಳನ್ನು ಕರೆದು please do this ಈ ಏರಿಯಾಗೆ ನೀರು ಹೋಗುವುದಕ್ಕೆ ಏನು ಮಾಡಬೇಕೆಂದು ಕೇಳುತ್ತೇವೆ. ಅವರು ನಾವು ಕೇಳಬೇಕೆಂದು ಹೇಳುತ್ತಾರೆ. ಅದರ ಬಗ್ಗೆ ಚಿಂತನೆಯೇ ಇಲ್ಲ. ಆಯವ್ಯಯ ಪುಸ್ತಕವನ್ನು ಬೈಬಲ್, ಕುರಾನ್ ಅಥವಾ ಭಗವದ್ಗೀತೆಯೆಂದು ನಾವು ತಿಳಿದುಕೊಂಡಿದ್ದು, ಇದರಡಿಯಲ್ಲೇ ನಾವು ಕೆಲಸ ಮಾಡಬೇಕಾಗುತ್ತದೆ. ನಾವು ಅಧಿಕಾರಿಗಳ ಬಳಿ ಹೋಗಿ 'Did you read this book of the budget?' ಎಂದು ಕೇಳಿದರೆ ಅದರ ಬಗ್ಗೆ ಅವರಿಗೆ ಏನೂ ಗೊತ್ತಿರುವುದಿಲ್ಲ. ಏನು ಹೊಸ ಯೋಜನೆಯಿದೆ, ಹೊಸ ಚಿಂತನೆ ಏನಿದೆ, ಏನು concession ಇದೆ, ಏನ ಹೊಸ ಹೊಸ ಕಾರ್ಯಕ್ರಮಗಳು ಕೊಟ್ಟಿದ್ದಾರೆಂಬ ಬಗ್ಗೆ ಗೊತ್ತಿರುವುದಿಲ್ಲ.

ಅಷ್ಟು lethargic ಆಗಿ ಇವತ್ತು administrative set up ಕುಳಿತಿದೆ. They will not bother about these things. ಅದಕ್ಕೋಸ್ಕರ ನಾನು ತಮ್ಮ ಮೂಲಕ ಹೇಳುವುದೇನೆಂದರೆ administration pull up ಮಾಡಬೇಕಾದರೆ department at the administration should read this book. ಈ ಕಾರ್ಯಕ್ರಮವನ್ನು ಓದಿದ ನಂತರ ಯಾವ ರೀತಿ ಜಾರಿಗೆ ತರಬೇಕು, ಯಾವ ಹಣವನ್ನು ಎಷ್ಟು ದಿವಸದಲ್ಲಿ ಖರ್ಚು ಮಾಡಬೇಕು, ನಮ್ಮ priority ಏನು? ನಾವು ಜಾಸ್ತಿ ಕೇಳುತ್ತಿಲ್ಲ. What is available? What is allocated? ಅದರೊಳಗೆ ನಾವು ಕೇಳುತ್ತಿದ್ದೇವೆ. ಅವರು ಈಗ ಬಿಡುಗಡೆಯಾದ ಹಣವನ್ನು ಮುಂದಿನ ವರ್ಷ ಖರ್ಚು ಮಾಡುವುದು. ಅವರು manipulate ಮಾಡುತ್ತಿರುತ್ತಾರೆ. ದಯವಿಟ್ಟು ಆ ರೀತಿ ಆಗದ ರೀತಿ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಆಡಳಿತ ವರ್ಗ ಕ್ರಮ ವಹಿಸಬೇಕು. ನೀರು ಮತ್ತು ನೀರಾವರಿ ಇದ್ದು, ಕೆರೆಗಳಿಗೆ ನೀರು ಬಂದರೆ agriculture economy ಗೆ ಬೇರೆ ಏನೂ ಬೇಕಾಗಿಲ್ಲ. Most of our priority is on all unproductive sectors, ಅನುತ್ಪಾದಕ ಯೋಜನೆಯೇನಿದೆ ಅದನ್ನು ದಯವಿಟ್ಟು ನಿಲ್ಲಿಸಬೇಕು. ಎಲ್ಲರೂ ಮನಸ್ಸು ಮಾಡಬೇಕು. ಯಾವುದು ಉತ್ಪತ್ತಿ ಆಗುವ production ಇದೆ ಅದಕ್ಕೆ ನಾವು priority ಕೊಡಬೇಕು. ಅದಕ್ಕೆ ಹಣ ಕೊಡಬೇಕು. ತಮಿಳುನಾಡು, ಗೋವಾ, ಮಹಾರಾಷ್ಟ್ರ, ಆಂಧ್ರ ಪ್ರದೇಶ ಹೀಗೆ ಎಲ್ಲಾ ರಾಜ್ಯಗಳ ಬಜೆಟ್ ನೋಡುತ್ತಿದ್ದೇವೆ. It is only slogans, ಕೊಡುತ್ತೇವೆ. ಓಲೈಸುವ ರೀತಿ ಆಗುವಂತಹದ್ದಲ್ಲ. ಆದರೆ ಒಂದು ಮಾತನ್ನು ನಾನು ಹೇಳಲೇಬೇಕಾಗುತ್ತದೆ, ಅದೇನೆಂದರೆ ಇದರಲ್ಲಿ ಸಮಾಜದ ಅಂತರಾಳದಲ್ಲಿರುವ ಸಾಮಾಜಿಕ ನ್ಯಾಯ ತುಂಬಿ ತುಳುಕುತ್ತಿದೆ. Thias budget is purely on social justice ಸಾಮಾಜಿಕ ನ್ಯಾಯ, ಸಮಪಾಲು, ಸಮಬಾಳನ್ನು ಕಾಣುತ್ತಿದ್ದೇವೆ. ತಾವು ಎಲ್ಲಾ ಇಲಾಖೆಯನ್ನು ನೋಡಿ ನಾವು ಒಂದು Act ಅನ್ನು ತಂದಿದ್ದೇವೆ. ದುರ್ಬಲರಿಗೆ ಹಣವನ್ನು ಯಾರು intentionally ಖರ್ಚು

ಮಾಡುವುದಿಲ್ಲವೋ ಅಂತಹವರಿಗೆ penal provision ಮಾಡಿದ್ದೇವೆ. ನೀವು ಇಷ್ಟು ವರ್ಷದಲ್ಲಿ ಖರ್ಚು ಮಾಡಬೇಕು ಇಲ್ಲವಾದರೆ ಆ ಹಣವನ್ನು ಮುಂದಿನ ವರ್ಷಕ್ಕೆ ತೆಗೆದುಕೊಂಡು ಹೋಗಬಹುದು. ಆದರೆ ಏಕೆ ಆಗಿಲ್ಲವೆಂದು reason ಕೊಡಬೇಕು. ಕಡ್ಡಾಯವಾಗಿ ಮಾಡಲಿಲ್ಲವೆಂದರೆ ಅದಕ್ಕೆ ಜೈಲಿಗೆ ಹಾಕುತ್ತೇವೆಂಬ ಮಾತನ್ನು ಕಾಂಗ್ರೆಸ್ ಪಕ್ಷದವರು ಎಂದರೆ ಈ ಸರ್ಕಾರ ಹೇಳಿದೆ. ಇದು ನಮ್ಮ ಸಾಧನೆ. This is our achievement. ನಮ್ಮ achievement ಏನೆಂದರೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಗ್ರಾಮೀಣ ಪ್ರದೇಶದಿಂದ ಬಂದಿರುವವರು. ಗ್ರಾಮೀಣ ಪ್ರದೇಶದ ಪರಿಸರವನ್ನು ತಿಳಿದಿರುವವರು. ಗ್ರಾಮೀಣ ಪ್ರದೇಶಗಳಲ್ಲಿ ಇವತ್ತಿನ ದುಃಖ-ದುಮ್ಮಾನಗಳೇನಿದೆ ಇವುಗಳ ಅನಿಸಿಕೆಯ ಕಾರ್ಯಕ್ರಮವನ್ನು ಹಾಕಿಕೊಂಡು manifesto ಮಾಡಿ ಬಂದಿದ್ದೇವೆ. 67 manifesto ಗಳನ್ನು implement ಮಾಡಿದ್ದೇವೆ. ಮೊದಲನೆಯದಾಗಿ ನಾವು ಬಡವನಿಗೆ ಹೊಟ್ಟೆ ತುಂಬಿಸುವ ದೃಷ್ಟಿಯಿಂದ ಅಕ್ಕಿ ಕೊಡುವಂತಹ ಕಾರ್ಯಕ್ರಮವನ್ನು ಮಾಡಿದ್ದೇವೆ. ನೀವು ಅಕ್ಕಿಯನ್ನು ಕೊಟ್ಟರೆ ನಮ್ಮ ಹೊಲಕ್ಕೆ ಯಾರೂ ಕೂಲಿಗೆ ಬರುವುದಿಲ್ಲವೆಂದು ಇದರ ಬಗ್ಗೆ ಸಾಕಷ್ಟು comments ಬರುತ್ತಿದೆ. ಹೊಲಕ್ಕೆ ಕೂಲಿಗೆ ಬರುವುದಿಲ್ಲವೆಂದು ಕಾರಣಕ್ಕೆ ನಾವು ಅಕ್ಕಿ ಕೊಡುವುದನ್ನು ನಿಲ್ಲಿಸಬೇಕೇ? ಬಡವರಿಗೆ ಶಕ್ತಿ ತುಂಬುವುದು ಬೇಡವೇ? ಬಡವರಿಗೆ ಸಾಲವನ್ನು ಮನ್ನಾ ಮಾಡಿದ್ದೀರೆಂದು ಹೇಳುತ್ತಾರೆ. ಸಾಲಮನ್ನಾವನ್ನು ಕೇಂದ್ರ ಸರ್ಕಾರದವರು ಮಾಡಿದ್ದಾರೆ, ಹಿಂದಿನ ಸರ್ಕಾರದವರು ಮಾಡಿದ್ದಾರೆ, ಈಗಿನ ಸರ್ಕಾರದವರು ಮಾಡಿದ್ದಾರೆ. ಆದರೆ ಯಾವ ಜನರಿಗೆ ನಾವು ಸಾಲ ಮನ್ನಾ ಮಾಡಿದ್ದೇವೆಂಬುದು ಬಹಳ ಮುಖ್ಯ. ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ ಸಾಲವನ್ನು ಮನ್ನಾ ಮಾಡಿರುವ ಇತಿಹಾಸ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವಾದ ಕಾಂಗ್ರೆಸ್ ಸರ್ಕಾರ. ಹಾಲಿನಲ್ಲಿ white revolution ಮಾಡಿದ್ದೇವೆ. ಹಾಲಿನ ಕ್ರಾಂತಿಯನ್ನು ನಾವು ಮಾಡಿದ್ದೇವೆ. That is also our

achievement. ನಾವು ಎರಡು ಬಾರಿ ಎರಡು ರೂಪಾಯಿಗಳನ್ನು ಕೊಟ್ಟಿದ್ದು, ಈ ಬಾರಿ ನಾಲ್ಕು ರೂಪಾಯಿಗಳನ್ನು ಕೊಟ್ಟಿದ್ದೇವೆ. This is also achievement. ಹಳ್ಳಿಯಲ್ಲಿ ವ್ಯಾಸಂಗ ಮಾಡುವ ಮಗ ಅಥವಾ ಹೆಣ್ಣು ಮಕ್ಕಳಿಗೆ ಓದುವುದಕ್ಕೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ Scholarship, building, hostel, ಊಟದ ವ್ಯವಸ್ಥೆ ಬಗ್ಗೆ ಎಲ್ಲಾ ಸವಿಸ್ತಾರವಾಗಿ ಹೇಳಿದ್ದೇವೆ. ಇದೊಂದೇ ಅಲ್ಲ. ಸಮಾಜದಲ್ಲಿರುವ unidentified communities ಏನಿದೆ microscopie community, ಮಾತನಾಡದಿರುವ ವರ್ಗಗಳಿವೆ, ಶಕ್ತಿ ಇಲ್ಲದಿರುವ ಜಾತಿಗಳಿವೆ. ಯಾರೂ.. ಗುರುತು ಹಿಡಿಯದಿರುವವರನ್ನೆಲ್ಲಾ ಗುರುತು ಮಾಡಿ ಅಕ್ಕಸಾಲಿಗ ಯಾರು, ಉಪ್ಪಾರ ಯಾರು, ಕುಂಬಾರ ಯಾರು, ಜೋಗಿ ಯಾರು, ಬುಡಬುಡಿಕೆ ಯಾರು ಎಂದು ಗುರುತಿಸಿ ಅವರಿಗೆ ಪ್ರತ್ಯೇಕವಾಗಿರುವ ಕಾರ್ಯಕ್ರಮಗಳನ್ನು ಹಾಕಿದ್ದೇವೆ. ಕೆಲವರು ಇದನ್ನು ಇವೆಲ್ಲಾ unproductive ಎಂದು ಹೇಳುತ್ತಾರೆ. We give for voice for voiceless. ನಾವು empowerment ಎನ್ನುವ ಕೆಲಸವನ್ನು ಈ ಬಜೆಟ್‌ನಲ್ಲಿ ಮಾಡಿದ್ದೇವೆ. ಲೋಕಾಯುಕ್ತದ ಬಗ್ಗೆ ನಿನ್ನೆ ಒಂದು ಚರ್ಚೆಗೆ ಕರೆದಿದ್ದರು. ಈ ಚರ್ಚೆ ಬಂದಾಗ ಕರ್ನಾಟಕ ಲೋಕಾಯುಕ್ತ is very strong, very efficient ಎಂದು ಚರ್ಚೆಗೆ ಬಂತು. ಇದನ್ನು ನಾನೂ ಕೂಡ ಒಪ್ಪುತ್ತೇನೆ. ಕರ್ನಾಟಕ ಲೋಕಾಯುಕ್ತ is very strong. ತರಾತುರಿಯಲ್ಲಿ amendment ಮಾಡುತ್ತಿದ್ದಾರೆ, ಇದರಲ್ಲಿ IAS officers ಕೂಡ ಇದ್ದಾರೆ. IAS officers ಗಂಜಿ ಕೇಂದ್ರ ಮಾಡಿಕೊಂಡಿದ್ದಾರೆಂಬ ಮಾತಿನ ಬಗ್ಗೆ ಚರ್ಚೆಯಾಯಿತು. ಎಲ್ಲಾ ಪಕ್ಷದವರೂ ಕೂಡ ಉಪಸ್ಥಿತರಿದ್ದರು. ಕೇಂದ್ರ ಸರ್ಕಾರದಲ್ಲಿ ಲೋಕಪಾಲ್ ಬಂದಿದೆ, ಇಲ್ಲಿ ಲೋಕಾಯುಕ್ತವಿದೆ. ಲೋಕಾಯುಕ್ತ ಮತ್ತು ಲೋಕಪಾಲ್ ಇವು ಎರಡು ಲಂಚವನ್ನು ತೆಗೆದುಕೊಳ್ಳುತ್ತಿದ್ದಾರೆ ಅಥವಾ ಎಲ್ಲಿ ತಾರತಮ್ಯ ಮಾಡುತ್ತಿದ್ದಾರೆ, ಅದನ್ನು ತಹಬದಿಗೆ ಈ ವ್ಯವಸ್ಥೆಯಲ್ಲಿ ತರಬೇಕೆಂದು ಮಾಡಿದ್ದಾರೆ. ಲೋಕಾಯುಕ್ತದಲ್ಲಿ IAS officers ಮಾತ್ರ ಇರಬಾರದು ಅದು ಅವರಿಗೆ ಗಂಜಿ

ಕೇಂದ್ರ ಇದ್ದ ಹಾಗೆ ಎಂದು ಹೇಳುವ ಮಾತು, ಅವರೇ draft ಮಾಡುತ್ತಾರೆಂದು ಹೇಳುವುದು. ಅದಕ್ಕೆ ನಾನು ಹೇಳಿದೆ, No, No, in the system, Legislature is there, we are Legislators, ನಾವು ಇರುತ್ತೇವೆ. Executive ಅವರು ಇರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಛೇರ್ಮನ್‌ರವರೆ, ಶ್ರೀ ಕೆ. ಶಿವಮೂರ್ತಿಯವರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಅದರ ಬಗ್ಗೆ ಹೊಸದಾಗಿ ಬಿಲ್ ಅನ್ನು ತೆಗೆದುಕೊಂಡು ಬರುತ್ತೇವೆಂಬ ಬಗ್ಗೆ ಪ್ರಸ್ತಾಪ ಮಾಡಿದ್ದರು. ನಿನ್ನೆ TV ಅಲ್ಲಿ panel discussion ನಲ್ಲಿ ಭಾಗವಹಿಸಿದ್ದೆ ಎಂದು ಹೇಳಿದರು. ಅಲ್ಲಿ all other ವಿಚಾರಗಳು ಬಂದಿವೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳಾದ ಶ್ರೀ ಟಿ.ಬಿ. ಜಯಚಂದ್ರರವರು ಇದ್ದಾರೆ ನೀವು ಕ್ಯಾಬಿನೆಟ್‌ನಲ್ಲಿ ಹೊಸ ಲೋಕಪಾಲ್ Act ತರಬೇಕೆಂದು decision ತೆಗೆದುಕೊಳ್ಳುತ್ತೀರಿ. ಅದರಲ್ಲಿ ಕೆಲವು provision ಇವೆ. ತಾವು ಅದನ್ನು ತಂದಿದ್ದರೆ ಇಲ್ಲಿ ಡಿಬೇಟ್ ಮಾಡಬಹುದಾಗಿತ್ತು. ನೀವು ತಂದಿಲ್ಲ ಎಂದ ಮೇಲೆ ನಾನು ಆ ಬಗ್ಗೆ ಡೀಟೇಲ್ಸ್‌ಗೆ ಹೋಗುವುದಿಲ್ಲ. ಆದರೆ ಇಲ್ಲಿ ಒಂದು ಲೋಕಾಯುಕ್ತ ಕಾನೂನು ಇದೆ. ಬಹುಶಃ ನಮ್ಮ ಇಡೀ ದೇಶದಲ್ಲಿ ಅತ್ಯಂತ ಹೆಚ್ಚು ಬಲಯುತವಾದ ಲೋಕಾಯುಕ್ತ ಕಾನೂನಿದೆ. ಅದಕ್ಕೆ ಇನ್ನೂ ಹೆಚ್ಚಿನ powers ಕೊಡಿ. ಬೇಡವೆಂದು ಹೇಳುವುದಿಲ್ಲ. ಹೊಸದನ್ನೇನು ತರುವುದಕ್ಕೆ ಹೊರಟಿದ್ದೀರಿ, ಅದು ಈ ಸಿಸ್ಟಂ ಅನ್ನು ಇನ್ನೂ weaken ಮಾಡುತ್ತದೆಂಬ ಅಭಿಪ್ರಾಯವಿದೆ. ಅದು ಡಿಬೇಟ್‌ಗೆ ಬಂದಾಗ ಯಾವ ರೀತಿ weaken ಆಗುತ್ತದೆ, ದುರ್ಬಲಗೊಳಿಸುವಂತಹದ್ದು ಆಗುತ್ತದೆಂಬುದನ್ನು ನಾನು ಹೇಳುತ್ತೇನೆ. ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದ ನಂತರ ಈ ರೀತಿ ಹಲವಾರು ನಿರ್ಣಯಗಳನ್ನು ತೆಗೆದುಕೊಂಡಿದ್ದೀರಿ. ಮೂಢನಂಬಿಕೆ ನಿಷೇದ ಕಾಯಿದೆಯನ್ನು ತೆಗೆದುಕೊಂಡು ಬರುತ್ತೇವೆಂದು ಹೇಳಿದ್ದು,

ವಿರೋಧ ಬಂದ ತಕ್ಷಣ ಬೇಡವೆಂದು ಸುಮ್ಮನಾದಿರಿ. ಲೋಕಪಾಲ್ Act ಅನ್ನು ಹೊಸದಾಗಿ ತರುತ್ತೇವೆಂದು ಹೇಳಿದ್ದು, ಕ್ಯಾಬಿನೆಟ್‌ನಿಂದ approval ಆಯಿತು. ಈ ಅಧಿವೇಶನದಲ್ಲಿ ಮಂಡನೆ ಮಾಡುತ್ತೇನೆಂದು ಹೇಳಿದ್ದೀರಿ ನಾವು ಡಿಬೇಟ್‌ಗೆ ಕೂಡ ತಯಾರಿದ್ದೆವು ಆದರೆ ಹಿಂದೇಟು ಹಾಕಿದ್ದೀರಿ. ಇದು ಏಕೆ ಆಗುತ್ತಿದೆಯೆಂದು ನಮಗೆ ಅರ್ಥವಾಗುತ್ತಿಲ್ಲ. ಆದ್ದರಿಂದ ಯಾವುದಾದರೊಂದು ನಿರ್ಧಾರ ಕೈಗೊಳ್ಳುವ ಮುನ್ನ ದೃಢವಾದ ನಿರ್ಧಾರವನ್ನು ಕೈಗೊಳ್ಳಬೇಕು. ಕ್ಯಾಬಿನೆಟ್‌ನಲ್ಲಿ decision ತೆಗೆದುಕೊಳ್ಳುವುದಾದರೆ ದೃಢ ನಿರ್ಧಾರ ಸರ್ಕಾರ ಇದರ ಬಗ್ಗೆ ಏನು ನಿಲುವು ಎಂಬ ಬಗ್ಗೆ ಸ್ಪಷ್ಟೀಕರಣ ಮಾಡಬೇಕು. ಶ್ರೀ ಶಿವಮೂರ್ತಿಯವರು ಪ್ರಸ್ತಾಪ ಮಾಡಿದ ಕಾರಣ ನಾನು ಹೇಳುತ್ತಿದ್ದೇನೆ. ಇಲ್ಲಿ ಬಿಲ್ ಬಂದಿದ್ದರೆ ಡಿಬೇಟ್ ಮಾಡಬಹುದಾಗಿತ್ತು. ಇಂತಹ ವಿಷಯಗಳ ಬಗ್ಗೆ ಸ್ಪಷ್ಟವಾದ ನಿಲುವು ಇರಬೇಕಾಗುತ್ತದೆ. ನೀವು public ಆಗಿ ಡಿಬೇಟ್ ಮಾಡುವುದಕ್ಕೆ ಬಿಟ್ಟು ನಾವು session ಗೆ ತೆಗೆದುಕೊಂಡು ಬರುತ್ತೇವೆಂದರೆ O.K. ಅದನ್ನಾದರೂ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಛೇರ್ಮನ್‌ರವರೆ, ಈಗಾಗಲೇ ಲೋಕಾಯುಕ್ತ ಚಾಲ್ತಿಯಲ್ಲಿದೆ. ಕೇಂದ್ರದಲ್ಲಿ ಲೋಕ್‌ಪಾಲ್ ಬಿಲ್ ಪಾಸ್ ಆಗಿದೆ. ಅದು ಯಾವ್ಯಾವ ರಾಜ್ಯದಲ್ಲಿ ಲೋಕಾಯುಕ್ತ ಇಲ್ಲ, ಅಲ್ಲಿ ಅದನ್ನು ಅನುಷ್ಠಾನ ಮಾಡಬೇಕೆಂಬ ಮಾರ್ಗದರ್ಶನವಿದೆ. ನಾವು ಆ ದಿಸೆಯಲ್ಲಿ ಈಗಿರುವ ಲೋಕಾಯುಕ್ತಕ್ಕೆ ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂಬ ಬಗ್ಗೆ ಬಹಳಷ್ಟು ಚರ್ಚೆಯಾಗುತ್ತಿದೆ. ಹಿಂದೆ ಇದ್ದ ಲೋಕಾಯುಕ್ತರು ಮತ್ತು ಈಗಿರುವವರು ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂಬ ಪ್ರಸ್ತಾವನೆಯನ್ನು ಮಾಡಿದ್ದರು. ಆ ಹಿನ್ನೆಲೆಯಲ್ಲಿ ಇದನ್ನೆಲ್ಲಾ ಚರ್ಚೆ ಮಾಡಿದ್ದೆವು. ಏಕೆಂದರೆ ಅದನ್ನು ವಿಧಾನಸಭೆಯಲ್ಲಿ ಮಂಡನೆ ಮಾಡಿ ಚರ್ಚೆ ಮಾಡಿ ನಂತರ ಅದು

ಕಾನೂನಾಗುವುದು. ಅದಕ್ಕಿಂತಲೂ ಮುಂಚೆ This Bill is put to a public debate now. ಹಾಲಿ ಇರತಕ್ಕಂತಹ ಲೋಕಾಯುಕ್ತ ಮತ್ತು ಲೋಕ್‌ಪಾಲ್ ಮಧ್ಯದಲ್ಲಿ ಜನಾಭಿಪ್ರಾಯ ಬರುತ್ತದೆಂದು ಹೇಳಿ. ನಾವು ಇನ್ನು ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿ confirmation ಆಗುವುದಕ್ಕೆ ಮುಂಚೆಯೇ ಪ್ರತಿಕ್ರಿಯೆಗಳು ಬಂತು. ಮೇಲ್ಮನೆಯಲ್ಲಿಯೂ ಸಹ ಮಾನ್ಯ ಸದಸ್ಯರಾದ ಶ್ರೀ ಎಂ.ಸಿ. ನಾಣಯ್ಯ ನವರು Private Members resolution ಅನ್ನು move ಮಾಡಿದ್ದಾರೆ. ಆ ಒಂದು ಹಿನ್ನೆಲೆಯಲ್ಲಿ ನಾವು ಯೋಚನೆ ಮಾಡುತ್ತಿದ್ದೇವೆ. ಅದನ್ನು ಮಂಡನೆ ಮಾಡಿದ ಮೇಲೆ ವ್ಯಾಪಕವಾಗಿ ಚರ್ಚೆಯಾಗುತ್ತದೆ. ಅದರ ಜೊತೆಗೆ ಎಲ್ಲೋ ಒಂದು ಕಡೆ ಮಾಧ್ಯಮದಿಂದಲೂ ಸಹ ಯಾವುದೋ ಒಂದು ರೀತಿಯಲ್ಲಿ public domain ನಲ್ಲಿ ಇರುವ ಕಾರಣದಿಂದ debate ಆಗಲಿ. ಈಗ ಕಾನೂನು ಇರುವುದರಿಂದ ಇನ್ನು ಒಂದು ವರ್ಷದವರೆಗೆ ಮಾಡುವ. necessity ಇಲ್ಲ. ಆದರೂ ಕೂಡ ಬೇಗ ತಂದು ಶಕ್ತಿಶಾಲಿಯಾಗಿ ಮಾಡಬೇಕೆಂಬ ಉದ್ದೇಶ ಇದೆ. ಆದರೆ ಯಾವುದೇ ರೀತಿಯಲ್ಲಿಯೂ ಸಹ ಇರತಕ್ಕಂತಹ ಲೋಕಾಯುಕ್ತವನ್ನು ಶಕ್ತಿಹೀನ ಮಾಡಬೇಕೆಂಬುದು ನಮ್ಮ ಗುರಿ ಅಲ್ಲವೇ ಅಲ್ಲ. ಆ ದೃಷ್ಟಿಯಿಂದ open for the public debate also. ಇವುಗಳೆಲ್ಲವನ್ನೂ ನೋಡಿಯೇ ಸದನದ ಮುಂದೆ ತರುತ್ತೇವೆ. ಅದು ಸದನದ ಮುಂದೆ ಬಂದ ಮೇಲೆ ವ್ಯಾಪಕವಾಗಿ ಚರ್ಚೆಯಾಗಿ ಕಾನೂನು ಆಗುತ್ತದೆ.

ಛೇರ್ಮನ್:- ಆಗಲಿ, ನೀವು ಮುಂದುವರೆಸಿ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ.....

ಛೇರ್ಮನ್:- ಬಿ.ಆರ್.ಪಾಟೀಲರೆ, ಅವರು ಈಗ ತಾನೇ ಪ್ರಾರಂಭ ಮಾಡಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್:– ಸರ್, ಮಾನ್ಯ ಕಾನೂನು ಸಚಿವರು ಸದನದಲ್ಲೇ ಇರುವುದರಿಂದ ಹೇಳುತ್ತಿದ್ದೇನೆ Draft ಮಾಡಬೇಕಾದರೆ.....

ಛೇರ್ಮನ್:– Detail ಬೇಡ. ನಿಮ್ಮ ಭಾಷಣದಲ್ಲಿ ಹೇಳಿ.

ಶ್ರೀ ಬಿ.ಆರ್. ಪಾಟೀಲ್:– Draft ಅನ್ನು ನಿನ್ನೆ ಓದಿದೆ. ಈ draft ಮಾಡಬೇಕೆಂದು ನಿಮಗೇಕೆ ಹೊಳೆಯಿತು? ಬಲಿಷ್ಠವಾದ ಒಂದು ಲೋಕ್‌ಪಾಲ್ ಬಿಲ್ ಮಾಡಬೇಕೆಂದು ನಿಮ್ಮ ಕೇಂದ್ರದ ನಾಯಕರು ಹೇಳುತ್ತಿರುವಾಗ, ಅದನ್ನು ಇನ್ನಷ್ಟು ಸಡಿಲ ಮಾಡಿ ಏಕೆ ಈ ರೀತಿಯ ಪೇಚಿಗೆ ಸಿಕ್ಕಿ ಹಾಕಿಕೊಳ್ಳುತ್ತೀರಿ? ನಿನ್ನೆ ನ್ಯಾಯಮೂರ್ತಿ ಶ್ರೀ ಭಾಸ್ಕರ್‌ರಾವ್ ಅವರೇ ಮಾನ್ಯ ರಾಜ್ಯಪಾಲರ ಹತ್ತಿರ ಹೋಗಿ ಇದರ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ದಯಮಾಡಿ ತಾವು draft ಮಾಡುವಾಗ modified strong ಲೋಕ್‌ಪಾಲ್ ಬಿಲ್ ಅನ್ನು ತಂದರೆ ಬಹುಶಃ ಆರೋಗ್ಯಕರ ಚರ್ಚೆಯಾಗಬಹುದು, ಇಲ್ಲದಿದ್ದರೆ ಬಹಳ ಮುಖಭಂಗವಾಗುತ್ತದೆ.

ಛೇರ್ಮನ್:– ಬಹಳ initial stage ಆಗಿರುವುದರಿಂದ ಈಗ ಆ ವಿಚಾರಗಳು ಬೇಡ. ದಯವಿಟ್ಟು ಮುಂದುವರೆಸಿ.

ಶ್ರೀ ಕೆ. ಶಿವಮೂರ್ತಿ:– ಲೋಕಾಯುಕ್ತದ ಬಗ್ಗೆ ಹೇಳುವುದಾದರೆ, ಈಗಾಗಲೇ ಅದು public domainಗೆ ಚರ್ಚೆಗೆ ಬಂದಿದೆ. As it is, Karnataka Lokayukta is very strong. ಲೋಕಪಾಲ್ ಬಿಲ್ ಹೊಸದಾಗಿ ಬಂದಿರುವುದರಿಂದ ಅದರಲ್ಲಿ ಮತ್ತು ಇದರಲ್ಲಿ ವ್ಯತ್ಯಾಸವೇನಿದೆ ಎಂಬ ಬಗ್ಗೆ public domain ನಲ್ಲಿ ಚರ್ಚೆಯಾಗಲಿ ಎಂದು ಅಭಿಪ್ರಾಯ. ಆದರೂ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟೇ ಕೊಡುತ್ತೇವೆಂದು ವಾಗ್ದಾನ ಮಾಡಿದ್ದು, ಆ ರೀತಿಯಲ್ಲೇ ನಾವು ನಡೆದುಕೊಳ್ಳುತ್ತೇವೆ. ಆದರೆ ಪ್ರಶ್ನೆ ಏನೆಂದರೆ ಇದರಲ್ಲಿ involvement of the

executive, officers, IAS officers, manipulate ಮಾಡುತ್ತಾರೆ, drafting ಮಾಡುತ್ತಾರೆ, ಅಧಿಕಾರವನ್ನು ಅವರು ತೆಗೆದುಕೊಳ್ಳುತ್ತಿದ್ದಾರೆ, ಅವರು ಅದನ್ನು ಗಂಜಿ ಕೇಂದ್ರ ಮಾಡಿಕೊಂಡಿದ್ದಾರೆಂಬ ವಾದ ಏನಿದೆ ಅದನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ. ಏಕೆಂದರೆ ನಮ್ಮ ರಾಜ್ಯಾಂಗ ವ್ಯವಸ್ಥೆಯಲ್ಲಿ Legislature ಎಷ್ಟು ಮುಖ್ಯವೋ ಕಾರ್ಯಾಂಗವೂ ಅಷ್ಟೇ ಮುಖ್ಯವಾದುದು. ಕಾರ್ಯಾಂಗ ಎಷ್ಟು ಮುಖ್ಯವೋ ನ್ಯಾಯಾಂಗವೂ ಅಷ್ಟೇ ಮುಖ್ಯ. ಆದ್ದರಿಂದ ಈ ಮೂರು ಸೇರಿ ಅದರ ಮೂರು views ಇಟ್ಟುಕೊಂಡು ಜೊತೆಗೆ ನಮ್ಮ ಮಾಧ್ಯಮರಂಗ ಮತ್ತು ಸಂಘ ಸಂಸ್ಥೆಗಳು, ಸಾರ್ವಜನಿಕರ ಚರ್ಚೆ ಎಲ್ಲವೂ ಕ್ರೋಡೀಕರಣವಾಗಿ ಪರಿಪೂರ್ಣವಾದ ಲೋಕಯುಕ್ತವಾಗಲೆಂದು ಅಭಿಲಾಷೆ ಹಾಗೂ ಒತ್ತಾಯ. ಲೋಕಾಯುಕ್ತ ಬಂದ ಕೂಡಲೇ ನಮ್ಮಲ್ಲಿ ಹೇಳುವ ಮಾತೇನೆಂದರೆ, ಲೋಕಾಯುಕ್ತ ಬಂದ ಮೇಲೆ ಹೆದರಿಸುತ್ತಾರೆ. ದುರ್ಬಲರು, ಅಶಕ್ತರು, ಅವರುಗಳು ಅಲ್ಲಿರುವ ಜನರ ಮೇಲೆ ಲೋಕಾಯುಕ್ತ ಬಂದ ಮೇಲೆ ರೈಡ್ ಮಾಡಿಸುತ್ತಾರೆ, ನಮ್ಮನ್ನು assassinate ಮಾಡುತ್ತಾರೆ, ನಮ್ಮನ್ನು disfigure ಮಾಡುತ್ತಾರೆ, ನಮ್ಮನ್ನೇ ಹಿಡಿಯುತ್ತಾರೆ. ನಮ್ಮನ್ನು ಹಿಡಿಯಲಿ ಜೊತೆಗೆ ಬೇರೆಯವರನ್ನೂ ಹಿಡಿಯಲಿ ಎಂಬ ಮಾತನ್ನು ಹೇಳುತ್ತಾರೆ. See the discrimination. You catch us. ನಾವು ಲಂಚಕೋರರು ಹೌದು. ನಮಗೆ ಹಿಡಿಯಿರಿ. ₹. 5, 50, 500 ರೂ.ಗಳನ್ನು ತಿನ್ನುವವರೂ ಸಹ ಲಂಚಕೋರರೇ. ಆದರೆ 500 ಕೋಟಿ ರೂ.ಗಳನ್ನು ತಿನ್ನುವವರನ್ನು ಮೊದಲು ಹಿಡಿಯಿರಿ ಎನ್ನುವ ಮಾತನ್ನು ಹೇಳುತ್ತಾರೆ. ಇದು ಸಾಮಾಜಿಕ ನ್ಯಾಯ. This is the spirit of the Lokpal, Spirit of the Lokayukta, ದೊಡ್ಡ ದೊಡ್ಡವರನ್ನು ಹಿಡಿಯದೇ ಸಣ್ಣ-ಸಣ್ಣವರನ್ನು ಹಿಡಿಯುತ್ತಾ ಹೋದರೆ, Is it not a discrimination? Is it not a vengeance? Is it not a disorder? ಆದ್ದರಿಂದ ಇದಕ್ಕೆ ಸಾಮಾಜಿಕ ಹೊಣೆಗಾರಿಕೆ ಇರಬೇಕು. ಯಾವುದೇ ಕಾನೂನು ಬಂದರೂ this society is the most unequal society. This

society is an imbalanced society. ನೀವು ₹. 50, 500 ರೂ.ಗಳ ಲಂಚ ತಿನ್ನುವವರನ್ನು ಹಿಡಿಯುವುದಕ್ಕಿಂತ ಮೊದಲು ಕೋಟಿಗಟ್ಟಲೆ ಮಾಡಿರುವವರನ್ನು ಮೊದಲು ನೀವು ಹಿಡಿಯಬೇಕು. ಅವರನ್ನು ಬಿಟ್ಟು ನೀವು ಇವರನ್ನು ಹಿಡಿಯುವುದಕ್ಕೆ ಬಂದರೆ, ಆಗ ಲೋಕಾಯುಕ್ತ ನಮಗೆ threat ಮಾಡುವುದಕ್ಕೆ ಬಂದಿದೆಯೆಂದು ಹಾಗೂ ನಮ್ಮನ್ನು ಹೆದರಿಸುತ್ತಿದೆ, revenge ಮಾಡುತ್ತಿದೆ ಎಂಬ ವಾತಾವರಣ ಸೃಷ್ಟಿಯಾಗುತ್ತದೆ. ಆ ರೀತಿಯ ವಾತಾವರಣ ಈ ದೇಶದಲ್ಲಿ ಸೃಷ್ಟಿಯಾಗಬಾರದು. ಆದ್ದರಿಂದ ಕಾನೂನು ಎಲ್ಲರಿಗೂ ಒಂದೇ ರೀತಿಯಲ್ಲಿರಬೇಕು. ಮೊದಲು ದೊಡ್ಡವರಿಗೆ ಆಗಲಿ ನಂಗತ ಸಣ್ಣವರಿಗೆ ಬರಲಿ ಎಂಬ ವಾದ ಅಂತರಾಳದಿಂದ ಬರತಕ್ಕಂತಹದ್ದು. ಆದ್ದರಿಂದ ನ್ಯಾಯಾಂಗ ವ್ಯವಸ್ಥೆಯಲ್ಲಿ, ನ್ಯಾಯಾಂಗಕ್ಕೆ ಅನುದಾನವನ್ನು ಕೊಡುತ್ತಿದ್ದೇವೆ. ಆದರೆ ನ್ಯಾಯಾಂಗದಲ್ಲಿ ಮೀಸಲಾತಿಯೇ ಇಲ್ಲ. ಸಣ್ಣ ಸಣ್ಣ ವರ್ಗಗಳು ಇರುವ ಕಡೆ representation ಇಲ್ಲ There is no representation for microscopic community. As a Judge, as a Presiding Officer or a Government Advocate or a Pleader or a Judicial Officer or as a Notar is ಯಾವ್ಯಾವ ಜಾತಿಯವರು ಎಷ್ಟೆಷ್ಟು ಪ್ರಮಾಣದಲ್ಲಿ ನ್ಯಾಯಾಂಗದಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನುವ ಅಂಕಿ ಅಂಶಗಳನ್ನು ಹೇಳಿ. ಸಾಮಾನ್ಯ ಅಥವಾ ಕಟ್ಟ ಕಡೆಯ ವ್ಯಕ್ತಿ ಹೇಳುವುದೇನೆಂದರೆ ನನ್ನ ಸಮಾಜ, ನನ್ನ ಜಾತಿ, ನನ್ನ ಧರ್ಮ ಎಲ್ಲಿಯವರೆಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ, Highest Body ಯಲ್ಲಿ ಕುಳಿತು ಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ನನಗೆ ಅದರಲ್ಲಿ ನಂಬಿಕೆಯಿಲ್ಲ. ಆದ್ದರಿಂದ The caste-based reservation is a must in the judicial system. ರಾಜ್ಯ ಮಟ್ಟದಲ್ಲಿ ಮತ್ತು ದೇಶಮಟ್ಟದಲ್ಲಿ ಇದನ್ನು ತರಬೇಕು. We will reform the judiciary. We have introduced so many things in the judiciary. ಆದಕಾರಣ, ಇಂದು ನ್ಯಾಯಾಂಗ ವ್ಯವಸ್ಥೆಯಲ್ಲಿ 'ಸಮಪಾಲು ಸಮಬಾಳು' ಎನ್ನುವುದು ಆಗಬೇಕಾದರೆ ಎಲ್ಲಾ ರಂಗದಲ್ಲಿಯೂ

ನ್ಯಾಯಯುತವಾಗಿ ಧ್ವನಿ ಇಲ್ಲದ ವರ್ಗಗಳು ಏನಿವೆಯೋ ಅವರಿಗೆ ಹಕ್ಕನ್ನು ಕೊಡಬೇಕು, ಕುರ್ಚಿಯನ್ನು ಕೊಡಬೇಕು.

ಶ್ರೀ ಕೆ.ಎನ್. ರಾಜಣ್ಣ:- ಮಾನ್ಯ ಅಧ್ಯಕ್ಷರೆ, ನಮ್ಮ ದೇಶದಲ್ಲಿ ಒಂದು ರೀತಿಯ ವಿಪರ್ಯಾಸವೇನೆಂದರೆ ಸಂವಿಧಾನ, judgeಗಳು, ಶಾಸಕಾಂಗ ಮತ್ತು ಕಾರ್ಯಾಂಗಗಳು ನಿರ್ವಹಣೆ ಮಾಡತಕ್ಕಂಥ ವ್ಯವಸ್ಥೆ. ಇದಕ್ಕೆ ಕಾರಣವೇನೆಂದರೆ judges ಗಳು ಮಾಡಿರುವಂತಹ ಕಾನೂನುಗಳು ಸಂವಿಧಾನಬದ್ಧವಾಗಿದೆಯೇ ಇಲ್ಲವೆಂಬುದರ ಬಗ್ಗೆ interpretation ಮಾಡುವುದು ಅವರ ಅಧಿಕಾರ. ಅವರೇ ಕಾನೂನನ್ನು ಮಾಡುತ್ತಾರೆ. ಬಹಳಷ್ಟು ಕಾನೂನುಗಳ ತಿದ್ದುಪಡಿ ಬಂದಾಗ ತಾವು ಸಹ ನೋಡಿದ್ದೀರಿ. ಹೈಕೋರ್ಟಿನ ಆದೇಶದಂತೆ, ಸುಪ್ರೀಂ ಕೋರ್ಟಿನ ನಿರ್ದೇಶನದಂತೆ ಅಂದರೆ ಅವರೇ ಕಾನೂನನ್ನು ಈ ರೀತಿ ಮಾಡಿ ಎಂದು ಹೇಳುತ್ತಾರೆ. ದೇವಮಾನವರಾದ ಅವರು ಮಾಡಿದರು ಎಂದರೆ ನಾವು ಅವರು ಹೇಳಿದ ಹಾಗೆ ಮಾಡಿಕೊಂಡು ಹೋಗುತ್ತೇವೆ. ನಾವು ಕಾನೂನನ್ನು ಮಾಡುವುದನ್ನು ಬಿಟ್ಟು ಏನು ಮಾಡುತ್ತೇವೆಂದರೆ ದೀಪ ಹಾಕಿಲ್ಲವೇ, ಚರಂಡಿ ಮಾಡಿಲ್ಲವೆ? ಮನೆ ಕೊಟ್ಟಿಲ್ಲವೇ ಎಂಬುದನ್ನು ನಾವು ಮಾಡುವುದಕ್ಕೆ ಹೋಗುತ್ತೇವೆ.

ಛೇರ್ಮನ್:- ಜನರಲ್ ಕಾಮೆಂಟ್ಸ್ ಬೇಡ.

ಶ್ರೀ ಕೆ.ಎನ್. ರಾಜಣ್ಣ:- ಶಾಸಕಾಂಗದವರು ಕಾರ್ಯಾಂಗದ ಕೆಲಸವನ್ನು ಮಾಡುವುದಕ್ಕೆ ಹೋಗುತ್ತಾರೆ. Judges ಶಾಸಕಾಂಗದ ಕೆಲಸವನ್ನು ಮಾಡುವುದಕ್ಕೆ ಬಂದಿದ್ದಾರೆ. ಇದು ಈ ದೇಶದ ವಿಪರ್ಯಾಸ.

ಶ್ರೀ ಕೆ. ಶಿವಮೂರ್ತಿ:- ಮಾನ್ಯ ಸದಸ್ಯರಾದ ಶ್ರೀ ರಾಜಣ್ಣನವರು ಹೇಳುವುದರಲ್ಲಿ ಸತ್ಯಾಂಶ ಅಡಗಿದೆ. ಈ ವ್ಯವಸ್ಥೆಯನ್ನು reform ಮಾಡುವವರು ಯಾರು ಅಂದರೆ Legislators. Legislature is a Supreme

Body. We are the supreme body. Through the Legislation. ನಾವು ಇದನ್ನು ಹೇಳಬೇಕಾಗುತ್ತದೆ. ಇದರ ಬಗ್ಗೆ ಚಿಂತನೆಯಾಗಬೇಕು. ನ್ಯಾಯಾಂಗ ವ್ಯವಸ್ಥೆಯಲ್ಲಿ ಶೋಷಿತ ವರ್ಗಗಳು, ದುರ್ಬಲ ವರ್ಗಗಳು, ಅಶಕ್ತವಂತರು, ಗ್ರಾಮೀಣಪ್ರದೇಶದವರಿಗೆ ಜಾತಿ ಆಧಾರದ ವ್ಯವಸ್ಥೆ ಎಲ್ಲಿಯವರೆಗೆ ಇರುವುದಿಲ್ಲವೋ ಅಲ್ಲಿಯತನಕ ಪರಿಪೂರ್ಣವಾದ ನ್ಯಾಯಾಂಗ ವ್ಯವಸ್ಥೆಯಾಗುವುದಿಲ್ಲ. ಕೇವಲ ಬುದ್ಧಿವಂತರು, ಇಂಗ್ಲೀಷ್ ಮಾತನಾಡುವವರು, ಹೈ-ಫೈನವರು, ಕುಳಿತಿರುವಂತಹವರು, judge ನವರ ಮಗ judge. ಇಂಡಿಯಾದ ಒಂದೇ ಒಂದು ಫ್ಯಾಮಿಲಿಯಲ್ಲಿ ಎಂಟು ಕೋರ್ಟ್‌ಗಳಲ್ಲಿ ಅವರ ಮನೆಯವರೇ judges ಆಗಿದ್ದಾರೆ. ಅವರೇ dictate ಮಾಡುತ್ತಾರೆ, ಅವರೇ ಬರೆಯುತ್ತಾರೆ. Is it a democracy? Is it a Social justice? ದಯಮಾಡಿ ಸಮಾಜದಲ್ಲಿ ಯಾವ ಅಶಕ್ತ ವರ್ಗಗಳು ಮಾತನಾಡದೇ ಇರುವಂತಹವರಿಗೆ ಆ ವರ್ಗಕ್ಕೆ ಶಕ್ತಿ ತುಂಬಿ, ವಿದ್ಯಾವಂತಿಕೆ ತುಂಬಿ, ಮೀಸಲಾತಿ ಕೊಟ್ಟು ಅಲ್ಲಿ ಕೂರಿಸುವ ಕೆಲಸವಾಗಬೇಕು. I am not referring to only SC/ST's. There are umpteen number of communities, who are more worse than Schedule Castes. ಅದು backward class ನಲ್ಲಿದ್ದಾರೆ, ಮೈನಾರಿಟೀಸ್‌ನಲ್ಲಿದ್ದಾರೆ, microscopic communities ನಲ್ಲಿದ್ದಾರೆ. ಅಲೆಮಾರಿ ಮತ್ತು ಅರೆಅಲೆಮಾರಿಗಳಿದ್ದಾರೆ. ಆದ್ದರಿಂದ ಸಮಾಜ ಮತ್ತು ಮಾಧ್ಯಮ ಇದರ ಬಗ್ಗೆ ವಿಶೇಷವಾಗಿ ಕಣ್ಣನ್ನು ತೆರೆಯಬೇಕು. ಈ ಸದನವು ಕಣ್ಣನ್ನು ತೆಗೆದು ಇದರ ಬಗ್ಗೆ ಕಾನೂನನ್ನು ಮಾಡುವಂತಹ ರೀತಿಯಲ್ಲಿ ಮುಂದುವರೆಯಬೇಕು, ಚರ್ಚೆ ಮಾಡಬೇಕು ಎಂಬ ಪ್ರಾರ್ಥನೆಯನ್ನು ಮಾಡುತ್ತೇನೆ.

ಛೇರ್ಮನ್:-ಶಿವಮೂರ್ತಿಯವರೆ, ಊಟಕ್ಕೆ ಹೋಗಬೇಕಾಗಿರುವುದರಿಂದ ಸ್ವಲ್ಪ ಬೇಗ ಮುಗಿಸಿ.

ಶ್ರೀ ಕೆ. ಶಿವಮೂರ್ತಿ:- ಊಟ ಆದ ಮೇಲೆ ಮಾತನಾಡಲೇ?

ಛೇರ್ಮನ್:- ನಾಳೆಯೇ ಕೊನೆಯ ದಿವಸವಾಗಿರುವುದರಿಂದ ಐದು ನಿಮಿಷ ಮಾತನಾಡಿ ಮುಗಿಸಿ ಬಿಡಿ.

ಶ್ರೀ ಕೆ. ಶಿವಮೂರ್ತಿ:- ಮುಗಿಸುತ್ತೇನೆ. ಶಿಕ್ಷಣದ ಬಗ್ಗೆ ಹೇಳುವದಾದರೆ ...... ಎಲ್ಲರೂ ಹೊಟ್ಟೆ ಹಸಿವಾಗಿದೆಯೆಂದು ಹೇಳುತ್ತಿದ್ದಾರೆ.

ಛೇರ್ಮನ್:- ನೀವು ಬೇಗ ಮುಗಿಸಿದರೆ ಎಲ್ಲರೂ ಊಟಕ್ಕೆ ಹೋಗೋಣ. ಅವರ ಕಡೆ ನೋಡಬೇಡಿ. ಈ ಕಡೆ ನೋಡಿ ಮಾತನಾಡಿ.

ಶ್ರೀ ಕೆ. ಶಿವಮೂರ್ತಿ:- ಸರ್, ಮುಗಿಸುತ್ತೇನೆ. Waste management ಬಗ್ಗೆ ಹೇಳುವುದಾದರೆ ಸಾಕಷ್ಟು ಕೆಲಸಗಳನ್ನು ಮಾಡುತ್ತಾ ಇದ್ದೇವೆ. ಇಲ್ಲ ಎಂದು ಹೇಳುವುದಿಲ್ಲ. We are not seeing the end. ನಾವು ಏನು object ಎಂದು ಮುಂದೆ ನೋಡುತ್ತಿದ್ದೇವೆ. ನಾವು ಏನು achieve ಮಾಡಿದ್ದೇವೆ ಅದನ್ನು ನೋಡುತ್ತಿಲ್ಲ. Accountability ಇಲ್ಲ. Social responsibility ಇಲ್ಲ. ಸಾಕಷ್ಟು building ಅನ್ನು ಕಟ್ಟಿದ್ದೇವೆ. ಅವು ಹಾಗೆ ಕೊಳೆಯುತ್ತಿವೆ. ಇವತ್ತಿನ ದಿವಸ ಆರೋಗ್ಯ ಕೇಂದ್ರಗಳು, ಸಮುದಾಯ ಭವನಗಳು ಹೀಗೆ ಹಲವಾರು ಭವನಗಳನ್ನು, ಕೇಂದ್ರಗಳನ್ನು ರೇಷ್ಮೆ ಇಲಾಖೆಯಲ್ಲಿ ಮೀನುಗಾರಿಕೆ ಇಲಾಖೆಯಲ್ಲಿ ಕಟ್ಟಿದ್ದೇವೆ. ಇವುಗಳನ್ನು ಉಪಯೋಗ ಮಾಡಿಕೊಳ್ಳದೆ ಹಾಗೆ ಬಿಟ್ಟುಬಿಟ್ಟಿದ್ದೇವೆ. ಅದಕ್ಕೆ ಇವುಗಳಿಗೆ ಚಾಲನೆ ಕೊಡುವಂಥ ಕೆಲಸವನ್ನು ನಮ್ಮ ಆಡಳಿತ ವ್ಯವಸ್ಥೆ ಮಾಡಬೇಕು. ಇದರ ಜೊತೆಗೆ ಶಿಕ್ಷಣದಲ್ಲಿ ತಾರತಮ್ಯ ಉಂಟಾಗಿದೆ. ನಮಗೆ ಗುರುಕುಲ ಇದ್ದಿದ್ದರೆ ಒಳ್ಳೆಯದಿರುತ್ತಿತ್ತು ಎಂದು ನನಗನಿಸುತ್ತದೆ. ಏಕೆಂದರೆ, nature ನಲ್ಲಿ ಅಂದರೆ, ನದಿ ಪಕ್ಕದಲ್ಲಿ, ಮರಗಿಡಗಳ ಕೆಳಗೆ ಕುಳಿತು ಪಾಠವನ್ನು ಕೇಳಬಹುದಾಗಿತ್ತು. ಇವತ್ತಿನ ದಿವಸ english medium school, costly school ಗಳು, ಫೀಸ್ ಕೊಡತಕ್ಕಂಥ ಶಾಲೆಗಳು, curriculum, ಶಾಲೆಗಳ ಸಂಖ್ಯೆ ಹೆಚ್ಚಾಗಿವೆ. ಫ್ರೀ ಎಜುಕೇಷನ್

ಇವತ್ತಿನ ದಿನ ಇಲ್ಲ. ಭಾರಿ competitive education ಆಗಿ stress-based education ಆಗಿದೆ. Creative knowledge is not left out. ಅಂಥ ವ್ಯವಸ್ಥೆ ಆಗಿದೆ. ಇವತ್ತು ಗ್ರಾಮೀಣ ಪ್ರದೇಶಕ್ಕೆ ಹೋದರೆ ಅಲ್ಲಿ ನಮ್ಮ ಶಾಲೆಗಳನ್ನೆಲ್ಲ ಮುಚ್ಚುತ್ತಿದ್ದಾರೆ. ಉಪಾಧ್ಯಕ್ಷರೆ, ತಾವು ನೋಡಬೇಕು ಎಲ್ಲ ಕಡೆ ಇಂಗ್ಲಿಷ್ ಮೀಡಿಯಂ ಶಾಲೆಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ಇಂಗ್ಲೀಷ್ ಓದಿದರೆ ನಮಗೆ ಕೆಲಸ, ಇಂಗಿಷ್ ಓದಿದರೆ ನಮಗೆ ಮಾನ್ಯತೆ, ಇಂಗ್ಲಿಷ್ ಓದಿದರೆ ನಮಗೆ ಹೆಚ್ಚಿನ ಅಂತಸ್ತು, ಎಂದು ಪೋಷಕರಲ್ಲಿ ಒಂದು ಅಭಿಪ್ರಾಯ ಬಂದುಬಿಟ್ಟಿದೆ. ಅದಕ್ಕೆ ಇವತ್ತಿನ ದಿನ ಇಂಗ್ಲೀಷ್ ಮೀಡಿಯಂ ಶಾಲೆಗಳು ಬೃಹದಾಕಾರವಾಗಿ ಬೆಳೆಯುತ್ತಿದೆ. ಈ education ವ್ಯವಸ್ಥೆಯಲ್ಲಿ ಬೇರೆ ರಾಜ್ಯದವರು, ಬೇರೆ ದೇಶದವರು ಇಲ್ಲಿ ಬಂದು ಹಣ ಮಾಡುತ್ತಿದ್ದಾರೆ. ಬೇರೆ ರಾಜ್ಯದವರು ಇಲ್ಲಿಗೆ ಬಂದು ಇಂಗ್ಲೀಷ್ ಮೀಡಿಯಂ ಶಾಲೆಗಳನ್ನು ಮಾಡಿದ್ದಾರೆ. ಅಂದರೆ ಇಲ್ಲಿರುವ ಸ್ಥಳೀಯರಿಗೆ ಆ ಪ್ರಾಧಾನ್ಯತೆ ಸಿಗುತ್ತಿಲ್ಲ. ಏಕೆಂದರೆ ಅವರಿಗೆ ಹಣ ಇಲ್ಲ, infrastructure, investment ಇಲ್ಲ ಬೆಂಗಳೂರಿನಲ್ಲಿ Delhi based ಶಾಲೆಗಳು, ಇಂಗ್ಲೀಷ್ ಮಾಧ್ಯಮ ಶಾಲೆಗಳು ಹೇಗೆ ಹಣ ಗಳಿಸುತ್ತಿವೆ ಎಂಬುದನ್ನು ನೋಡಬೇಕು. ನಾವೇ ಹಣವನ್ನು ಕೊಡುತ್ತಿದ್ದೇವೆ. ಅದಕೋಸ್ಕರ, ನಮ್ಮವರಿಗೆ ಪ್ರೋತ್ಸಾಹ ಮಾಡಬೇಕು. ಈ ಶಿಕ್ಷಣ ವ್ಯವಸ್ಥೆಯಲ್ಲಿ ಕೊಡತಕ್ಕಂಥ ಲೈಸೆನ್ಸ್‌ನಲ್ಲಿ relaxation ನಮ್ಮ ಕರ್ನಾಟಕದವರಿಗೆ ನೀಡಿ ಅವರಿಗೆ ಪ್ರೋತ್ಸಾಹ ಕೊಡಬೇಕು. Higher education is a sick unit. Higher education ಬಗ್ಗೆ research ಆಗಲೇ ಇಲ್ಲ. Higher education expansion ಆಗಲಿಲ್ಲ, higher education ನಲ್ಲಿ new thinking ಆಗಲಿಲ್ಲ. ಹಳೆ ಕಾಲದ ಯಾವ ಬ್ರಿಟಿಷ್ ಪದ್ಧತಿ ಇದೆಯೋ ಅದೇ ಪದ್ಧತಿಯನ್ನು ನಾವು ನಮ್ಮ Education Department ನಲ್ಲಿ ಪಾಲಿಸುತ್ತಿದ್ದೇವೆ. According to the demands of the new generation, Education Department should thoroughly change, revolutionary change ಆಗಬೇಕು. That too

technical education ಬಗ್ಗೆ ಹೇಳುವುದಾದರೆ, ITI ನಲ್ಲಿ ಒಂದು ಕೃಷಿ ಆಧಾರಿತ ಮೀಸಲಾತಿ ತಂದು admission ಕೊಡುತ್ತೇವೆಂದು ಹೊಸ ಕಾರ್ಯಕ್ರಮವನ್ನು ತರುವುದನ್ನು ಬಹಳ ಸ್ವಾಗತ ಮಾಡಲಾಗುತ್ತಿದೆ. ಗ್ರಾಮೀಣ ಪ್ರದೇಶದ ಮಕ್ಕಳಿಗೆ 40 ಭಾಗದಷ್ಟು ಕೊಟ್ಟು ITI ನಲ್ಲಿ ಕೃಷಿ ಆಧಾರಿತ curriculum ತರುತ್ತೇವೆ ಎನ್ನುವುದು ಹೀಗೆ ಹೊಸ ಹೊಸ ಕ್ರಾಂತಿಯನ್ನು higher education ನಲ್ಲಿ ತರಬೇಕು. ಯಾವುದು unwanted ಇದೆಯೋ ಅದನ್ನು ಮುಚ್ಚುವುದು, ಯಾವುದಕ್ಕೆ demand ಮಾಡುತ್ತಿದ್ದಾರೆ ಅದಕ್ಕೆ priority ಕೊಡುವಂಥದ್ದು ಆಗಬೇಕು. *Education is a base to our society.*

Education is a guide to our society. Education is a guide to all. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಗೂ free and fair ವ್ಯವಸ್ಥೆಯಲ್ಲಿ ಶಿಕ್ಷಣವನನ್ನು primary ಯಿಂದ ಹಿಡಿದು Higher Education ವರೆಗೂ ಕೊಡಬೇಕು. Technical Education ಎನ್ನುವುದು ಕೇವಲ ಸಿಟಿಗಳಲ್ಲಿ ಮಾತ್ರ concentrate ಆಗಿದೆ. ಈ ಶಿಕ್ಷಣ ಗ್ರಾಮೀಣ ಪ್ರದೇಶಕ್ಕೆ ಹೋಗುತ್ತಿಲ್ಲ. ಆದ್ದರಿಂದ Education Policy ಯಲ್ಲಿ technical education ಅನ್ನು at leaste 10+2 ಆ ವ್ಯವಸ್ಥೆಯಲ್ಲಿ ಅದನ್ನು ಅಳವಡಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ ಹಾಗೂ ನಾವು ಈ ಪಾಲಸಿಯನ್ನು ಬದಲಾವಣೆ ಮಾಡಿಕೊಳ್ಳಬೇಕು.

ಕೊನೆಯದಾಗಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಶ್ರೀಮಾನ್ ರಾಹುಲ್ ಗಾಂಧಿಯವರು ತಾವು ಲೋಕಪಾಲ್ ಬಗ್ಗೆ ಮಾತನಾಡಬೇಕೆಂದು ನಮಗೆ ಕರೆ ಕೊಟ್ಟಿದ್ದಾರೆ. ಕಾಂಗ್ರೆಸ್ ಪಕ್ಷ ಅದಕ್ಕೆ ಬಹಳ ಕಟಿಬದ್ಧವಾಗಿದೆ.

ಈ ಸಹಕಾರಿ ಕ್ಷೇತ್ರದಲ್ಲಿ reservation ಅನ್ನು ಮಾಡಲಿಲ್ಲ ಹಾಗೂ reservation in promotion ಮತ್ತು reservation in private sector, ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. Reservation in private sector ಎನ್ನುವುದು

ಮುಂದಿನ ದಿನಗಳಲ್ಲಿ ಇದು ನಮ್ಮ manifesto ಆಗುತ್ತದೆ. ಬೆಂಗಳೂರು ಬೃಹದಾಕಾರವಾಗಿ ಬೆಳೆಯುತ್ತಿದೆ. ಆದರೆ, ನಮ್ಮವರಿಗೆ ಇಲ್ಲಿ ಕೆಲಸ ಇಲ್ಲ. ಅದಕ್ಕೋಸ್ಕರ ಯಾವ ಪ್ರಮಾಣದಲ್ಲಿ, ಯಾರಿಗೆ, ಎಲ್ಲಿರುವವರಿಗೆ ಯಾವ ರೀತಿ ಕೆಲಸ ಕೊಡಬೇಕು ಎನ್ನುವುದರ ಬಗ್ಗೆ ಕಾನೂನುಗಳನ್ನು ತರಬೇಕು. ಸಹಕಾರಿ ಆಂದೋಲನ ಆಗಬೇಕೆಂದು ಹೇಳುತ್ತಾರೆ. ಆದರೆ ಅಲ್ಲಿರುವಂತಹ microscopic community ಯವರ representation ಇರುವದಿಲ್ಲ. ಕೆಲವು ಜನರು ಮಾತ್ರ ಸೇರಿಕೊಂಡು ಸಹಕಾರಿ ಸಂಘವೆಂದು ಮಾಡಿಕೊಂಡಿರುತ್ತಾರೆ. ಅವರು ಮಾತನಾಡಬೇಕಾದರೆ ಚೆನ್ನಾಗಿರುತ್ತದೆ. ಆದರೆ ಇದು ಒಂದು ಪರಿಪೂರ್ಣವಾದ ಆಂದೋಲನವಾಗುವುದಿಲ್ಲ. ಅದಕೋಸ್ಕರ ಮೀಸಲಾತಿಯನ್ನು ತರಬೇಕೆಂದು ನಾನು ಒತ್ತಾಯವನ್ನ ಮಾಡುತ್ತಿದ್ದೇನೆ.

ಕೊನೆಯದಾಗಿ Election Commission ಮತ್ತು ರಜಾದಿನಗಳ ಬಗ್ಗೆ ಹೇಳುವುದಾದರೆ ಬಹಳಷ್ಟು ರಜಾ ದಿನಗಳು ಬಂದಿದೆ. ಶಾಸಕರೆಲ್ಲರೂ ಇಲ್ಲಿ ಇದ್ದಾರೆ. ನಾವು ಎಷ್ಟು ದಿವಸ administration ಮಾಡುತ್ತೇವೆ? ಎಷ್ಟು ಗಂಟೆಗಳ ಕಾಲ ಅಧಿಕಾರಿಗಳು ಕಛೇರಿಯಲ್ಲಿ ಕುಳಿತಿರುತ್ತಾರೆ? ಎಷ್ಟು meeting ಅನ್ನು attend ಮಾಡುತ್ತಿದ್ದಾರೆ? ಎಷ್ಟು ರಜೆಗಳು ಇವೆ? ದಯವಿಟ್ಟು, ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕು. ಏಕೆಂದರೆ administration ನಲ್ಲಿ second saturday ಆಯಿತು, death day ಆಯಿತು, birthday ಆಯಿತು, festival ಆಯಿತು, ಇಷ್ಟು ದಿವಸ ರಜೆಗಳು ಬಂದರೆ ಹೇಗೆ administration ಮಾಡುವುದಕ್ಕೆ ಆಗುತ್ತದೆ? ಹೇಗೆ ದೇಶವನ್ನು ನಡೆಸುವುದಕ್ಕೆ ಆಗುತ್ತದೆ? ನಾವು ಇದರ ಬಗ್ಗೆ ಸಮಗ್ರವಾದ ಚಿಂತನೆಯನ್ನು ಮಾಡಬೇಕೆಂದು ಹೇಳುತ್ತೇನೆ.

ನಮ್ಮಲ್ಲಿರತಕ್ಕಂಥ ಜನರಿಗೆ senior citizens, ನಮ್ಮ ತಂದೆ–ತಾಯಿಗಳು, ಪೂರ್ವಿಕರು ಅವರನ್ನು ನಾನಾ ಕಾರಣದಿಂದ ನಮ್ಮ ಸಮಾಜ, ನಾವೇ ಅವರನ್ನು ತಿರಸ್ಕಾರ ಮಾಡುತ್ತಿದ್ದೇವೆ. ಅವತ್ತು ಮಾನ್ಯ

ಸಿ.ಟಿ. ರವಿಯವರು ಮಾತನಾಡಬೇಕಾದರೆ ನಾನು interfere ಅದೆ. ಅದಕ್ಕೆ ಸಿ.ಟಿ.ರವಿಯವರು ಒಂದು ಮಾತನ್ನು ಹೇಳಿದ್ದಾರೆ. ನಾನು ಹೇಳುತ್ತೇನೆ. Senior citizen ಶಾಪ......

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಅಧ್ಯಕ್ಷರೆ, ಗಾಂಧಿ ಜಯಂತಿ, ಬಸವಣ್ಣನ ಜಯಂತಿ, ಅಂಬೇಡ್ಕರ್ ಜಯಂತಿ, ಕನಕ ಜಯಂತಿ, ವಾಲ್ಮೀಕಿ ಜಯಂತಿ ಹೀಗೆ ಹಲವಾರು ರಜಾದಿನಗಳು ಮಾಡಲಾಗಿದೆ. ನಾವೆಲ್ಲ ಸೇರಿ ಒಂದು ಕೆಲಸ ಮಾಡೋಣ. "ವಿಶ್ವ ಮಾನವರ ದಿನಾಚರಣೆ" ಎಂದು ಒಂದು ದಿವಸ ಎಲ್ಲ ರಜಾ ದಿನಗಳನ್ನು ಸೇರಿ ಆಚರಣೆ ಮಾಡೋಣ, ಹೀಗೆ ಮಾಡುವುದರಿಂದ ಬಹಳ ಅನುಕೂಲವಾಗುತ್ತದೆ. ಅವತ್ತಿನ ದಿವಸವಾದರೂ ಎಲ್ಲ ಜಾತಿಯವರು ಒಂದು ಕಡೆ ಸೇರುತ್ತಾರೆ. ಇಲ್ಲದೆ ಹೋದರೆ ಅದು ಒಂದೊಂದು ಜಾತಿಯವರು ಮಾಡುವ ಪರಿಸ್ಥಿತಿ ಸೃಷ್ಟಿಯಾಗಿದ. "ವಿಶ್ವ ಮಾನವರ ದಿನಾಚರಣೆ" ಯನ್ನು ಮಾಡಿ ಈ ವಿಷ ಮಾನವರನ್ನಾಗಿ ಅವರನ್ನೂ ಮಾಡುವಂಥ ಕೆಲಸದಿಂದ ಹೊರಗೆ ಬರಬೇಕು.

ಶ್ರೀ ಎನ್.ಎ. ಹ್ಯಾರಿಸ್:- ಮಾನ್ಯ ಪುಟ್ಟಣ್ಣಯ್ಯನವರೆ, ಇನ್ನೊಂದು ದಿವಸ ರಜಾ ದಿನವನ್ನಾಗಿ ಮಾಡಿ ಇನ್ನೊಂದು ದಿವಸ ಈ ದಿನಾಚರಣೆಯನ್ನು ಆಚರಿಸಬೇಕೋ? ಅಥವಾ ಒಟ್ಟಿಗೆ ಎಲ್ಲ ಸೇರಿಸಿ ಮಾಡುವುದಾ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಎಲ್ಲ ಒಟ್ಟಿಗೆ ಸೇರಿಸಿ ಮಾಡುವುದು. ಎಲ್ಲರನ್ನೂ ಒಂದು ಕಡೆ ತರೋಣವೆಂದು ಅಷ್ಟೇ.

ಶ್ರೀ ಸಿ.ಟಿ. ರವಿ:- ಉಪಾಧ್ಯಕ್ಷರೆ, ನಾಳೆ ದಿವಸ ಸೇವಲಾ ಜಯಂತಿ ಘೋಷಣೆ ಮಾಡಿತು ಎಂದು ಇಟ್ಟುಕೊಳ್ಳಿ, ಸರ್ಕಾರನೇ ಲಂಬಾಣಿ ಜನಾಂಗದವರಿಗೆ vehicle ಕಳುಹಿಸುವುದು. ಅಂಬೇಡ್ಕರ್ ಜಯಂತಿ ದಿವಸ

SC/ST ಅವರನ್ನೇ ಕರೆದು vehicle ಕಳುಹಿಸುವುದು. ಕನಕ ಜಯಂತಿ ದಿವಸ ಕುರುಬ ಸಂಘದ ಅಧ್ಯಕ್ಷರನ್ನು ಕರೆಸಿ ಅವರನ್ನು ವೇದಿಕೆ ಮೇಲೆ ಕೂರಿಸಿ ನಿಮ್ಮ ಕಡೆಯವರನ್ನೆಲ್ಲ ಕರೆದುಕೊಂಡು ಬನ್ನಿ ಎಂದು ಅವರಿಗೆ vehicle ಕಳುಹಿಸುವುದು. ನಾವೇ ಜಾತೀಯತೆಯನ್ನು ಪ್ರೋತ್ಸಾಹಿಸುತ್ತಿದ್ದೇವೆ. ಯಾರು ಜಾತಿ ವ್ಯವಸ್ಥೆ ಇರಬಾರದೆಂದು ಬಯಸಿ ಸಮಾನತೆಯನ್ನು ಹುಟ್ಟುಹಾಕುವಂಥ ಪ್ರಯತ್ನ ಮಾಡಿದರೋ ಅವರನ್ನು ಜಾತಿ ಮುಖಂಡರನ್ನಾಗಿ ಮಾಡಿ ಅವರ ಹೆಸರಿನಲ್ಲಿಯೇ ಜಾತೀಯತೆಯನ್ನು ಪ್ರೋತ್ಸಾಹಿಸುತ್ತಿದ್ದೇವೆ. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ರಜಾ ಸಿಕ್ಕಿದ ತಕ್ಷಣ ನಮ್ಮ ಸರ್ಕಾರಿ ಅಧಿಕಾರಿಗಳು ಎಲ್ಲಿ ಹೋಗುತ್ತಾರೆ? ಏನು ಮಾಡುತ್ತಾರೆನ್ನುವುದನ್ನು ಈ ಸದನದಲ್ಲಿ ಹೇಳಬೇಕಾಗಿಲ್ಲ.

ಛೇರ್‌ಮನ್:- ಎಲ್ಲರ ಅಭಿಪ್ರಾಯ ಒಂದೇ ಆಗಿದ್ದರೆ ಅದೇ ಆಗುತ್ತದೆ.

ಶ್ರೀ ಕೆ. ಶಿವಮೂರ್ತಿ:- ಉಪಾಧ್ಯಕ್ಷರೆ, ನಾನು ಈ ಶಾಸನ ಸಭೆಗೆ ಬಂದಮೇಲೆ ಒಂದೇ ವಿಷಯದ ಬಗ್ಗೆ ಬಹಳಷ್ಟು ಮಾತನಾಡಿದ್ದೇನೆ. ಕಂದಾಯ ಇಲಾಖೆಯಿಂದ ನಾವು ವಾಸಿಸತಕ್ಕ ಊರುಗಳು ಅಂದರೆ ನಾವು ಅದನ್ನು ಕೇರಿಗಳು ಅಥವಾ ಹಟ್ಟಿಗಳು ಅಥವಾ ಕ್ಯಾಂಪುಗಳು ಅಥವಾ ಹಾಡಿಗಳೆಂದು ಹೇಳುತ್ತೇವೆ. ಏಕೆಂದರೆ ಇಲ್ಲಿ ಚಾಮರಾಜನಗರಕ್ಕೆ ಸೇರಿದ ಆದಿವಾಸಿಗಳು ಇದ್ದಾರಲ್ಲ ಅವರೆಲ್ಲಾ ಹಾಡಿಗಳೆಂದು ಕರೆಯುತ್ತಾರೆ. ಹೈದರಾಬಾದ್ ಕರ್ನಾಟಕಕ್ಕೆ ಬಸ್ತಿಗಳೆಂದು ಹೇಳುತ್ತೇವೆ. ಇವೆಲ್ಲವು 28,000 ಇವೆ ಇವರ ಆರ್ಥಿಕ ಪರಿಸ್ಥಿತಿ, ಸಮಾಜಿಕ ಪರಿಸ್ಥಿತಿ ಬಗ್ಗೆ ವಿಶೇಷವಾದ ಅಧ್ಯಯನ ಆಗಬೇಕು. What is their condition and status? ಅವರಿಗೆ ಕುಡಿಯಲಿಕ್ಕೆ ನೀರು ಇದೆಯೇ? ಅವರಿಗೆ ರಸ್ತೆ ಇದೆಯೆ? ಅವರಿಗೆ ಶಿಕ್ಷಣ ಇದೆಯೆ? ಶಿಕ್ಷಣದಲ್ಲಿ ಹೈಯರ್ ಎಜುಕೇಷನ್ ಇದೆಯೇ? ಅವರಿಗೆ technical education ಇದೆಯೇ? ಅವರ ಆರೋಗ್ಯ ಏನಾಗುತ್ತಿದೆ? ಅವರಿಗೆ

ನ್ಯಾಯಬೆಲೆ ಅಂಗಡಿ ಇದೆಯೇ? ಅವರಿಗೆ postal ವ್ಯವಸ್ಥೆ ಇದೆಯೇ? ಆದರೆ ಅವರು ಓಟು ಕೊಡವಂಥ ವ್ಯವಸ್ಥೆ ಮಾತ್ರ ಇದೆ. ಆದರೆ facilities ಮಾತ್ರ ಇಲ್ಲ. ಆದ್ದರಿಂದ ನಾವು ಭೂ ಕಂದಾಯ ಶಾಸನಕ್ಕೆ ಒಂದು ವಿಶೇಷ ತಿದ್ದುಪಡಿ ತರಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆಸಕ್ತರಿದ್ದಾರೆ. ಕಾನೂನು ಮಂತ್ರಿಗಳು ಇದ್ದಾರೆ. ಅವರು ಆ ಪ್ರದೇಶದಿಂದ ಬಂದಿರತಕ್ಕವರಾಗಿದ್ದಾರೆ. ಬಹಳ ಜನ ಗೊಲ್ಲರು, ಲಂಬಾಣಿಗಳು ಒಡ್ಡರು, ಕೊರಮರು, ನಾಯಕರು ಹೀಗೆ ಎಲ್ಲರೂ ಓಟು ಹಾಕಿದ್ದಾರೆ. ಅವರೆಲ್ಲ ಪದೇ ಪದೇ ಕೇಳುತ್ತಿರುತ್ತಾರೆ. ಏನು ಸ್ವಾಮಿ, ನಾವೆಲ್ಲ second rate citizen, second rate ಗ್ರಾಮ ಇದ್ದ ಹಾಗೆ, ನಮಗೆ ಕಾನೂನು ಸ್ಥಾನಮಾನ ಕೊಡಬೇಕಾದರೆ special legislation ತರಬೇಕೆಂದು ಪದೇ ಪದೇ ಹೇಳುತ್ತಿರುತ್ತಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾದಂಥ ಒಂದು ಸಭೆ ಕರೆದಾಗ ನಮ್ಮ ಅಧಿಕಾರಿಗಳು ಅದರ ಬಗ್ಗೆ ಸರಿಯಾದ ಮಾಹಿತಿ ಕೊಡಲಿಲ್ಲ. ಮಾನ್ಯ ಅಧ್ಯಕ್ಷರೆ, ಆದ್ದರಿಂದ political will ಇದೆ, ಆದರೆ ಅದನ್ನು ಅನುಷ್ಠಾನ ಮಾಡುವಂಥಹ executiveಗೆ ಸರಿಯಾದ ರೀತಿಯ ಮನಸ್ಸು ಇರಬೇಕು. ಈವರೆಗೂ ಅಧಿಕಾರಿಗಳು ಮಾಹಿತಿ ಕೊಡಲಿಲ್ಲ.

ಛೇರ್‌ಮನ್:- ದಯವಿಟ್ಟು ಮುಗಿಸುತ್ತೀರಾ? ಊಟದ ಸಮಯವಾಗುತ್ತಿದೆ. ಕೊನೆಯ ಮಾತನ್ನು ಮುಗಿಸಿಬಿಡಿ.

ಶ್ರೀ ಕೆ. ಶಿವಮೂರ್ತಿ:- ತಮ್ಮ ಮೂಲಕ ನಮ್ಮ ಕಾನೂನು ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಇದನ್ನು ಕಾನೂನು ತರಬೇಕು, ಇದಕ್ಕೆ ಸ್ಥಾನಮಾನ ಕೊಡಬೇಕೆನ್ನುವ ಮಾತನ್ನು ತಮ್ಮ ಮುಂದೆ ಇಡುತ್ತಾ, 28 ಸಾವಿರ ಕುಗ್ರಾಮಗಳು, hamlets ಗಳು, 135 villages, ಸಣ್ಣ ಸಣ್ಣ ಊರುಗಳು, ಏನೂ ಕಾಣದೆ ಇರುವಂಥವು, ದಿಕ್ಕು-ದೆಸೆ ಇಲ್ಲದೇ ಇರುವಂಥವುಗಳಿಗೆ ತಾವು ದಯವಿಟ್ಟು ವಿಶೇಷವಾದ ಕಾನೂನನ್ನು ತರಲೇಬೇಕು. ಕಂದಾಯ ಶಾಸನವನ್ನು ಬದಲಾವಣೆ ಮಾಡಬೇಕೆನ್ನುವ ಮಾತನ್ನು ಹೇಳಿ, ನನಗೆ ಇಷ್ಟು ಮಾತನಾಡಲು ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಚೇರ್‌ಮನ್:- ಒಂದು ಪ್ರಕಟಣೆಯಿದೆ. ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯನವರು ಈ ದಿನ ಮಧ್ಯಾಹ್ನ 1-30 ಗಂಟೆಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾನ್ಯ ಸದಸ್ಯರುಗಳ ಗೌರವಾರ್ಥ ಭೋಜನ ಕೂಟವನ್ನು ಏರ್ಪಡಿಸಿರುತ್ತಾರೆ. ತಾವೆಲ್ಲರೂ ಭೋಜನ ಕೂಟದಲ್ಲಿ ಪಾಲ್ಗೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.

ಈಗ ಸದನವನ್ನು ಮಧ್ಯಾಹ್ನ 2 ಗಂಟೆ 50 ನಿಮಿಷಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಅಪರಾಹ್ನ 2 ಗಂಟೆ 50 ನಿಮಿಷಕ್ಕೆ ಸೇರುವಂತೆ ಮುಂದೂಡಲ್ಪಟ್ಟಿತು)

(ಸದನವು ಮಧ್ಯಾಹ್ನ 3-00 ಗಂಟೆಗೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಉಪಾಧ್ಯಕ್ಷರಾದ ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿಯವರು ಉಪಸ್ಥಿತರಿದ್ದರು)

ಉಪಾಧ್ಯಕ್ಷರು:- ಈಗ ಒಂದು ಬಿಲ್ ಇದೆ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೆ, ಅತ್ಯಂತ ಮಹತ್ವದ ವಿಚಾರವನ್ನು ಹೇಳಬೇಕಾಗಿದೆ.

ಉಪಾಧ್ಯಕ್ಷರು:- ಒಂದ್ನಿಮಿಷ. ಒಂದು ಬಿಲ್ ಇದೆ. ಅದನ್ನು ಮಂಡನೆ ಮಾಡಿಬಿಡಲಿ. ಆಮೇಲೆ ಮಾತನಾಡುವಿರಂತೆ.

ಶ್ರೀ ಗೋವಿಂದ ಎಂ. ಕಾರಜೋಳ:- ಈಗ ಕೇವಲ ಪ್ರಸ್ತಾಪ ಮಾಡಿಬಿಡುತ್ತೇನೆ. ಮುಧೋಳ ನಗರದ ಮುಂದೆ ಹರಿಯತಕ್ಕಂಥ ಘಟಪ್ರಭ ನದಿ ಕಲುಷಿತವಾಗಿ ಮೀನು, ಕಪ್ಪೆಗಳು, ಹಾವುಗಳು ಸತ್ತುಹೋಗಿವೆ. ಇದರಿಂದಾಗಿ ನೀರು ಮಲೀನವಾಗಿದೆ. ಅದಕ್ಕಾಗಿ ಹಿಡಕಲ್ ಜಲಾಶಯದಿಂದ 1.5 T,M,C ನೀರನ್ನು ಬಿಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ

ಮಾಡುತ್ತಿದ್ದೇನೆ. ಇದಕ್ಕೆ ಸರ್ಕಾರದ ವತಿಯಿಂದ ಯಾರಾದರೊಬ್ಬರು ಸಚಿವರು ಉತ್ತರ ಕೊಡಬೇಕು.

ಉಪಾಧ್ಯಕ್ಷರು:– ಶೂನ್ಯವೇಳೆಯಲ್ಲಿ ಚರ್ಚೆಗೆ ತೆಗೆದುಕೊಂಡಾಗ ಈ ಬಗ್ಗೆ ಮಾತನಾಡಿ.

ಶ್ರೀ ಗೋವಿಂದ.ಎಂ. ಕಾರಜೋಳ:– ಶೂನ್ಯವೇಳೆಯಲ್ಲಿ ವಿಷಯಗಳ ಚರ್ಚೆಗೆ ತೆಗೆದುಕೊಂಡಾಗ ನನಗೆ ಸರ್ಕಾರದಿಂದ ಉತ್ತರ ತರಿಸಿಕೊಟ್ಟರೆ ಸಾಕು.

ಉಪಾಧ್ಯಕ್ಷರು:– O.K.